
ಸಂಪುಟ 22 ಸಂಚಿಕೆ 11
ಮಾರ್ಚ್ 12, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪ್ರಜ್ಞಾರಂಗ

ಬಿಹಾರ: ಬಿಜೆಪಿ ಕೂಟದಿಂದ ಪ್ರಜಾಪ್ರಭುತ್ವದ ಕೊಲೆ



ಮಾ.8: ವಿಶ್ವ ಮಹಿಳಾ ದಿನ

ಆರೋಗ್ಯದ ರಾಜಕೀಯ - ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್

ಬಜೆಟ್: ದೇಶದ ಜನತೆ ವಿದೇಶಿ ಕಿರುಬಗಳ ದವಡೆಗೆ

ಕಾಂಗ್ರೆಸ್ ಆಡಳಿತದ ಬಗ್ಗೆ ಕಾದು ನೋಡುವ ಮನಸ್ಸು

ಉಪ ಚುನಾವಣೆ

ಅಷ್ಟಾಗಿ ಸದ್ದುಗದ್ದಲವಿಲ್ಲದೇ ಮುಗಿದು ಹೋದ ಬಳ್ಳಾರಿ ಪಾರ್ಲಿಮೆಂಟ್ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದೆ. ಹಿಂದಿನಂತೆ ಕಾಂಗ್ರೆಸ್‌ನ ಅಭ್ಯರ್ಥಿ ಕೋಳೂರು ಬಸವನಗೌಡರು ಆಯ್ಕೆಯಾಗಿದ್ದು, ಈ ವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಈ ಬಾರಿ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಸುಮಾರು 96 ಸಾವಿರ ಮತಗಳ ಅಂತರದಿಂದ ಗೆದ್ದಿದೆ. ಕಳೆದ ಬಾರಿ ಸಮರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಬಿಜೆಪಿಯ ಸುಷ್ಮಾ ಸ್ವರಾಜ್‌ನ ನಡುವೆ ಉಬ್ಬ್ರಾಯ ಘಟ್ಟದಲ್ಲಿ ನಡೆದು 56,100 ಮತಗಳ ಅಂತರದಿಂದ ಸೋನಿಯಾಗಾಂಧಿ ಗೆದ್ದಿದ್ದರು. ಮತದಾನವು ಶೇ 72 ರಷ್ಟು. ಆದರೆ ಈ ಬಾರಿ ಮತದಾನ ಹಿಂದೆಂದೂ ಕಂಡಿರದಂತೆ ಶೇ 41 ಕ್ಕೆ ಇಳಿದಿತ್ತು. ಈ ಸಲವೂ ಸಂಯುಕ್ತ ಜನತಾದಳವು ಆರಂಭದಲ್ಲಿ ಅಬ್ಬರಿಸಿ ಕೊನೆಗೆ ಬಿಜೆಪಿಗೆ ಸ್ಥಾನ ಬಿಟ್ಟುಕೊಟ್ಟು ಶರಣಾಯಿತು. ಬಳ್ಳಾರಿಯನ್ನು ಕೋಮುವಾದಿಗಳ ನೆಲೆಯನ್ನಾಗಿಸಲು ಇಷ್ಟೆಲ್ಲಾ ಪ್ರಯತ್ನಗಳು. ಹಿಂದಿನ ವಿಷಪೂರಿತ ಪ್ರಚಾರದ ಪ್ರವಾಹ ಇದ್ದರೂ ಇಲ್ಲಿಯ ಜನತೆ ಅವುಗಳನ್ನು ತಿರಸ್ಕರಿಸಿದರು. ಹಾಗೆ ನೋಡಿದರೆ ಬಿಜೆಪಿ ಕಳೆದ ಚುನಾವಣೆಯಲ್ಲಿ ಪಾರ್ಲಿಮೆಂಟ್ ವ್ಯಾಪ್ತಿಗೆ ಬರುವ ಕುರುಗೋಡು,

ಸಂಪಾದಕೀಯ

ಹಡಗಲಿ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗಿಂತ ಅಧಿಕಮತ ಗಳಸಿತ್ತು; ಆದರೆ ಈಬಾರಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿಯನ್ನು ಮೀರಿಸಿದೆ, ಒಟ್ಟಾರೆ ಫಲಿತಾಂಶವು ಜಿಲ್ಲೆಯನ್ನು ಕೋಮುವಾದಿಗಳ ನೆಲೆಯಾಗದಂತೆ ಅವರು ಮೇಲುಗೈ ಪಡೆಯದಂತೆ ಸ್ಪಷ್ಟ ನಿರ್ಧಾರವನ್ನು ಕೈಗೊಂಡಿದ್ದಾರೆ ಎಂಬುದು ನಿಚ್ಚಳ.

ಆದರೆ 'ಖ್ಯಾತ ನಾಟಕಕಾರರು' 'ನಟರು' ಎಂಬ ಬಹುಮುಖ ಪ್ರತಿಭೆಯ ಬಿರುದಾಂಕಿತ ಮಾಜಿ ಸಚಿವ ಎಂ.ಪಿ.ಪ್ರಕಾಶರು ಇದನ್ನು ಒಪ್ಪುವುದಿಲ್ಲ. ಈ ಫಲಿತಾಂಶ ಜನಾದೇಶವೇ ಅಲ್ಲ. ಶೇ 41 ಮತದಾನ ಜನಾದೇಶವಾದರೂ ಆದೀತು ಹೇಗೆ? ಎಂದು ಮುಗ್ಧ ಪ್ರಶ್ನೆ ಮುಂದೊಡ್ಡುತ್ತಾರೆ. 'ಬಿಜೆಪಿಗಿಂತ ಸಂಯುಕ್ತ ಜನತಾದಳಕ್ಕೆ ಜನತೆಯ ಒಲವು' ಎಂದು ವಾದಿಸುತ್ತಾರೆ. ಭಂಡತನವೆಂದರೆ ಹೀಗಿರಬೇಕು ಅನಿಸುತ್ತದೆ. "...ನೆಲಕಚ್ಚಿದರೂ ಮೀಸೆ ಮಣ್ಣಾಗಲಿಲ್ಲವಲ್ಲ! ಎಂದು ಕೊಡವಿಕೊಂಡು ಬಿಡುವುದು. ಆರಂಭದಲ್ಲಿ ಹೂಂಕರಿಸಿ, ಒಳಗೆ ಒಪ್ಪಂದಗಳಾದ ನಂತರ ಬಿಜೆಪಿ ಕೋಮುವಾದಿಗಳಗೆ ಜೊತೆಗೆ ಕೈ ಜೋಡಿಸಿದ ತಮಗೆ ಜನ ಮುಖಕ್ಕೆ ಹೊಡೆದು ಪಾಠ ಕಳಿಸಿದ್ದಾರೆ ಎಂಬ ಆತ್ಮವಿಮರ್ಶೆ ಇನಿತು ಇಲ್ಲ. ಆತ್ಮಗಳನ್ನು ಅಡವಿಟ್ಟವರಿಗೆ ಇವೆಲ್ಲಾ ಕಾಣುವುದಿಲ್ಲ.

ಈ ಸಲ ಮತದಾನದಲ್ಲಿ ಹಿಂದಿನಂತೆ ಉತ್ಸಾಹ ಕಂಡುಬರಲಿಲ್ಲ. ಮತದಾನ ತೀರಾ ನಿರುತ್ಸಾಹದಾಯಕವಾಗಿತ್ತು. ಒಂದು ರೀತಿಯಲ್ಲಿ ಇಂದಿನ ಕಾಂಗ್ರೆಸ್-ಬಿಜೆಪಿಗಳ ರಾಜಕೀಯಕ್ಕೆ ಬೇಸತ್ತಿದ್ದಾರೋ, ಮತ್ತೆ ಮತ್ತೆ ಚುನಾವಣೆಗಳು ಬರುತ್ತಿರುತ್ತವೆ ಎಂದು ಪ್ರತಿಕ್ರಿಯಿಸಿದ್ದಾರೋ ಎನಿಸುತ್ತದೆ. ಬಹುತೇಕ ಮಧ್ಯಮವರ್ಗದವರು ಅಷ್ಟಾಗಿ ಮತದಾನಕ್ಕೆ ಬಂದಿಲ್ಲ. ವಿಶೇಷವಾಗಿ ಕಳೆದ ಬಾರಿ ಬಿಜೆಪಿ ಹರಿಸಿದ ಹಣ, ಹೆಂಡದ ಹೊಳೆ ರಾಜ್ಯ ಮತ್ತು ಹೊರ ರಾಜ್ಯಗಳಿಂದ ಬಂದ ಸಾವಿರ ಸಾವಿರ ಸಂಘ ಪರಿವಾರದ ತಂಡಗಳು, ಅದರ ವಿಷ ಪ್ರಚಾರ, ಮಾಧ್ಯಮಗಳ ಬಡಿತ ಹೆಚ್ಚಾಗಿತ್ತು. ಮತ್ತು ಸಂಘ ಪರಿವಾರ ಯಥೇಚ್ಛವಾಗಿ ಖೋಟಾ ಮತದಾನವನ್ನು ನಡೆಸಿತ್ತು.

ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೇರಿದುದು ಈ ಸಲ ಅಭ್ಯರ್ಥಿಯ ನೆರವಿಗೆ ಬಂದಿದೆ. ಕೃಷ್ಣರ ಸರ್ಕಾರದ ಆಡಳಿತದಿಂದ ಜನತೆ ಸಂತೋಷಗೊಂಡಿಲ್ಲವಾದರೂ ಕಾಯ್ದು ನೋಡುವ ಮನೋಸ್ಥಿತಿಯಲ್ಲಿ ಇರುವುದು ಕಂಡಿದೆ.

ಈ ಚುನಾವಣೆಯಲ್ಲಿ ಬಿಜೆಪಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೆಯ ಶಕ್ತಿಯುನ್ನು ಜನರ ಮುಂದೆ ಗುರುತಿಸಿಕೊಂಡಿದೆ. ಜನತಾದಳ(ಎಸ್), ಸ್ಪರ್ಧೆಯಲ್ಲಿದ್ದು, ಸಿಪಿಐ(ಎಂ) ಬೆಂಬಲಿಸಿ, ಪ್ರಚಾರಿಸಿದೆ. ಕಳೆದ ಬಾರಿ 22,000 ಮತ ಗಳಿಸಿದ ಜನತಾದಳ(ಎಸ್) ಈ ಸಲ 35 ಸಾವಿರ ಮತ ಪಡೆದಿದೆ. ಜಿಲ್ಲೆಯಲ್ಲಿ ಸಂಯುಕ್ತ ಜನತಾದಳ ಬಿಜೆಪಿಯೊಂದಿಗೆ ತಾಳ ಹಾಕುತ್ತಿದ್ದು, ಕೆಲವು ಜನ ಜೆ.ಡಿ(ಎಸ್)ನತ್ತ ಬಂದಿರುವುದು ಕಾಣಬಹುದು. ಸಂಘಟನಾತ್ಮಕವಾಗಿ ಈ ಪಕ್ಷ ಸ್ವಲ್ಪ ಚೇತರಿಸಿಕೊಂಡಂತೆ ಕಾಣುವುದು.

ವಿಶೇಷವೆಂದರೆ ಬಹುಜನ ಸಮಾಜ ಪಕ್ಷವು 22 ಸಾವಿರ ಮತ ಮೊದಲ ಬಾರಿಗೆ ಗಳಿಸಿರುವುದು. ಅದರಲ್ಲೂ ಕುರುಗೋಡು ಕ್ಷೇತ್ರದಲ್ಲಿ ಉಳಿದೆಡೆಗಿಂತ ಅಧಿಕಮತಗಳಿಸಿದೆ. ಬಿಎಸ್‌ಪಿಯ ಪ್ರಚಾರ-ಕಾರ್ಯ ಪೂರ್ಣವಾಗಿ ಜಾತಿ ಆಧಾರಿತವಾಗಿತ್ತು.

ಬಳ್ಳಾರಿ ಜನತೆ ಕೇಳುತ್ತಿರುವುದು, ಕಾಂಗ್ರೆಸ್ ಜನರ ನಿರೀಕ್ಷೆಯಂತೆ ಕೆಲಸ ಮಾಡುವುದೇ? ಎಂದು. ಈ ಫಲಿತಾಂಶದ ನಡುವೆಯೂ ಬಿಜೆಪಿ ಆಟಾಟೋಪ ನಿಂತಿಲ್ಲ. ಬಿಜೆಪಿಯನ್ನು ಕೇವಲ ಚುನಾವಣೆಗೆ ಮಾತ್ರವೇ ಸೀಮಿತವೆಂದು ಭಾವಿಸಬೇಕಿಲ್ಲ. ಈಗಾಗಲೇ ಚುನಾವಣೆಯಲ್ಲಿ ಬಂದಿರುವ ಸಂಪರ್ಕಗಳನ್ನು ಸಂಘಟನಾತ್ಮಕವಾಗಿ ಪರಿವರ್ತಿಸಲು ಆರ್‌ಎಸ್‌ಎಸ್ ಮುಂದಾಗಿದೆ. ಅದರ ಸಂಚಾಲಕರು ಇತ್ತೀಚೆಗೆ ಬಹಿರಂಗಗೊಳಿಸಿದಂತೆ 50 ಪೂರ್ಣ ಪ್ರಮಾಣದ ಶಾಖೆಗಳು ಹೊಸದಾಗಿ ಕಾರ್ಯನಿರ್ವಹಿಸುತ್ತಿದ್ದು, ಹಳ್ಳಿ ಹಳ್ಳಿಗಳತ್ತ ಜಾಲ ಹಬ್ಬುತ್ತಿದೆ. ಅವರೆಲ್ಲರಿಗೆ ಮೊದಲ ಹಂತದ ತರಬೇತಿಯೂ ಮುಗಿದಿದ್ದು, ಉನ್ನತ ಮಟ್ಟದ ತರಬೇತಿ ಕೊಡಲಾಗುವುದು ಎಂದಿದ್ದಾರೆ. ವಿಶೇಷವಾಗಿ ಯುವಜನ, ಮಹಿಳೆಯರು ಈ ಜಾಲದಲ್ಲಿದ್ದಾರೆ ಎಂದಿದ್ದಾರೆ. ಇದು ಅತ್ಯಂತ ಗಂಭೀರವಾದ ಅಪಾಯಕಾರಿ ಬೆಳವಣಿಗೆ. ಎಲ್ಲಾ ಮತ ನಿರಪೇಕ್ಷಿತ ಶಕ್ತಿಗಳು ಜಾಗೃತರಾಗಬೇಕಿದೆ.

ವಿದ್ಯಾರ್ಥಿನಿಯರ ಕಣ್ಣೀರು: ವರ್ಷ ಮುಗಿದರೂ ಉಡುಪು ನೀಡದ ಸರ್ಕಾರ

ಹಲವಾರು ಹಳ್ಳಿಗಳಲ್ಲಿ ಸರಿಯಾದ ಶಾಲೆಗಳ ಸೌಲಭ್ಯವಿಲ್ಲ. ಆದರೂ ನಮ್ಮ ಮಕ್ಕಳು ನಮ್ಮಂಥೆ ಅವಿದ್ಯಾವಂತ ರಾಗಬಾರದು ಬುದ್ಧಿವಂತರಾಗಲಿ. ಎಂದು ಎಷ್ಟೆ ಕಷ್ಟಗಳಿದ್ದರು ಅವೆಲ್ಲವನ್ನು ಸಹಿಸಿ ಕೊಂಡು ಮಕ್ಕಳನ್ನು ಅತ್ಯಲ್ಪ ಕೂಲಿಯಲ್ಲಿ ಓದಿಸಲು ಆಗುವುದಿಲ್ಲವೆಂದು ತಿಳಿದು ತಮ್ಮ ಮಕ್ಕಳ ಓದಿ ಬುದ್ಧಿವಂತರಾಗಲಿ ಎಂದು ಹಾಸ್ಟಲ್‌ಗಳಿಗೆ ಸೇರಿಸುತ್ತಾರೆ. ತಂದೆ ತಾಯಿಗಳನ್ನು ಬಂದು ಬಳಗವನ್ನು ಎಲ್ಲರನ್ನು ಬಿಟ್ಟು ವಿದ್ಯಾಭ್ಯಾಸ ಪಡೆಯಲು ಬಂದ ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳಲ್ಲಿ ಯಾವ ರೀತಿಯ ಸೌಲಭ್ಯವಿರುತ್ತದೆ ಎಂದರೆ. ನಾಯಿ ನರಿಗಳಿಗಾಕಿದರೂ ತಿನ್ನಲೊಲ್ಲದ ಅನ್ನ ಬೇಳೆಯೇ ಇಲ್ಲದ ಯಾರಿಗೂ ಬೇಡವಾದ ತರಕಾರಿಗಳನ್ನು ತಂದು ಬೇಯಿಸಿ ಸಾಂಬಾರಿನ ನೈಜಸ್ಥಿತಿ ತಿಳಿಯ ಬಾರದೆಂದು ಅವೆಲ್ಲವನ್ನು ರುಬ್ಬಿ ಕುದಿಸಿ ಬಿಟ್ಟು ಅದರಲ್ಲಿ ಜೋಳದ ಅಥವಾ ಅಕ್ಕಿ ಇಟ್ಟನ್ನು ಬೆರೆಸಿ ಸಾಂಬಾರು ಮಾಡಿ ಹಾಕುತ್ತಾರೆ. ಇದರಿಂದ ವಿದ್ಯಾರ್ಥಿಗಳ ಆರೋಗ್ಯ ಕೆಮ್ಮು ಜ್ವರ ಹೊಟ್ಟೆನೋವು ಬಂದು ಹಾಸ್ಟಲಿನ ನಿಲಯ ಪಾಲಕರಿಗೆ ತಿಳಿಸಿದರೆ ಊರಿಗೆ ಹೋಗಿ ತೋರಿಸಿಕೊಂಡು ಚೆನ್ನಾಗಿ ಆದ ಮೇಲೆ ಬನ್ನಿರಿ ಎಂದು ಹೇಳುತ್ತಾರೆ. ಏತಕ್ಕಾಗಿ ವಿದ್ಯಾರ್ಥಿಗಳ ಆರೋಗ್ಯ ಕೆಡುತ್ತಿದೆ ಎಂದು ಯೋಚಿಸುವವರು ಯಾರೂ ಇಲ್ಲ. ಅಷ್ಟು ಮಾತ್ರ ಅಲ್ಲ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಜಿಲ್ಲಾ ಪಂಚಾಯ್ತಿ ವತಿಯಿಂದ ಸಮವಸ್ತ್ರ ವಿತರಣೆ ಮಾಡುತ್ತಿದ್ದರು. ಈ ಬಾರಿ ಇನ್ನೂ ವಿತರಣೆ ಮಾಡಿಲ್ಲ;- ಹಾಸ್ಟೆಲ್ ವಿದ್ಯಾರ್ಥಿಗಳು ಹಳ್ಳಿಗಳಿಂದ ಬಂದವರು ಇವರ ಪರಿಸ್ಥಿತಿ ಹೇಗಿದೆ ಎಂದು ಯೋಚನೆಮಾಡಿದರೆ ನಿಜಕ್ಕೂ ಮೈ ಜುಮ್ಮೆನ್ನುತ್ತದೆ. ಹಾಸ್ಟೆಲ್‌ಗಳಿಗೆ ಬಂದ ವಿದ್ಯಾರ್ಥಿಗಳ ತಂದೆತಾಯಿಗಳು ತಮ್ಮ ಮಕ್ಕಳಿಗೆ ತಮ್ಮ ದುಡಿದ ಕೂಲಿಯಿಂದ ಒಂದು ಜೊತೆ ಬಟ್ಟೆಯನ್ನು ಕೊಡಿಸಲಾಗದ ಪರಿಸ್ಥಿತಿ ಇದೆ. ಆದುದರಿಂದ ವಿದ್ಯಾರ್ಥಿಗಳನ್ನು ಹಾಸ್ಟೆಲ್‌ಗೆ ಬಿಟ್ಟಿರುತ್ತಾರೆ. ಇಂತಹ ಅಲವಾರು ಜ್ವಲಂತ ಸಮಸ್ಯೆಗಳ ಸಾಗರದ ಮಧ್ಯೆ ಸಿಲುಕಿ ಒದ್ದಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಕ್ಕೆ SFI ನಿಯೋಗ ಬೇಟಿಕೊಟ್ಟಾಗ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಹೇಳಲು ಹಿಂಜರಿಯುತ್ತಿದ್ದರು ಆಗ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು SFI ಹೋರಾಟ ಮಾಡಲು ಸಿದ್ಧವಿದೆ. ನೀವು ಯಾರಿಗೂ ಹೆದರಬೇಕಾಗಿಲ್ಲ ನೀವು ನಿಮ್ಮ ಸಮಸ್ಯೆಯನ್ನು ನಿರ್ಭಯವಾಗಿ ಹೇಳಿರಿ ಎಂದಾಗ ವಿದ್ಯಾರ್ಥಿ /ವಿದ್ಯಾರ್ಥಿನಿಯರ ಕಣ್ಣುಗಳಲ್ಲಿ ಕಣ್ಣೀರು ತಾನೇ ತಾನಾಗಿ ಉದುರುತ್ತಿದ್ದವು. ಯಾಕೆ ಅಳಿರಿ ಎಂದಾಗ ನಾವು ಹೆಣ್ಣುಮಕ್ಕಳು ಹೇಗೆ ಹೇಳೋಣ ನಿಮ್ಮ ಮುಂದೆ ಎಂದಾಗ SFI ನಿಯೋಗದ ನಾಯಕರು ನಾವು ನಿಮ್ಮ ಅಣ್ಣಂದಿರು ನೀವು ನಮ್ಮ ತಂಗಿಯರು ನಾಚಿಕೆ ಬೇಡ ಹೇಳಿರಮ್ಮ ಎಂದು ಕೇಳಿದಾಗ ಹರಿದು ಚಿಂದಿಯಾದ ಬಟ್ಟೆಯನ್ನುಟ್ಟ ವಿದ್ಯಾರ್ಥಿನಿಯೊಬ್ಬರು ಮುಂದೆ ಬಂದು ಅಣ್ಣಾ ಹರಿದು ಚಿಂದಿಯಾದ ಈ ಬಟ್ಟೆಗಳನ್ನು ನಾಲ್ಕಾರು ಕಡೆಗಳಲ್ಲಿ ಹೊಲಿದು ಉಟ್ಟುಕೊಂಡಿದ್ದೇನೆ. ಶಾಲೆಗೆ ಹೋಗಿ ಗೆಳತಿಯರ ಪಕ್ಕದಲ್ಲಿ ಕೂಡಬೇಕೆಂದರೆ ಅಳುಕು ಬರುತ್ತದೆ ಏಕೆಂದರೆ ಅವರು ಎಲ್ಲರೂ ಚೆನ್ನಾಗಿ ಬರುತ್ತಾರೆ ಅವರನ್ನು ಮಾತಾಡಿಸಲು ನಾನು ಯೋಗ್ಯಳೇ ಎಂದು ಯೋಚಿಸುತ್ತೇನೆ. ನಮ್ಮ ಮನೆಯಲ್ಲಿ ತಿಳಿಸಿದರೆ ಅಮ್ಮ ನಿನಗೆಲ್ಲಿ ಬಟ್ಟೆ ತರುವುದು ಬಂದ 10,12 ರೂ ಕೂಲಿಯಲ್ಲಿ ನಿಮ್ಮ ತಂಗಿ ತಮ್ಮಂದಿರನ್ನು ಸಾಕಬೇಕಮ್ಮ, ನನ್ನ ಸೀರೆಯೂ ಹರಿದಿದೆ ಎಂದು ಹರಿದ ಸೀರೆಯನ್ನು ತೋರಿಸಿ ತಾಯಿಯೂ ಅಳುತ್ತಾಳೆ. ಎಂದು ದುಃಖಿಸುತ್ತ ಮುಂದುವರೆದು ಹೇಳುತ್ತಾ ನಾನು ಪಠ್ಯ ಪುಸ್ತಕಗಳನ್ನು ಅವರಿವರ ಬಳಿ ಸಂಗ್ರಹಿಸಿ ಕೊಂಡೆ ಆದರೆ ಬಟ್ಟೆ ಯಾರನ್ನು ಕೇಳಬೇಕು. ನನ್ನಂತೆ ಈ ಹಾಸ್ಟೆಲ್‌ನಲ್ಲಿರುವ ಎಲ್ಲಾ ವಿದ್ಯಾರ್ಥಿಯರ ಪರಿಸ್ಥಿತಿ ಇದೇ ಆಗಿದೆ ಎಂದಾಗ ಎಲ್ಲಾ ವಿದ್ಯಾರ್ಥಿಯರು ದುಃಖಿ ಸುತ್ತ ಹೌದು ಅಣ್ಣನವರೇ ನಮ್ಮೆಲ್ಲರ ಬಾಳು (ಪರಿಸ್ಥಿತಿ) ಇದೇ ಆಗಿದೆ ನಾವೇನಾದರೂ ಯಾರಾದರೂ ಹಾಸ್ಟೆಲ್ಗೆ ಬಂದಾಗ ಹೇಳಿದರೆ ಬಂದವರು ಹೋದ ಮೇಲೆ ಹೇಗೆ ಹೇಳುತ್ತೀರಾ ಎಂದು ಹೊಡೆಯುವುದು ಬೈಯುವುದು ಮಾಡುತ್ತಾರೆ ಅಣ್ಣ ಹೇಗಾದರೂ ಮಾಡಿ ನಮಗೆ ಪ್ರತಿವರ್ಷವು ಕೊಡುವ ಬಟ್ಟೆಗಳನ್ನು ಕೊಡಿಸಿರಿ SFI ಹೋರಾಟ ಮಾಡಿ ಬಟ್ಟೆ ಕೊಡಿಸುತ್ತದೆಂಬ ಭರವಸೆ ನಮಗಿದೆ ಎಂದರು. ಅಲ್ಲದೆ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯದಲ್ಲಿ ಇದೇ ಸಮಸ್ಯೆ ಅಲಿ ಕೇಳುವಾಗ ಅಣ್ಣಾ ನಾವು ಬಡವರು. ಯಾರಿಗೂ ಬೇಡವಾದ ಮುಳ್ಳಕ್ಕಿಯ ಅನ್ನ ತಿನ್ನುವವರು ಮಾರ್ಕೆಟಿನಲ್ಲಿ ದನಗಳೂ ತಿನ್ನಲೊಲ್ಲದ ತರಕಾರಿಯ ಸಾರು ಉಣ್ಣುವವರು ಅಷ್ಟೇ ಅಲ್ಲ, ಇತ್ತಕಡೆ ನೋಡಿ ಸರಿಯಾದ ಒಂದು ಜೊತೆ ಬಟ್ಟೆಯೂ ನಮಗಿಲ್ಲ ಹರಿದು ಚಿಂದಿಯಾದ ಅಂಗಿ ಪ್ಯಾಂಟ್‌ನ್ನು ಸೂಜಿ ದಾರಗಳಿಂದ ಹೊಲಿದು ಕೊಂಡು ಉಟ್ಟು ಶಾಲೆಗೆ ಹೋಗುವುದಾದರೂ ಹೇಗೆ ಇದಕ್ಕೆ ಪರಿಹಾರವೇ ಇಲ್ಲವೇನಣ್ಣ ಎಂದು ಕೇಳಿದರು. ಅಷ್ಟರಲ್ಲಿ ಒಬ್ಬ ವಿದ್ಯಾರ್ಥಿ ಮುಂದೆ ಬಂದು ಅಣ್ಣ ನಾವು ಬಹಳ ಬಡವರು ನನಗೆ ಓದಲು ಪುಸ್ತಕಗಳಿರಲಿಲ್ಲ ಶಾಲೆಗೆ ಫೀಸು ಕಟ್ಟಲು ಹಣ ಇರಲಿಲ್ಲ. ಶಿಕ್ಷಕರೊಬ್ಬರು ಫೀಜುಕಟ್ಟಿ ಪುಸ್ತಕ ಕೊಡಿಸಿದ್ದಾರೆ ದಯಮಾಡಿ ನಮಗೆ ಈ ವರ್ಷ ಬಟ್ಟೆ ಬಂದಿಲ್ಲ ಬಟ್ಟೆಗಾಗಿ ಹೋರಾಟ ಮಾಡೋಣವೇ ಎಂದರು. ಇಷ್ಟೆಲ್ಲಾ ಹೇಳುತ್ತಾ ದಯಮಾಡಿ ನಾವೇಳಿದೆವೆಂದು ವಾರ್ಡನ್ ಬಳಿ ತಿಳಿಸದಿರಿ ಕುಡಿದ ಅಮಲಿನಲ್ಲಿಯಾವುದೋ ನೆಪಹೇಳಿ ಹೊಡೆಯುತ್ತಾನೆ ಎಂದರು.

ಆಗ ಹಾಸ್ಟೆಲಿಗೆ ಬೇಟಿ ನೀಡಿ SFI ನಿಯೋಗ ಎಲ್ಲಾ ವಿದ್ಯಾರ್ಥಿಗಳನ್ನು ಸೇರಿಸಿ ಹಾಸ್ಟೆಲ್‌ಗಳಲ್ಲಿ ಸಭೆಗಳನ್ನು ನಡೆಸಿ ತಕ್ಷಣವೇ ಸರಿಯಾದ ಎರಡು ಜೊತೆ ಬಟ್ಟೆ ವಿತರಣೆಗಾಗಿ SFI ನೇತೃತ್ವದಲ್ಲಿ ಹೋರಾಡೋಣ ವಾರ್ಡನ್‌ಗಳ ನಿಮ್ಮನ್ನು ಬಯ್ಯುವುದು ಹೊಡೆಯುವುದು ಮಾಡಿದಲ್ಲಿ ಅವರ ವಿರುದ್ಧವೇ ಹೋರಾಡೋಣ ನಿಮಗೇನಾದರೂ ಮಾಡಿದರೆ ಕರ್ನಾಟಕ ರಾಜ್ಯದ್ಯಂತ SFI ಸಂಘಟನೆ ಬೀದಿಗಿಳಿದು ಇಂತವರ ವಿರುದ್ಧ ಹೋರಾಡುತ್ತದೆ ಧೈರ್ಯವಾಗಿರಿ ನಾವಿದ್ದೇವೆ ಎಂದು ತಿಳಿಸಿದರು. ಹೋರಾಡುವ ದಿನಾಂಕವನ್ನು ನಿಗದಿಗೊಳಿಸಿ ದಿನಾಂಕ 9/2/ 2000 ರಂದು ಹೊಸಪೇಟೆಯಲ್ಲಿ ಬಟ್ಟೆ ವಿತರಣೆಗಾಗಿ ಒತ್ತಾಯಿಸಿ ನಗರದ ಸಣ್ಣಕ್ಕಿ ವೀರಭದ್ರ ದೇವಸ್ಥಾನದಿಂದ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಗರದ ಪ್ರಮುಖ ಬೀದಿ ಬೀದಿಗಳಲ್ಲಿ ನೂರಾರು ಬಾವುಟಗಳನ್ನು ಹಿಡಿದು ಬಟ್ಟೆಕೊಡಿ ಇಲ್ಲವೇ ಅಧಿಕಾರ ಬಿಡಿ ಹೀಗೆ ಹಲವಾರು ಪ್ಲೆ ಕಾರ್ಡ್‌ಗಳನ್ನು ಹಿಡಿದು ವೈವಿಧ್ಯಮಯ ಘೋಷಣೆಗಳನ್ನು ಕೂಗುತ್ತ ಮೆರವಣಿಗೆಯಲ್ಲಿ ತೆರಳಿ ತಾಲ್ಲೂಕು ಪಂಚಾಯ್ತಿಯ ಮುಂದೆ ಸಮಾಜ ಕಲ್ಯಾಣ ಮಂತ್ರಿ ಕಾಗೋಡು ತಿಮ್ಮಪ್ಪನವರ ಪ್ರತಿಕೃತಿಯನ್ನು ದಹನಮಾಡಿ ತಾಲೂಕು ಪಂಚಾಯಿತು ಅಧ್ಯಕ್ಷರಿಗೆ ಮನವಿ ಅರ್ಪಿಸಲಾಯಿತು ಮನವಿ ಸ್ವೀಕರಿಸಿದ ಅಧ್ಯಕ್ಷರು ತಕ್ಷಣವೇ ಸಮಸ್ಯೆಯನ್ನು ಬಗೆಹರಿಸುತ್ತೇನೆ ಸಮವಸ್ತ್ರದ ವ್ಯವಸ್ಥೆ ಒಂದು ವಾರದೊಳಗೆ ಮಾಡುತ್ತೇವೆ ಎಂದು ತಿಳಿಸಿದರು.

ನಂತರ ಸಭೆಯನ್ನು ಉದ್ದೇಶಿ ಮಾತನಾಡಿದ ಡಿ ವೆಂಕಟರಮಣ ಸಿಐಟಿಯು ಲೀಡರ್, ಜಂಬಯ್ಯನಾಯಕ, ಟಿ.ಜಿ ಗಂಗಾಧರ, ಎ.ಕೆ. ಉದೇದಪ್ಪ ಹಾಗೂ ಜಿಲ್ಲಾ ಅಧ್ಯಕ್ಷರಾದ ರಮೇಶ್ ಕೆ. ಮಾತನಾಡಿ ತಕ್ಷಣವೇ ಸರಿಯಾಗಿ ಎರಡು ಜೊತೆ ಬಟ್ಟೆ ಕೊಡಬೇಕು ಒಂದುವೇಳೆ ಕಳಪೆ ಮಟ್ಟದ ಬಟ್ಟೆ ಕೊಟ್ಟರೆ ನಿಮ್ಮ ಮುಂದೆಯೇ ತಂದು ಸುಡುತ್ತೇವೆ ವಿಳಂಬ ಮಾಡದೆ ಒಳ್ಳೆಯ ಬಟ್ಟೆಕೊಡಿ ಇಲ್ಲವಾದರೆ ಇಡೀ ಜಿಲ್ಲೆಗೆ ಬರುವ ಯಾವುದೇ ಮಂತ್ರಿಯನ್ನು ಬಿಡುವುದಿಲ್ಲ ಘೆರಾವು ಮಾಡುತ್ತೇವೆ ಎಂದರು. ಹೋರಾಟದ ನೇತೃತ್ವವನ್ನು ಶ್ರೀಪಾದ ಪವನ ಕುಮಾರ್, ಮಂಜುನಾಥ, ಸಂಗೀತ ಶ್ರೀದೇವಿ ವಹಿಸಿದ್ದರು.

SFI ನ ಈ ಹೋರಾಟ ನಡೆದ ಮೇಲೆ ಹಾಸ್ಟೆಲಿಗೆ ಬಂದು ವಿದ್ಯಾರ್ಥಿಗಳ ಅಳತೆ ತೆಗೆದುಕೊಂಡು ಹೋಗಿದ್ದಾರೆ. ಆದರೆ ಇನ್ನು ವಿಳಂಬವಾಗಬಾರದು ತಕ್ಷಣವೇ ಜಿಲ್ಲೆಯಾದ್ಯಂತ ಬಟ್ಟೆ ವಿತರಣೆಯು ಆಗಬೇಕು ತಡವಾದರೆ ಉಗ್ರ ಹೋರಾಟ ಅನಿವಾರ್ಯ.

ಸಂವಿಧಾನ ಪರಾಮರ್ಶೆ: ದಲಿತ ಚಳುವಳಿಕಾರನ ಮರಣ

ಸಂವಿಧಾನ ಪರಾಮರ್ಶೆಯ ವಿರುದ್ಧ ಚಳುವಳಿ ಮಾಡುತ್ತಿದ್ದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ಮೇಲೆ ಪೋಲೀಸರು ನಡೆಸಿದ ಅಮಾನುಷ ದಾಳಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸಿದೆ. ಬೆಂಗಳೂರಿನಲ್ಲಿ ನಡೆಯುವ ಪ್ರಜಾಸತ್ತಾತ್ಮಕ ಪ್ರತಿಭಟನೆಗಳ ಮೇಲೆ ಹೇರಲ್ಪಡುತ್ತಿರುವ ನಿರ್ಬಂಧಗಳು ಪ್ರಮಾಣದ ಸಂಕೇತವು ಇದಾಗಿದೆ.

ಸಂವಿಧಾನದ ಪರಾಮರ್ಶೆ ವಿಷಯದಲ್ಲಿ ಒಬ್ಬ ದಲಿತ ಮೊದಲ ಬಲಿಯಾಗಿರುವುದನ್ನು ಗಮನಿಸಿದರೆ, ಈ ವಿಷಯವು ಎಷ್ಟು ಗಂಭೀರ ಸ್ವರೂಪ ದ್ದೆಂಬುದನ್ನು ಸೂಚಿಸುತ್ತದೆ. ಕರ್ನಾಟಕ ರಾಜ್ಯ ಸರಕಾರದ ಸೂತ್ರ ಹಿಡಿದ ಕಾಂಗ್ರೆಸ್ ಪಕ್ಷವು ಸಂವಿಧಾನದ ಪರಾಮರ್ಶೆಯನ್ನು ವಿರೋಧಿಸುತ್ತಿದ್ದರೂ ಅವರ ಸರಕಾರ

ಬೆಂಗಳೂರಿನಲ್ಲಿ ಸರಕಾರದ ಪೋಲೀಸ್ ನೀತಿಯನ್ನು ತೀವ್ರ ಮಾರ್ಪಾಡು ಮಾಡುವ ಅಗತ್ಯ ಯನ್ನು ಸೂಚಿಸುತ್ತದೆ ಎಂದು ಪತ್ರಿಕಾ ಹೇಳಿಕೆ ತಿಳಿಸಿದೆ. ಚಳುವಳಿ ಯ ಹೋರಾಟ ಮಾಡುತ್ತಾ ಸಾವಿಗೀಡಾದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ ನಾಗರಾಜು ಅವರಿಗೆ ಸಿಪಿಐ(ಎಂ)

ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮೂಲೆಗುಂಪು

ಬಿಹಾರದಲ್ಲಿ ರಾಜ್ಯಪಾಲರಿಂದ ಪ್ರಜಾಪ್ರಭುತ್ವದ ಕಗ್ಗೊಲೆ

ಬಿಹಾರ, ಒರಿಸ್ಸಾ, ಹರಿಯಾಣ ಮತ್ತು ಮಣಿಪುರ ಶಾಸನಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿ ಸಂಪೂರ್ಣ ಮೂಲೆಗುಂಪಾದರೂ ಕೇಂದ್ರದಲ್ಲಿ ತನ್ನಲ್ಲಿರುವ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಬಿಹಾರದ ರಾಜ್ಯಪಾಲರ ಮೂಲಕ 'ಮೈನಾರಿಟಿ' ಎನ್.ಡಿ.ಎ. ಸರಕಾರವನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನಿಸುತ್ತಿದೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಎಲ್ಲಾ ವಿರೋಧಿ ಪಕ್ಷಗಳು ಸಂಸತ್ತಿನ ಒಳಗೆ ಮತ್ತು ಹೊರಗೆ, ಬಿಹಾರ ರಾಜ್ಯದ ಎಲ್ಲೆಡೆಯಲ್ಲಿ ಪ್ರತಿಭಟನೆಯನ್ನು ನಡೆಸುತ್ತಿವೆ.

ಬಿಹಾರ ಶಾಸನ ಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆ 324. ಯಾವುದೇ ಪಕ್ಷ ಅಧಿಕಾರಕ್ಕೆ ಬರಲು 163 ಸದಸ್ಯರ ಬೆಂಬಲ ಅಗತ್ಯ. ಕೇಂದ್ರ ಸರಕಾರಿ ನಿಯಂತ್ರಿತ ದೂರದರ್ಶನವು ಬಿತ್ತರಿಸಿದ ಸಮೀಕ್ಷೆ ಪ್ರಕಾರ ಎನ್.ಡಿ.ಎ. ನಿಚ್ಚಳ ಬಹುಮತ ಬರುವುದೆಂದು ಸಾರಿ ಹೇಳಿತ್ತು. ಆದರೆ ಹಾಗಾಗಲಿಲ್ಲ. ಕೋಮುವಾದಿಗಳನ್ನು ಸೋಲಿಸಿ, (ಹೊಸ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸುವ) ಘೋಷಣೆಯೊಂದಿಗೆ ರಾಷ್ಟ್ರೀಯ ಜನತಾದಳವು ಸಿಪಿಐ(ಎಂ)ನೊಂದಿಗೆ ಮೈತ್ರಿ ಮಾಡಿಕೊಂಡ ಹಿನ್ನೆಲೆಯಲ್ಲಿ ಜೆ.ಡಿ. 123 ಸ್ಥಾನಗಳನ್ನು ಸಿಪಿಐ(ಎಂ) 2 ಸ್ಥಾನಗಳನ್ನು ಪಡೆದು ಚುನಾವಣೆಗಳಿಗಿಂತ ಮೊದಲು ಹೊಂದಾಣಿಕೆ ಮಾಡಿಕೊಂಡ ಗುಂಪುಗಳಲ್ಲಿ ಹೆಚ್ಚಿನ ಸ್ಥಾನ ಪಡೆದಿದ್ದು ರಾಜ್ಯಪಾಲರು ಸರಕಾರ ರಚನೆಗೆ ಅವಕಾಶ ನೀಡಬೇಕಾಗಿತ್ತು. 23 ಸ್ಥಾನಗಳಿಸಿದ ಕಾಂಗ್ರೆಸ್ ಪಕ್ಷವು ಆರ್.ಜೆ.ಡಿ.ಗೆ ಬೆಂಬಲ ನೀಡುವುದಾಗಿ ರಾಜ್ಯಪಾಲರಿಗೆ ಫೋನ್ ಮಾಡಿ ತಿಳಿಸಿದ್ದು, ಸಹಿ ಮಾಡಿದ ಪತ್ರವನ್ನು ಕಳಿಹಿಸುವಷ್ಟರಲ್ಲಿ, ರಾಜ್ಯಪಾಲರು ಎನ್.ಡಿ.ಎ. ನ ಕೈಗೊಂಬೆಯಂತೆ, ನಿತೀಶ್ ಕುಮಾರ್ ಅವರನ್ನು ಸರಕಾರ ರಚಿಸಲು ಆಹ್ವಾನಿಸಿದೆ. ಎನ್.ಡಿ.ಎ. ನ ಒಟ್ಟು ಬಲ 122 ಮಾತ್ರ - ಬಿಜೆಪಿ 67, ಸಮತಾ-34, ಜನತಾದಳ(ಯು)-21. ಜೆ.ಎಂ.ಎಂ. ಹಗರಣವಲ್ಲಿ ಈಗಾಗಲೇ ಸಿಲುಕಿಕೊಂಡಿರುವ ಶಿಬು ಸೂರೆನ್ ತನ್ನ ಪಕ್ಷದ 12 ಜನರ ಬೆಂಬಲ ಘೋಷಿಸಿದರೂ ಒಟ್ಟು ಸ್ಥಾನ 144 ಮಾತ್ರ ಆಗುತ್ತದೆ. ಆರ್.ಜೆ.ಡಿ. ಗುಂಪಿಗಿಂತ ತೀರಾ ಕಡಿಮೆ. ಕುದುರೆ ವ್ಯಾಪಾರದ ಮೂಲಕ ರಾಜ್ಯ ರಚಿಸುವ ಹುನ್ನಾರ ನಡೆಯುತ್ತಿದೆ. 4 ರಾಜ್ಯಗಳ ಚುನಾವಣೆಯಲ್ಲಿ ತೀರಾ ಮೂಲೆಗುಂಪಾದ ಶಿಸ್ತಿನ ಪಕ್ಷ ಬಿಜೆಪಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರುವ ಸನ್ನಾಹ ಮಾಡುತ್ತಿದೆ.

5 ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಗಳಲ್ಲಿ ಈ ರಾಜ್ಯಗಳಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಿತ್ತು. ಹೀನಾಯ ಸೋಲನ್ನು ಅನುಭವಿಸಿತ್ತು. ಎನ್.ಡಿ.ಎ. ಪಕ್ಷಗಳು ಹೆಚ್ಚಿನ ಸ್ಥಾನ ಪಡೆದಿದ್ದವು. ಆದ್ದರಿಂದ ಶಾಸನಸಭಾ ಚುನಾವಣೆಗಳಲ್ಲಿ ದೊಡ್ಡ ಶಕ್ತಿಯಾಗಿ ಬೆಳೆದಬರಬೇಕೆಂದು ಬಿಜೆಪಿ ಬಯಸಿತ್ತು. ಹಿರಿಯ ಬಂಡವಾಳಗಾರರ ಹಿಡಿತದಲ್ಲಿರುವ ಪತ್ರಿಕೆಗಳು, ಮಾಧ್ಯಮಗಳು ಸಹ ಅಬ್ಬರದ ಪ್ರಚಾರ ನೀಡಿದವು. ಬಿಹಾರದಲ್ಲಿ ರಾಬ್ರಿದೇವಿ ಸರಕಾರವನ್ನು ಮಣ್ಣುಮುಕ್ಕಿಸಬೇಕೆಂದು ಎನ್.ಡಿ.ಎ. ಗೆ ಸೇರಿದ ಎಲ್ಲಾ ಪಕ್ಷಗಳು ಕಸರತ್ತು ನಡೆಸಿದವು. ಆದರೆ ಅಧಿಕಾರದ ಲಾಲಸೆಗೆ ತುತ್ತಾಗಿದ್ದ ಬಿಜೆಪಿ, ಸಮತಾ, ಜೆಡಿ(ಯು) ಸರಿಯಾದ ಚುನಾವಣಾ ಹೊಂದಾಣಿಕೆ ಮಾಡಲು ಸಾಧ್ಯವಾಗಲಿಲ್ಲ.

ಬಿಹಾರದಲ್ಲಿ ಹರಿಯುತ್ತಿರುವ ಗಂಗೆಯ ನೀರಿನಂತೆ ಹಣವನ್ನು ಹರಿಬಿಡಲಾಯ್ತು. ಕೇಂದ್ರದ ಮಂತ್ರಿಗಳು, ಸಿನಿಮಾ ನಟ, ನಟಿಯರ ದೌಡೇ ದೌಡು. ಚುನಾವಣೆಯವರೆಗೆ ಭೂಮಾಲಿಕರ ಗುಂಡಿನ ಶಬ್ದವನ್ನು ಮಾತ್ರ ಕೇಳುತ್ತಿದ್ದ ಬಿಹಾರದ ಜನರಿಗೆ 20-25 ಹೆಲಿಕಾಪ್ಟರುಗಳ ಅರ್ಭಟ ದಿನನಿತ್ಯದ ಪರಿಪಾಟವಾಯ್ತು.

ಈ ಮಧ್ಯೆ ಎನ್.ಡಿ.ಎ. ಅಧಿಕಾರಕ್ಕೆ ಖಂಡಿತಾ ಬರುತ್ತದೆ, ಆದರೆ ಮುಖ್ಯಮಂತ್ರಿ ಯಾರು ಎನ್ನುವ ಪೈಪೋಟಿಯೂ ನಡೆಯಿತು. ಸಮತಾ ಪಕ್ಷದವರು ನಿತೀಶ್ ಕುಮಾರ್ ಎಂದರೆ,

ಎಸ್.ಸೂರ್ಯನಾರಾಯಣ ರಾವ್

ಜನತಾದಳ(ಯು) ರಾಮವಿಲಾಸ್ ಪಾಸ್ವಾನ್ ಆಗಬೇಕೆಂದರು. ಬಿಜೆಪಿ ತನ್ನ ಪಕ್ಷದ ಇಬ್ಬರ ಹೆಸರನ್ನು ಸೂಚಿಸಿತು. ಅಂದರೆ ಚುನಾವಣೆಗಳಿಗೆ ಮೊದಲು ಮುಖ್ಯಮಂತ್ರಿ ವಿಚಾರದಲ್ಲಿ ಹೊಂದಾಣಿಕೆ ಇರಲಿಲ್ಲ. ಸಂದರ್ಭಸಾಧಕತನಕ್ಕೆ ಹೆಸರಾದ ಬಿಜೆಪಿಯವರು ಹಿಂದುಳಿದ ವರ್ಗಗಳಿಗೆ ಸೇರಿರುವ ಮತದಾರರು ಹೆಚ್ಚಾಗಿ ಇರುವ ಕಡೆಗಳಲ್ಲಿ ಒಬ್ಬ ಅಭ್ಯರ್ಥಿಯನ್ನು ಪ್ರತಿಪಾದನೆ ಮಾಡಿದರೆ, ಮುಂದುವರಿದ ವರ್ಗಕ್ಕೆ ಸೇರಿದ ಜನರು ಹೆಚ್ಚಿರುವ ಕಡೆಗಳಲ್ಲಿ ಇನ್ನೊಬ್ಬ ಅಭ್ಯರ್ಥಿಯನ್ನು ಮುಖ್ಯಮಂತ್ರಿಯಾಗಿ ತೋರಿಸುತ್ತಿದ್ದರು. ಆದರೂ ಎನ್.ಡಿ.ಎ. ಗೆ ಬಹುಮತ ಸಿಗಲಿಲ್ಲ. ಬಿಜೆಪಿಯ ಕನಸು ನುಚ್ಚುನೂರಾಗಿದ. ಜಾರ್ಜ್ ಫರ್ನಾಂಡೀಸ್ ಮತ್ತು ಅವರ ಸಮತಾ ಪಕ್ಷಕ್ಕೆ ಮುಖಭಂಗವಾಗಿದೆ.

ಕೇಂದ್ರ ಸರ್ಕಾರವು ಸಂವಿಧಾನ ಪರಾಮರ್ಶೆ ನಡೆಸಲು ಮಾಡಿದ ತೀರ್ಮಾನ, ಆಯೋಗದ ರಚನೆ ಹಾಗೂ ದೇಶಾದ್ಯಂತ ತೀವ್ರವಾದ ಪ್ರತಿಭಟನೆ ಮತ್ತು ಚರ್ಚೆಯ ಬೆನ್ನಲ್ಲಿ ನಾಲ್ಕು ರಾಜ್ಯಗಳ ಚುನಾವಣೆಗಳು ನಡೆದಿವೆ. ಸಂವಿಧಾನದ ಮೂಲಭೂತ ಅಂಶಕ್ಕೆ ಭಂಗ ಬರುವುದಿಲ್ಲ ಎಂದು ಬೊಗಳೆ ಬಿಟ್ಟರೂ ಸಂಘ ಪರಿವಾರದ ಹಿಂದುತ್ವದ ಅಜೆಂಡಾ ಮುಂದೆ ಬರುವುದೆಂಬ ಭಯದಿಂದ ದಲಿತರು, ಅಲ್ಪಸಂಖ್ಯಾತರು ದೊಡ್ಡ ಸಂಖ್ಯೆಯಲ್ಲಿ ಆರ್.ಜೆ.ಡಿ. ಗುಂಪಿಗೆ ಬೆಂಬಲ ನೀಡಿರುವುದು ಕಂಡು ಬರುತ್ತದೆ. ಬಿಜೆಪಿ ಅಧಿಕಾರದಲ್ಲಿರುವ ಗುಜರಾತಿನಲ್ಲಿ ಸರಕಾರಿ ನೌಕರರು ಆರ್.ಎಸ್.ಎಸ್.ಗೆ ಸೇರಬಹುದೆಂಬ ತೀರ್ಮಾನವೂ ದಲಿತರು, ಅಲ್ಪಸಂಖ್ಯಾತರ ಮೇಲೆ ಪರಿಣಾಮ ಬೀರಿದೆ. ಒರಿಸ್ಸಾ, ಹರಿಯಾಣಗಳಲ್ಲೂ ಬಿಜೆಪಿ ಸ್ಥಾನ ಕುಗ್ಗಿದ್ದು ಎನ್.ಡಿ.ಎ. ನ ಅಂಗ ಪಕ್ಷವಾದ ಚೌಟಾಲ ನೇತೃತ್ವದ ಐಎನ್‌ಎಲ್‌ಡಿ 47 ಸ್ಥಾನಗಳಲ್ಲಿ ಗೆದ್ದು 90 ಸದಸ್ಯ ಬಲದ ವಿಧಾನಸಭೆಯಲ್ಲಿ ನಿಚ್ಚಳ ಬಹುಮತ ಹೊಂದಿದೆ. ಇಲ್ಲಿ 29 ಸ್ಥಾನಕ್ಕೆ ಸ್ಪರ್ಧಿಸಿದ ಬಿಜೆಪಿ ಕೇವಲ 6 ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯ್ತು. ಒರಿಸ್ಸಾದಲ್ಲಿ 68 ಸ್ಥಾನಗಳಿಸಿದ ಬಿಜು ಜನತಾದಳ ಸ್ಪಷ್ಟ ಬಹುಮತಗಳಿಸಲು 5 ಸ್ಥಾನ ಮಾತ್ರ ಕಡಿಮೆ ಇದ್ದು ಬಿಜೆಪಿಯ ಮೇಲೆ ತೀರಾ ಅವಲಂಬಿತವಾಗಿಲ್ಲ. ಇದನ್ನು ಅರಿತ ಬಿಜೆಪಿ ಸಮ್ಮಿಶ್ರ ಸರಕಾರದಲ್ಲಿ ಸೇರಲಿದೆ.

ಚಂಡಮಾರುತ ಪರಿಹಾರ ಕಾರ್ಯದಲ್ಲಿ ವಿಫಲಗೊಂಡ ಕಾಂಗ್ರೆಸ್ ಪಕ್ಷ ತನ್ನ ಒಳ ಜಗಳದಿಂದ ಲೋಕಸಭಾ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ ಪರಂಪರೆಯನ್ನು ಮುಂದುವರೆಸಿದೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ನಡೆಸುತ್ತಿದ್ದರೂ 8 ವಿಧಾನ ಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ 2 ಸ್ಥಾನಗಳನ್ನು ಮಾತ್ರ ಪಡೆಯಲು ಸಾಧ್ಯವಾಗಿದೆ. ಕನೋಜ್ ಲೋಕಸಭಾ ಕ್ಷೇತ್ರವೂ ಸೇರಿದಂತೆ ಉಳಿದ ಕ್ಷೇತ್ರಗಳಲ್ಲಿ ತೀರ ಸೋಲು ಅನುಭವಿಸಿದ್ದು ಮತಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಬಿಜೆಪಿ ತಾನು ಅನುಸರಿಸುತ್ತಿರುವ ಆರ್ಥಿಕ ಧೋರಣೆ ಮತ್ತು ಕೋಮುವಾದಿ ನಿಲುವುಗಳಿಂದಾಗಿ ಜನರಿಂದ ದೂರ ಸರಿಯಲ್ಪಡುತ್ತಿದೆ ಎನ್ನುವುದಂತೂ ಸ್ಪಷ್ಟವಾಗಿದೆ.

ಬಿಹಾರದಲ್ಲಿ ಎನ್.ಡಿ.ಎ. ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಆಹ್ವಾನಿಸಿದುದಕ್ಕೆ ತೀವ್ರ ಪ್ರತಿಭಟನೆ ಎಲ್ಲೆಡೆಯಿಂದ ಬಂದಿದೆ. ಕುದುರೆ ವ್ಯಾಪಾರದ ಮೂಲಕ ಶಾಸಕರನ್ನು ಕೊಳ್ಳಲು ನಿತೀಶ್ ಕುಮಾರ್ ಅವರಿಗೆ ಸಾಧ್ಯವಾಗದೆ ಹೋದಲ್ಲಿ ಕಾಂಗ್ರೆಸ್ ಪಕ್ಷವನ್ನು ಒಡೆಯಲು ಸಾಧ್ಯವಾಗದೆ ಇದ್ದಲ್ಲಿ, ವಿದಾನಸಭೆಯಲ್ಲಿ ನಡೆಯುವ ಮತದಾನದಲ್ಲಿ ಸೋತು ಮುಖಭಂಗವಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ.

ಕೇಂದ್ರ ಸರ್ಕಾರವು ಸಂಸತ್ತಿನ ಮುಂದಿಟ್ಟಿರುವ ಬಜೆಟ್ ಜನಗಳಲ್ಲಿ ತೀವ್ರ ಅಸಮಾಧಾನ ತಂದಿದೆ. ಬೆಲೆಗಳ ಏರಿಕೆ ಮತ್ತು ಗುಜರಾತ್ ಘಟನೆಗಳು ಎನ್.ಡಿ.ಎ. ಮೈತ್ರಿಕೂಟದಲ್ಲಿ ಅತೃಪ್ತಿ ಮೂಡಿಸಿವೆ. ಜನರ ಪ್ರತಿಭಟನೆಗಳಿಂದ ಮುಂದಿನ ದಿನಗಳಲ್ಲಿ ಭಿಜೆಪಿ ಪೇಚಿಗೆ ಸಿಲುಕುವ ಪರಿಸ್ಥಿತಿ ಉಂಟಾಗಲಿದೆ. ಇಂತಹ ಪರಿಸ್ಥಿತಿಯನ್ನು ತರಲು ಜಾತ್ಯಾತೀತ, ಪ್ರಗತಿಪರ ಶಕ್ತಿಗಳು ಶ್ರಮಿಸಬೇಕಾಗಿದೆ.

ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಜಯಭೇರಿ

ಗ್ರಾಮಪಂಚಾಯತ್ ಚುನಾವಣೆ

ಒಂದು ವರ್ಷಕ್ಕಿಂತ ಹೆಚ್ಚು ತಡ ಮಾಡಿ ಹೇಗೋ ಗ್ರಾಮ ಪಂಚಾಯ್ತಿ ಚುನಾವಣೆಗಳು ಮುಗಿದಿವೆ. ಚುನಾವಣೆ ಬಗ್ಗೆ, ಅಭ್ಯರ್ಥಿಗಳ ವಿರುದ್ಧ ಚರ್ಚೆಗಳೆಲ್ಲಾ ಮುಗಿದು ಈಗ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಬಲಾಬಲಾಗಳ ಪರೀಕ್ಷೆ ಶುರುವಾಗಿದೆ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ದುಡಿಯುವ ಜನರ ಪಕ್ಷ ಸಿ.ಪಿಐ(ಎಂ)ನ ಅಭ್ಯರ್ಥಿಗಳಿಗೆ ಈ ಹಿಂದಿನ ಗ್ರಾಮ ಪಂಚಾಯತ್ ಚುನಾವಣೆಗಿಂತ ಈಗ ಒಳ್ಳೆಯ ಫಲಿತಾಂಶ ಸಿಕ್ಕಿದೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ 304 ಸ್ಥಾನಗಳ ಪೈಕಿ ಸಿ.ಪಿ.ಐ(ಎಂ) 201 ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ಇದರಲ್ಲಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂದಿಸಿದ 15 ಪಂಚಾಯತ್‌ಗಳಲ್ಲಿ 213 ಸ್ಥಾನಗಳ ಪೈಕಿ 179 ಸ್ಥಾನಗಳಿಗೆ ಸಿಪಿಐ(ಎಂ) ಅಭ್ಯರ್ಥಿಗಳು ಕಣಕ್ಕೆ ಇಳಿದಿದ್ದರು. ಗುಡಿಬಂಡೆ ತಾಲ್ಲೂಕಿನ 107 ಸ್ಥಾನಗಳ ಪೈಕಿ 91 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಿತ್ತು.

ಸುಮಾರು ಒಂದು ತಿಂಗಳ ಹಿಂದಿನಿಂದ ಪಂಚಾಯ್ತಿ ಚುನಾವಣೆಗಳಿಗಾಗಿ ತಯಾರಿ ನಡೆಸಿ, ಅತ್ಯಂತ ಶಿಸ್ತಿನಿಂದ ಚುನಾವಣೆಗಳನ್ನು ಎದುರಿಸಲಾಯಿತು. ಗ್ರಾಮ ಮಟ್ಟದ ಸಮಾವೇಶಗಳನ್ನು ಏರ್ಪಡಿಸಿ ಸಮಾವೇಶಗಳಿಗೆ ಪಕ್ಷದ ಸದಸ್ಯರೊಂದಿಗೆ ಬೆಂಬಲಿಗರನ್ನು ಸೇರಿಸಿ ಆಯಾ ಪಂಚಾಯತ್ ಪರಿಸ್ಥಿತಿಯನ್ನು ಚರ್ಚೆ ಮಾಡಲಾಯಿತು. ಚುನಾವಣೆಗಳಲ್ಲಿ ನಾವು ವಹಿಸಬೇಕಾದಂತ ಪಾತ್ರ, ಪ್ರಾಮುಖ್ಯತೆ, ಪ್ರಚಾರದ ವಿಧಾನ, ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ನಾವು ವಹಿಸಬೇಕಾದ ಎಚ್ಚರಿಕೆ ಇವೆಲ್ಲವನ್ನು ಕೂಲಂಕುಷವಾಗಿ ಚರ್ಚೆ ಮಾಡಲಾಯಿತು. 29-1-2000ದಿಂದ ಯಲ್ಲಂಪಲ್ಲಿ ಗ್ರಾಮಪಂಚಾಯ್ತಿಯಿಂದ ಹಿಡಿದು 6-2-2000 ರವರೆಗೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಎಲ್ಲಾ ಪಂಚಾಯ್ತಿಗಳಲ್ಲಿ ಸಮಾವೇಶಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು.

ಅಷ್ಟೇ ಶ್ರದ್ಧೆಯಿಂದ, ಶಿಸ್ತಿನಿಂದ ಪಕ್ಷದ ಕಾರ್ಯವಿಧಾನವನ್ನು ಅಭ್ಯರ್ಥಿಗಳ ದಕ್ಷತೆಯನ್ನು ಪ್ರಚಾರ ಮಾಡಲಾಯಿತು. ಹಗಲಿರುಳೆನ್ನದೆ ದುಡಿದು ಪ್ರಚಾರ ಕಾರ್ಯ ನಡೆಸಿದರು. 1994ರ ಚುನಾವಣೆಗಳಲ್ಲಿ ಕೇವಲ ಒಂದು ಗ್ರಾಮಪಂಚಾಯ್ತಿಯಲ್ಲಿ ಬಹುಮತಗಳಿಸಿದ್ದ ಸಿ.ಪಿ.ಐ(ಎಂ) ಈಗ ಎಂಟು ಗ್ರಾಮ ಪಂಚಾಯ್ತಿಗಳಲ್ಲಿ ಬಹುಮತ ಪಡೆಯುವಲ್ಲಿ ಯಶಸ್ವಿಯಾಗಿದೆ. 18 ಗ್ರಾಮಪಂಚಾಯ್ತಿಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಗುಡಿಬಂಡೆ ತಾಲ್ಲೂಕಿನಲ್ಲೂ ಸಹ 3 ಗ್ರಾಮಪಂಚಾಯ್ತಿಗಳಲ್ಲಿ ಬಹುಮತಪಡೆಯುವುದರಲ್ಲಿ ಯಶಸ್ಸುಕಂಡಿದೆ. ಮಿಕ್ಕೆಲ್ಲಾ ಪಂಚಾಯ್ತಿಗಳಲ್ಲಿ ಸಿಪಿಐ(ಎಂ) ಸದಸ್ಯರು ಸೇರಲು ಸಾಧ್ಯವಾಗಿದೆ.

ಬಾಗೇಪಲ್ಲಿ ತಾಲ್ಲೂಕಿನ 95 ಅಭ್ಯರ್ಥಿಗಳು ಸಿಪಿಐ(ಎಂ) ಪಕ್ಷದ ಸದಸ್ಯರಾಗಿ ಗೆದ್ದು ಬಂದಿದ್ದಾರೆ. ಅದರಲ್ಲಿ 92ಜನ ಬಾಗೇಪಲ್ಲಿ ವಿಧಾನಸಭೆಗೆ ಸಂಬಂಧಿಸಿದ ಗ್ರಾಮಪಂಚಾಯ್ತಿಗಳಲ್ಲಿ ಗೆದ್ದುಬಂದಿದ್ದಾರೆ. ಗುಡಿಬಂಡೆ ತಾಲ್ಲೂಕಿನಲ್ಲಿ ಈಗ 43 ಜನ ಅಭ್ಯರ್ಥಿಗಳು ಗೆದ್ದುಬಂದಿದ್ದಾರೆ. ಅದರ ಜೊತೆಗೆ ಬಾಗೇಪಲ್ಲಿಯಲ್ಲಿ 40 ಜನ ಅಭ್ಯರ್ಥಿಗಳು ಅತ್ಯಲ್ಪ ಮತಗಳೊಂದಿಗೆ ಅಂದರೆ ಕೇವಲ 10 ಮತಗಳ ಒಳಗಿನ ಅಂತರದಲ್ಲಿ ಸೋಲನ್ನೊಪ್ಪಲಾಗಿದೆ. ಇನ್ನೂ 30 ಅಭ್ಯರ್ಥಿಗಳು 20 ರಿಂದ 30 ಮತಗಳ ಒಳಗಿನ ಅಂತರದಿಂದ ಸೋತಿದ್ದಾರೆ. ಗುಡಿಬಂಡೆಯಲ್ಲೂ ಸಹ 30 ಅಭ್ಯರ್ಥಿಗಳು ಕೇವಲ 15 ಮತಗಳ ಅಂತರದಲ್ಲಿ ಒಳಗೆ ಸೋಲನ್ನೊಪ್ಪಿದ್ದಾರೆ.

ಕೊತ್ತಕೋಟೆಯಲ್ಲಿ ದೌರ್ಜನ್ಯ ಎದುರಿಸಿ ಗೆಲುವು.

ಕೇವಲ ಕೊತ್ತಕೋಟ ಗ್ರಾಮ ಪಂಚಾಯ್ತಿಯನ್ನು ಮಾತ್ರ ಹೊಂದಿದ್ದ ಸಿ.ಪಿ.ಐ(ಎಂ) ಈ ಗ್ರಾಮ ಪಂಚಾಯಿತಿಗಳನ್ನು ಕಾಂಗ್ರೆಸಿನಿಂದ ಕಿತ್ತುಕೊಂಡಿದೆ. ಕೊತ್ತಕೋಟೆ ಗ್ರಾಮ ಪಂಚಾಯ್ತಿಯನ್ನು ಮತ್ತೆ ಉಳಿಸಿಕೊಳ್ಳಲಾಗಿದೆ. ಕೊತ್ತಕೋಟ ಗ್ರಾಮ ಪಂಚಾಯ್ತಿಯಲ್ಲಿ ಕಾಂಗ್ರೆಸ್‌ನ ಬಂಡಾಯ ವಿಧಾನಸಭಾಸದಸ್ಯ ಸಂಪಂಗಿ ಅನುಯಾಯಿಗಳು ಮತ್ತು ಕಾಂಗ್ರೆಸ್ ಪಕ್ಷ ಒಂದಾಗಿ ಪಕ್ಷದ ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಹಾಕಿಸಿದ್ದಲ್ಲದೆ ದೌರ್ಜನ್ಯ ಮಾಡಿ ಹಲವಾರು ತೊಂದರೆಗಳನ್ನು ನೀಡಿತು. ಅದರ ಜೊತೆಗೆ ಲಕ್ಷಾಂತರ ರೂಪಾಯಿಗಳನ್ನು ಚೆಲ್ಲಿದರು. ಸಾರಾಯಿಯನ್ನು ಕಾಲುವೆಗಳ

ಪುಟ 4 ಕ್ಕೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 28

ಸ್ಥಳೀಯಾಡಳಿತ ಸಚಿವ ಈಶ್ವರ ದಾಸ್ ಜಲಾನ್ ಫೆಬ್ರವರಿ 18 ರಂದು ಕಲ್ಕತ್ತ ಮುನ್ಸಿಪಾಲ್ ಕಾನೂನಿಗೆ (1951) ಒಂದು ತಿದ್ದುಪಡಿಯನ್ನು ಮಂಡಿಸಿದರು. ಅದರ ಪ್ರಕಾರ ಕಲ್ಕತ್ತ ಮಹಾನಗರಪಾಲಿಕೆಯ ಅವಧಿಯನ್ನು ಆಗಿನ ಮೂರು ವರ್ಷಗಳಿಂದ ನಾಲ್ಕು ವರ್ಷಗಳಿಗೆ ವಿಸ್ತರಿಸಲಾಗುತ್ತದೆ. ಅವಧಿಯನ್ನು ಒಂದು ವರ್ಷ ಹೆಚ್ಚಿಸುವ ಆಯ್ಕೆ ಸರಕಾರಕ್ಕೆ ಸೇರಿರುತ್ತದೆ. ಇತರ ರಾಜ್ಯಗಳ ಮಹಾನಗರಪಾಲಿಕೆ ಚುನಾವಣೆಗಳಲ್ಲಿ ಇರುವಂತೆ ಎಲ್ಲರಿಗೆ ಮತದಾನದ ಹಕ್ಕು ಕೊಡುವ ಅಂಶವೂ ತಿದ್ದುಪಡಿಯಲ್ಲಿ ಸೇರಿರಬೇಕೆಂದು ನಾನು ವಾದಿಸಿದೆ.

ಅಂದಿನ ಮುಂಬಯಿ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಇದ್ದ ನಿಯಮಗಳಿಗೆ ಸಮಾನವಾಗಿರುವಂತೆ ನೋಡಿಕೊಳ್ಳಲು ಮಹಾನಗರ ಪಾಲಿಕೆಯ ಅವಧಿಯನ್ನು ವಿಸ್ತರಿಸಲು ಸರಕಾರ ಯೋಜಿಸಿತು.

ತಿದ್ದುಪಡಿ ಮಸೂದೆಯನ್ನು ಕಮ್ಯುನಿಸ್ಟ್ ಶಾಸಕ ಈರೇಶ ಘೋಷ್ ಪ್ರಬಲವಾಗಿ ವಿರೋಧಿಸಿ ದರು ಇದು ಹಾಸ್ಯಾಸ್ಪದ, ನಾಚಿಕೆಗೇಡಿನದು ಹಾಗೂ ಟೊಳ್ಳು ಎಂದು ಅವರುಸ ವರ್ಣಿಸಿದರು. ಆದರೆ ಸಹಜವಾಗಿಯೇ ಕಾಂಗ್ರೆಸ್ ಸರಕಾರ ಅದನ್ನು ಅಂಗೀಕರಿಸಿತು.

ಸ್ವಯಂಮಾಡಳಿತಕ್ಕೆ ಕಾಂಗ್ರೆಸ್ ವಿರೋಧ:

ಸ್ಥಳೀಯ ಸ್ವಯಮಾಡಳಿತದಲ್ಲಿ ಎಲ್ಲರಿಗೆ ಮತದಾನ ಹಕ್ಕನ್ನು ಕಾಂಗ್ರೆಸ್ ಸದಾ ವಿರೋಧಿಸುತ್ತ ಬಂದಿದೆ. ಪುರಸಭೆಗಳಲ್ಲಿ ಸ್ವಾಯುತ್ತೆಯನ್ನು ಸ್ಥಾಪಿಸಲು ನಾವು ಹೋರಾಡುತ್ತ ಬಂದಿದ್ದೇವೆ. ನಮ್ಮ ಬೇಡಿಕೆಯನ್ನು ಕಾಂಗ್ರೆಸ್ ಸರಕಾರ ಒಪ್ಪಲೇ ಬೇಕಾಗುತ್ತದೆ ಎಂದು ನಾನು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುವಾಗ ಹೇಳಿದೆ.

ಮಹಿಳೆಯರ ಪ್ರತಿಭಟನೆ:

1955 ಮಾರ್ಚ್ 2 ರಂದು ಸುಮಾರು 3000 ಮಹಿಳೆಯರು ಉದ್ಯೋಗ ಕೋರಿ ಅಸೆಂಬ್ಲಿಗೆ ಮೆರವಣಿಗೆಯಲ್ಲಿ ತೆರಳಿದರು. 30,000 ಜನರ ಸಹಿಯಿದ್ದ ಮನವಿ ಪತ್ರವೊಂದನ್ನು ಸರಕಾರಕ್ಕೆ ಸಲ್ಲಿಸಿದರು. ವೆಲ್ಲಿಂಗ್ಟನ್ ಚೌಕದಲ್ಲಿ 160 ರೈತ ಮಹಿಳೆಯರು ಬಂಧನಕ್ಕೆ ಒಳಗಾದರು ಮಣಿಕುಂತಲ ಸೇನ್, ಸುಧಾ ರಾಯ್ ಬಿಮಲ್ ಪ್ರತಿಭಾದೇವಿ ಮತ್ತಿತರ ನಾಯಕರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಇದೊಂದು ಅಭೂತಪೂರ್ವ ರ್‍ಯಾಲಿ ಎಂದು ಮುಖ್ಯಮಂತ್ರಿಗೆ ಹೇಳಿದ ನಾನು ಸಶಸ್ತ್ರ ಪಡೆಗಳ ನಿಯೋಜನೆಯನ್ನು ವಿರೋಧಿಸಿದೆ. ಮಹಿಳೆಯರ ವಿರುದ್ಧ ತೋಳ್ಬಲ ಪ್ರದರ್ಶನಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ವಿಚಾರ ಎಂದೆ.

ಪಿ.ಎಸ್.ಪಿ. ನಾಯಕ ಹರಿಪಾದ ಚಟರ್ಜಿ ಫಾರ್ವಡ ಬ್ಲಾಕ್‌ನ ಹೇಮಂತ ಬಸು, ಮಣಿಕುಂತಲ ಸೇನ್ ಮತ್ತು ಗಜೇಂದ್ರ ಚೌಧರಿ ಈ ವಿಷಯವನ್ನು ವಿಧಾನಸಭೆಯ ಒಳಗೆ ಚರ್ಚೆಗೆ ಎತ್ತಿದರು. ಪೋಲೀಸರು ಆಸ್ಥಳದಿಂದ ಕದಲುವುದಿಲ್ಲ ಎಂದು ತಮ್ಮ ಮಾಮೂಲಿ ಶೈಲಿಯಲ್ಲಿ ಹೇಳಿದ ಮುಖ್ಯಮಂತ್ರಿ ಅಸೆಂಬ್ಲಿಯಲ್ಲಿ ಮಹಿಳೆಯರ ನಿಯೋಗದೊಂದಿಗೆ ಭೇಟಿ ಮಾಡುವುದಿಲ್ಲ ಎಂದೂ ನುಡಿದರು. ಆದರೆ ಮಾರ್ಚ್ 9 ರಂದು ರೈಟರ್ಸ್ ಬಿಲ್ಡಿಂಗ್‌ನಲ್ಲಿ ನಿಯೋಗದ ಜತೆ ಮಾತನಾಡುವುದಾಗಿ ಹೇಳಿದರು.

ನನ್ನ ಒಂದು ನಿಲುವು ಸೂಚನೆಯನ್ನು ಸ್ಪೀಕರ್ ತಿರಸ್ಕರಿಸಿದರು. ನಾನು ಅಸೆಂಬ್ಲಿಯಿಂದ ಹೊರಗೆ ಬಂದ ಮೇಲೆ ಧರಣಿ ನಿರತ ಮಹಿಳೆಯರನ್ನುದ್ದೇಶಿಸಿ ಮಾತನಾಡಿದೆ. ಗೀತಾ ಮುಖರ್ಜಿ ರ್‍ಯಾಲಿಯ ಮುಂಚೂಣಿಯಲ್ಲಿದ್ದರು. ಮಣಿಕುಂತಲ ಸೇನ್ ಉಪಸ್ಪೀಕರ್‌ಗೆ ಮನವಿ ಪತ್ರ ಅರ್ಪಿಸಿದರು.

ಕಚೇರಿ ಫ್ಯಾಕ್ಟರಿ ಮತ್ತಿತರ ವಾಣಿಜ್ಯ ಸಂಸ್ಥೆಗಳಲ್ಲಿ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಲು (ರಿಟ್ರೆಂಚ್‌ಮೆಂಟ್) ಅವಕಾಶ ಕೊಡಬಾರದು, ಸಮಾನ ಕೆಲಸಕ್ಕೆ ಸಮಾನ ವೇತನ, ಗುಡಿ ಕೈಗಾರಿಕೆಯಲ್ಲಿ ಯೋಜಿತ ರೀತಿಯಲ್ಲಿ ಹೊಸ ಉದ್ಯೋಗಾವಕಾಶಗಳ ಸೃಷ್ಟಿ ಇವು ಮನವಿ ಪತ್ರದಲ್ಲಿದ್ದ ಬೇಡಿಕೆಗಳು.

ಚಾ ತೋಟ ಕಾರ್ಮಿಕರ ಹೋರಾಟ
8 ಜನರ ಸಾವು:

ಸರಕಾರದ ನೀತಿಗಳನ್ನು ವಿರೋಧಿಸಿ ಡಾರ್ಜಿಲಿಂಗ್ ಬೆಟ್ಟಗಳಲ್ಲಿ ಜನವರಿ 22 ರಂದು 30 ಸಾವಿರಕ್ಕೂ ಹೆಚ್ಚು ಚಹಾ ತೋಟದ ಕಾರ್ಮಿಕರು ಒಂದು ದಿನ ಸಾಂಕೇತಿಕ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದರು.

ಬೋನಸ್ ಮತ್ತು ಹೆಚ್ಚಿನ ವೇತನ ಕೇಳಿದ್ದಕ್ಕಾಗಿ ದಾರ್ಜಿಲಿಂಗ್ ಟೀ ಎಸ್ಟೇಟ್ ಮಜ್ದೂರ್ ಯೂನಿಯನ್‌ನ ಕಾರ್ಯದರ್ಶಿ ಆನಂದ ಪಾಠಕ್ ಮತು ಅಧ್ಯಕ್ಷ ರತನ್‌ಲಾಲ್ ಬ್ರಹ್ಮನ್ ಸಹಿತ 70 ಮುಖಂಡರನ್ನು ಬಂಧಿಸಲಾಯಿತು. ಜೂನ್ 25 ರಂದು ಪೋಲೀಸ್ ಗೋಲಿಬಾರಿನಲ್ಲಿ ಇಬ್ಬರು ಮಹಿಳೆಯರ ಸಹಿತ ಆರು ಕಾರ್ಮಿಕರು ಮೃತಪಟ್ಟರು.

ಈ ಹತ್ಯೆಗಳನ್ನು ಪ್ರತಿಭಟಿಸಿ ಮರುದಿನ ಡಾರ್ಜಿಲಿಂಗ್‌ನಲ್ಲಿ ಮುಷ್ಕರ ಮತ್ತು ರ್‍ಯಾಲಿಯನ್ನು ನಡೆಸಲಾಯಿತು. ಗೋಲಿಬಾರಿನಲ್ಲಿ ಗಾಯಗೊಂಡಿದ್ದ ಇನ್ನಿಬ್ಬರು ನಂತರ ಅಸುನೀಗಿದರು. ಜೂನ್ 26 ರಂದು ಡಾರ್ಜಿಲಿಂಗ್ ಪಟ್ಟಣದಲ್ಲಿ ಮತ್ತು ಇತರ ಕೆಲವು ಚಹಾತೋಟಗಳಲ್ಲಿ 144 ನೇ ಸೆಕ್ಷನ್ ಅನ್ವಯ ನಿಷೇಧಾಜ್ಞೆ ವಿಧಿಸಲಾಯಿತು. ಮರುದಿನ 15 ಸಾವಿರಕ್ಕೂ ಹೆಚ್ಚು ದು:ಖತಪ್ತ ಜನರು ಮೃತದೇಹಗಳ ಜತೆ ಮೆರವಣಿಗೆ ನಡೆಸಿದರು. ಬ್ರಹ್ಮನ ಮತ್ತು ಪಾಠಕ್ ವಿರುದ್ಧದ ವಾರಂಟ್‌ಗಳನ್ನು ಸರಕಾರ ಆಮೇಲೆ ವಾಪಸ್ ಪಡೆಯಿತು.

ಪೊಲೀಸ್ ದೌರ್ಜನ್ಯಗಳು ನಡೆದಿವೆ ಎನ್ನಲಾದ ಮಾರ್ಗರಟ್ ಹೋಪ್ ಚಹಾ ತೋಟಕ್ಕೆ ಸ್ಥ[...] ಅಧ್ಯಯನಕ್ಕಾಗಿ ನಾನು ಕೆಲವು ಸಂಗಾತಿಗಳೊಂದಿಗೆ ಹೋ[...]

ಗೋಲಿಬಾರ್ ಬೆಂಬಲಿಸಿದ ಮುಖ್ಯಮಂತ್ರಿ!

ಚಹಾತೋಟದ ಕಾರ್ಮಿಕರ ಮೇಲೆ ನಡೆ[...] ಗೋಲಿಬಾರ್ ವಿಚಾರವನ್ನು ಕೂಡ ಪ್ರತಿಪಕ್ಷ ನಾಯಕ[...] ಸದನದಲ್ಲಿ ಎತ್ತಿದರು.

ಗೋಲಿಬಾರನ್ನು ಸಮರ್ಥಿಸಿ ಮುಖ್ಯಮಂತ್ರಿ ಸೇನ[...] ಸೆಪ್ಟೆಂಬರ್ 2 ರಂದು ಸದನದಲ್ಲಿ ಹೇಳಿಕೆ ನೀಡಿದ[...] ಮಾರ್ಗರೇಟ್ ಹೋಪ್ ಚಹಾ ತೋಟದಲ್ಲಿ ಪರಿಸ್ಥಿ[...] ಅಪಾಯಕಾರಿ ಯಾಗಿತ್ತು. ಸ್ವಯಂ ರಕ್ಷಣೆಗಾಗಿ ಪೊಲೀಸ[...] ಗುಂಡು ಹಾರಿಸಬೇಕಾಯಿತು. ಎಂದು ಮುಖ್ಯಮಂ[...] ಹೇಳಿದರು!

ಮುಖ್ಯಮಂತ್ರಿಯ ಈ ಹೇಳಿಕೆಯನ್ನು ನಾ[...] ಉಗ್ರವಾಗಿ ವಿರೋಧಿಸಿದೆ. ಇದು ಪ್ರಚೋದನಕಾ[...] ದುರುದ್ದೇಶದ್ದು ಹಾಗೂ ಅರ್ಧಸತ್ಯ ಎಂದು ನಾನ[...] ಮುಖ್ಯಮಂತ್ರಿ ಹೇಳಿಕೆಯ ಪ್ರತಿಯನ್ನು ಎಲ್ಲ ಸದಸ್ಯರಿ[...] ವಿತರಿಸಬೇಕು ಹಾಗೂ ಚರ್ಚೆ ಅವಕಾಶ ಕಲ್ಪಿಸಬೇ[...] ಎಂಬಾ ನಾನು ಹೇಳಿದೆ.

(ಮುಂದುವರಿಯುವ[...]

ಗೀತಾ ಮುಖರ್ಜಿ ಇನ್ನಿಲ್ಲ

ಜ್ಯೋತಿಬಸುರವರ ಆತ್ಮಕಥನದ ಈ ಕಂತಿನಲ್ಲಿ ಕಾಂ. ಗೀತ ಮುಖರ್ಜಿಯವರ ಜೊತೆ ಹೋರಾಟವೊಂದರಲ್ಲಿ ಭಾಗವಹಿಸಿದ ಬಗ್ಗೆ ಬರೆಯುತ್ತಾರೆ. ಹಲವು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದ ಸಂಸದೀಯ ಪಟು, ಮಹಿಳಾ ಸಮಾನತೆಯ ಪ್ರಮುಖ ಮುಖವಾಣಿಗಳಲ್ಲೊಬ್ಬರಾದ ಕಾಂ. ಗೀತಾ ಮುಖರ್ಜಿ ದಿನಾಂಕ. 4.3.2000 ದಂದು ಬೆಳಿಗ್ಗೆ ನಿಧನ ಹೊಂದಿದ್ದಾರೆ. 'ಐಕ್ಯರಂಗ' ತನ್ನ ಅತೀವ ಶೋಕವನ್ನು ವ್ಯಕ್ತಪಡಿಸುತ್ತದೆ

- ಸಂಪಾದಕ ಮಂಡಳಿ

ಗ್ರಾಮ ಪಂಚಾಯತಿ ಚುನಾವಣೆ: ಬಾಗೇಪಲ್ಲಿಯಲ್ಲಿ ಜಯಭೇರಿ.............

ಪುಟ 3 ರಿಂದ

ರೂಪದಲ್ಲಿ ಹರಿಸಿದರು. ಸೀರೆ, ರವಿಕೆಗಳನ್ನು ಹಂಚಿದರು. ಆದರೆ ಜನ ಮರುಳಾಗಲಿಲ್ಲ. ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಹಂಚಿದ್ದನ್ನು ಹಾಗೂ ಅತ್ಯಂತ ದಕ್ಷತೆಯಿಂದ ಗ್ರಾಮ ಪಂಚಾಯ್ತಿಯನ್ನು ನಡೆಸಿದ್ದನ್ನು ದಿನನಿತ್ಯದ ಹಲವಾರು ಸಮಸ್ಯೆಗಳಿಗೆ ಸ್ಪಂದಿಸಿದ್ದನ್ನು ಮರೆಯಲಿಲ್ಲ. ಸಿಪಿಐ(ಎಂ) ದುಡಿಯುವ ಜನರ ಜೀವನಾಡಿ ಎಂಬುದನ್ನು ಜನ ಮನಗಂಡಿದ್ದರು. ಅವರ ತಂತ್ರ ಕುತಂತ್ರಗಳಿಗೆ ಅಲ್ಲಿಯ ಜನ ಬಲಿಬೀಳಲಿಲ್ಲ. ಹಲವಾರು ಕಷ್ಟ ನಷ್ಟಗಳನ್ನು ಅನುಭವಿಸಿದ ಕಾರ್ಯಕರ್ತರು ಮತ್ತೆ ಆ ಪಂಚಾಯ್ತಿಯನ್ನು ಉಳಿಸಿಕೊಂಡದ್ದು ಸಾಹಸವೇ ಸರಿ.

ಜಮೀನುದಾರರ ಹಿಡಿತದಲ್ಲಿ ಸಿಲುಕಿ ಶೋಷಣೆಗೊಳಗಾದ ಗ್ರಾಮ ಪಂಚಾಯ್ತಿಗಳಾದ ಗೊರ್ತಪಲ್ಲಿ ಮತ್ತು ತೊಳ್ಳಪಲ್ಲಿ ಪಂಚಾಯ್ತಿಗಳಲ್ಲಿ ಜನ ನಿರ್ಭಯವಾಗಿ ಮತ ಚಲಾಯಿಸಿದ ಪರಿಣಾಮ ಅತ್ಯಧಿಕ ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿದೆ. ಗೊರ್ತಪಲ್ಲಿಯಲ್ಲಿ ಆರು ಸ್ಥಾನಗಳನ್ನು ಪಡೆದು ಬಹುಮತ ಸಾಧಿಸಲಾಗಿದೆ. ಕೇವಲ 7 ಮತಗಳ ಅಂತರದಲ್ಲಿ 3 ಸ್ಥಾನಗಳನ್ನು ಈ ಪಂಚಾಯ್ತಿಯನ್ನು ಕಳೆದುಕೊಳ್ಳಲಾಗಿದೆ. ರೈತ ಮುಖಂಡ ಕಾ. ವೇಣುಗೋಪಾಲ ರೆಡ್ಡಿ ಕೇವಲ 7 ಮತಗಳಿಂದ ಸೋಲನ್ನೊಪ್ಪಬೇಕಾಯಿತು.

ಐತಿಹಾಸಿಕ ಸ್ಥಳ ಗುಮ್ಮನಾಯಕನ ಪಾಳ್ಯ[...] ತೊಳ್ಳಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ 13 ಸ್ಥಾನಗಳ ಪೈಕಿ 9 [...] ಪಾಳೇಗಾರಿ ಜಮೀನ್ದಾರರಿರುವ ತೋರಪಲ್ಲಿಯಲ್ಲಿ ಇದೇ ಮೊದಲಬಾರಿಗೆ ಜಮೀನ್ದಾರರಿಗೆ ಪಾಠ ಕಲಿಸಿದ್ದಾರೆ. ಮಾಜಿ ಎಸ್‌ಎಫ್‌ಐ ಮುಖಂಡ ರಮೇಶ್‌ರವರ ನಾಯಕತ್ವದಲ್ಲಿ ದುಡಿವ ಜನರೆಲ್ಲಾ ಒಂದಾಗಿ ತೊಳ್ಳಪಲ್ಲಿಯ 2 ಸ್ಥಾನಗಳನ್ನು ಗೆದ್ದಿದ್ದಾರೆ.

ನಿರಂತರವಾಗಿ ASATS ವಿದೇಶಿ ಹಣದ ಸಂಸ್ಥೆಯ ಹಿಡಿತದಲ್ಲಿದ್ದ ಪ್ರದೇಶವಾದ ನಾರೆಮದ್ದೆತಲ್ಲಿ ಪಂಚಾಯ್ತಿ ಮತ್ತು ಸೋಮನಾಥಪುರ ಗ್ರಾಮ ಪಂಚಾಯ್ತಿಗಳು ಕ್ರಮವಾಗಿ 3 ಮತ್ತು 2 ಸ್ಥಾನಗಳನ್ನು ಪಡೆದು ಪಂಚಾಯ್ತಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಶಕ್ತಿ ಪಡೆದುಕೊಂಡಿದೆ. ಕಾಂಗ್ರೆಸ್‌ನ ಭದ್ರ ಕೋಟೆಯಾಗಿದ್ದ ತಿಮ್ಮಪಲ್ಲಿ ಗ್ರಾಮ ಪಂಚಾಯ್ತಿಯ 18 ಸ್ಥಾನಗಳ ಪೈಕಿ 11 ಸ್ಥಾನಗಳನ್ನು ಗಳಿಸಿದ್ದೇವೆ.

ಅದೇ ರೀತಿ ನಿರಂತರವಾಗಿ ಕಾಂಗ್ರೆಸ್ ಹಿಡಿತಲ್ಲಿದ್ದ ಪರಗೋಡು ಪಂಚಾಯ್ತಿಯ 14 ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಪಡೆದು ಪಂಚಾಯ್ತಿಯನ್ನು ಸಂಪೂರ್ಣ ಪಡೆದು ಕೊಳ್ಳಲಾಗಿದೆ. ಈ ಹಿಂದೆ ಕೇವಲ 5 ಸ್ಥಾನ ಗಳಿಸಿಕೊಂಡಿದ್ದ ಯಲ್ಲಂಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ 8 ಸ್ಥಾನ ಗಳಿಸಿಕೊಂಡು ಅಧ್ಯಕ್ಷ ಗಾದಿಯನ್ನು ಹೊಂದಲು ಸಾಧ್ಯವಾಗುವ ಪರಿಸ್ಥಿತಿ ಇದೆ.

ಗರವಾಪಲ್ಲಿ ಪಂಚಾಯ್ತಿಯಲ್ಲಿ 4, ದೇವರಗುಡಿ ಪಲ್ಲಿ ಪಂಚಾಯ್ತಿಯಲ್ಲಿ-5, ನಲಪರೆಡ್ಡಿಪಲ್ಲಿ ಪಂಚಾಯ್ತಿ-4, ಬಿಳ್ಳೂರು-3, ಪಾತಿಪಾಳ್ಯ-3, ರಾಶ್ಚೆರವು-4, ಪಾಠಗಾನ [...] ಸ್ಥಾನಗಳನ್ನು ಗಳಿಸಿಪ್ರಮುಖ ಪಾತ್ರ ವಹಿಸಬಹುದಾಗಿದೆ. ಚಾಕವೇಲು ಮತ್ತು ಕಾನಗಮಾಡಲಪಲ್ಲಿ ಪಂಚಾಯ್ತಿಗಳಲ್ಲಿ ತಲಾ ಒಂದೊಂದುಸ್ಥಾನ ಗಳಿಸಿ ಮೊದಲ ಬಾರಿಗೆ ಪಂಚಾಯ್ತಿಯಲ್ಲಿ ಸೇರಲಾಗಿದೆ.

ಗುಡಿಬಂಡೆ ತಾಲೂಕಿನಲ್ಲಿ: ಗುಡಿಬಂಡೆ ತಾಲೂಕಿನಲ್ಲಿ 91 ಸ್ಥಾನಗಳಲ್ಲಿ ಸ್ಪರ್ಧಿಸಿ 43 ಸ್ಥಾನಗಳನ್ನು ಗೆದ್ದುಕೊಳ್ಳಲಾಗಿದೆ. ಕಾಂಗ್ರೆಸ್‌ನ ಭದ್ರ ಕೋಟೆಗಳಂತಿರುವ ಹಂಪಸಂದ್ರ ಗ್ರಾಮಪಂಚಾಯ್ತಿಯಲ್ಲಿ 18 ಸ್ಥಾನಗಳ ಪೈಕಿ 12 ಸ್ಥಾನಗಳನ್ನು, ಬೀಚಗಾನಹಳ್ಳಿ ಪಂಚಾಯ್ತಿಯಲ್ಲಿ 10 ಸ್ಥಾನಗಳಪೈಕಿ 10 ಸ್ಥಾನಗಳನ್ನು, ಸೋಮೇನಹಳ್ಳಿ ಪಂಚಾಯ್ತಿಯಲ್ಲಿ 17 ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಕಾಂಗ್ರೆಸ್ಸಿನಿಂದ ಕಸಿಯಲು ಸಾಧ್ಯವಾಗಿದೆ. ತಿರುಮಣಿಯಲ್ಲಿ 2, ಎಲ್ಲಕೊಂಡ ಪಂಚಾಯ್ತಿಯಲ್ಲಿ-4, ಎಲ್ಲೋಡು ಪಂಚಾಯ್ತಿಯಲ್ಲಿ -2, ಉಲ್ಲೋಡು ಪಂಚಾಯ್ತಿಯಲ್ಲಿ-1 ಸ್ಥಾನ ಪಡೆದಿದೆ.

ಲಕ್ಷಾಂತರ ರೂ.ಗಳು ಸುರಿದರೂ, ಸಾವಿರಾರು ಲೀಟರುಗಳ ಸಾರಾಯಿ ಸುರಿದರೂ ಸೀರೆ, ರವಿಕೆ, ಅಕ್ಕಿ ಹೀಗೆ ಅನೇಕ ರೀತಿಯ ಅವ್ಯವಹಾರಗಳನ್ನು ಮಾಡಿದರೂ ಓಟಿಗೆ ನೂರು, ಇನ್ನೂರು ರೂ.ಗಳು ಕೊಟ್ಟರೂ ಜನ ಬದಲಾವಣೆ ಕೋರಿದರು. ಇದು ಕಾಂಗ್ರೆಸ್ ಮುಖಂಡರ ನಿದ್ದೆಗೆಡಿಸಿದೆ. 5 ತಿಂಗಳ ಸರ್ಕಾರದ ವಿಫಲತೆ, ಬಾಗೇಪಲ್ಲಿ ಶಾಸಕರ ಅದಕ್ಷತೆ ಜನರಲ್ಲಿ ಅಸಂತೃಪ್ತಿ, ಅಸಮಾಧಾನ [...]

ನಗಲ್ಹ್ಯಾಂಗ ನಾನು

ಮಾರ್ಚ್ 8. ಮಹಿಳಾ ವಿಮೋಚನಾ ದಿನ

2000 ದ ಮಾರ್ಚ್ 8 ವಿಶ್ವದ ಎಲ್ಲ ಕಡೆ ಮಹಿಳೆಯರು 'ಜಾಗತಿಕ ಮುನ್ನಡೆ'ಯಲ್ಲಿ ಪಾಲ್ಗೊಳ್ಳಲು ನಿರ್ಧರಿಸುವ ಚರಿತ್ರಾರ್ಹದಿನ
ಅದರ ನೆನಪಿಗಾಗಿ ಕವಯತ್ರಿ ಕೆ.ನೀಲಾ ಬರೆದೊಂದು ಕವನ.

ನಕ್ಕೇನಂದರ ನಗಲ್ಹ್ಯಾಂಗ ನನ ಗೆಳತಿ
ಖಾಲಿ ಕೈಯ ಕಾರ್ಮಿಕರು
ಕಾರ್ಖಾನೆಯೊಳಗೆಲ್ಲ ಮೈರಕ್ತ
ಮಾಡಿಕೊಂಡರೂ
ಹೊಗೆಯುಗುಳೊ ಕೊಳವ್ಯಾಗ
ಕರಕಾಗಿ ಹೋಗುವಾಗ
ನಗಲ್ಹ್ಯಾಂಗ ನಾನು....?

ಪಾಂಡವರು ಪಗಡೆಯಲಿ
ಪಣವಿಟ್ಟ ದ್ರೌಪದಿಯ ಎದೆಯ
ನಿಟ್ಟುಸಿರು ನೋವುಗಳು
ಕೆಂಪು ದೀಪದ ಕೆಳಗೆಲ್ಲ
ಗಡುಸಾದ ಬೇರಾಗಿ
ಬೆಳೆವಾಗ
ನಗಲ್ಹ್ಯಾಂಗ ನಾನು....?
ಬೆವರು ಬಿತ್ತಿ ಬೆಳಕು ಬೆಳೆದವರ
ಮನೆಯಲ್ಲಿ
ಕತ್ತಲೆಯೇ ಕಾಲೂರಿದಾಗ
ಗೆಳತಿ ನನ-ನಿನಗ ಹಸಿವು ಹಾಡಿನ
ಜೋಗುಳವಾಗಿ
ಮಹಡಿ ಮಹಲುಗಳಲ್ಲಿ
ಬೆಳಕ ಬಚ್ಚಿಡುವ ಅಟ್ಟಹಾಸ
ಬೀಡು ಬಿಟ್ಟಿರುವಾಗ
ನಗಲ್ಹ್ಯಾಂಗ ನಾನು....?

ಒಂದಾಗಿ ಉಣ್ಣುವ ಗಂಗಾಳ ಕೆಡುವಿ
ಅಟ್ಟ ಹತ್ತುವ ಅಮಲಿನ ಜುಟ್ಟುಗಳು
ಕೆಲಸಿರದ ಕೈಗಳಿಗೆ ಇಟ್ಟಂಗಿ ಕೊಟ್ಟು
ಅಯೋಧ್ಯೆಗಟ್ಟುವ ಭಟ್ಟಂಗಿಗಳು
ಇಂಡಿಯಾದ ಎದಿಮ್ಯಾಲ
ಗೆರೆ ಎಳೆಯಹೊರಟಾಗ
ನಗಲ್ಹ್ಯಾಂಗ ನಾನು.......?

ಬಿಳಿ ಹಲ್ಲಿನ ಗರಗಸದ ಕೆಳಗೆ
ನಮ್ಮ ಹಸುಕಂದಮ್ಮಗಳ
ಬೆಳದಿಂಗಳಂಥ ನಗೆ ನರಳುತ್ತಿರುವಾಗ
ವಿಶ್ವಬ್ಯಾಂಕಿನ ಖಜಾನೆಯೊಳಗೆ
ಜನಕೋಟಿಯ ಖುಷಿ ಅಡವಿಟ್ಟಿರುವಾ[...]
ಪೇಟೆಂಟ್ ಕಾಯ್ದೆಯ ಉರುಳಿಗೆ
ಮೆದುಳು ಮಾರಿರುವಾಗ
ನಗಲ್ಹ್ಯಾಂಗ ನಾನು ....?

ಗೆಳತಿ, ಗವ್ವೆನ್ನೊ ಕತ್ತಲ ಸೀಳಿ
ಉರಿಪಂಜ ಬೆಳಕಲ್ಲಿ
ಮನಸು ಮಾತುಗಳ ರಾಶಿ
ಒಟ್ಟಬಾರದೇನೇ....?
ಮೆದುಳು ಮಾಮರದ ಮ್ಯಾಲೆ
ಕುಂತ ಕೋಗಿಲೆಯ ಕಂಠ ಕದ್ದವರ
ಗುರುತ್ತಿಡಿದು ನಡೆಯಬಾರದೇನೇ....?

- ಕೆ.ನೀ[...]

ಬದುಕಿನಲ್ಲಿ ಜೊತೆಗೂಡಿದ ಕೆ.ನೀಲಾ ಹಾಗೂ ಕೋದಂಡರಾಂ ಒಟ್ಟಿಗೆ [...]

ಬಜೆಟ್: ದೇಶದ ಬಡವ ವಿದೇಶಿ ಕಿರುಬಗಳ ದವಡೆಗೆ

ಜಿ.ಎನ್.ನಾಗರಾಜ್

ಫೆ. 29ರ ಸಂಜೆ ಗುಂಡೇನಹಳ್ಳಿಯ ನಾರಾಯಣಮ್ಮ ಪಿಳ್ಳಪ್ಪ ತಮ್ಮ 10 ವರ್ಷದ ಮಗಳೊಂದಿಗೆ ಬೆಂಗಳೂರಿನ ಯಶವಂತಪುರದಲ್ಲಿರುವ ನಾರಾಯಣಮ್ಮನ ತಮ್ಮ ಸೂರಪ್ಪನ ಮನೆಗೆ ಬಂದರು. ಮನೆಯೊಳಕ್ಕೆ ಬಂದು ನೋಡಿದರೆ ಅಲ್ಲಿ ಟಿ.ವಿ.ಯ ಮುಂದೆ ಒಂದು ಸಂತೆಯೇ ನೆರೆದಿದೆ. ಅದೇ ವಠಾರದ ಅಕ್ಕ ಪಕ್ಕದಮನೆಗಳ ಗಣೇಶಪ್ಪ, ಕೃಷ್ಣಪ್ಪ, ಸೂರಪ್ಪನ ಜೊತೆಗಾರ ಅವನ ಫ್ಯಾಕ್ಟರಿಯಲ್ಲಿಯೇ ಕೆಲಸ ಮಾಡುವ ಗುಂಡೇನಹಳ್ಳಿಯ ಪಕ್ಕದ ಅಂದ್ರೆನಹಳ್ಳಿಯ ಈರೇಶ್ ಎಲ್ಲಾ ಅಲ್ಲಿಯೇ ಟಿವಿ ಮುಂದೆ ನೆರೆದಿದ್ದರು. ಜೋರುಧ್ವನಿಯಲ್ಲಿ ವಾಗ್ವಾದ ನಡೆಸುತ್ತಿದ್ದರು. ಟಿ.ವಿ.ನೋಡುತ್ತಿದ್ದರು. ಅಕ್ಕ, ಭಾವ ಬಂದುದನ್ನು ಗಮನಿಸಿದರೂ ಸೂರಪ್ಪ ಸ್ವಾಗತದ ನಗೆನಕ್ಕು ಟಿ.ವಿ. ನೋಡುವುದರಲ್ಲಿ ಮುಳುಗಿದ.

ನಾರಾಯಣಮ್ಮನಿಗೂ, ಅವಳ ಗಂಡ ಪಿಳ್ಳಪ್ಪನಿಗೂ ಬೇಸರವಾಯಿತು. ಈ ನಗರಗಳಲ್ಲಿ ಇದೊಂದು ಹೊಸಪೀಡೆ. ಬಂದವರ ಯೋಗಕ್ಷೇಮ ವಿಚಾರಿಸಿ ಬಾಯ್ತುಂಬ ಮಾತನಾಡಿಸುವುದಕ್ಕೂ ಬರಗಾಲ ಈ ಟಿ.ವಿ.ಯಿಂದ ಎಂದುಕೊಂಡರು. ಹಾಗೆಂದು ಟಿ.ವಿ. ಕಾರ್ಯಕ್ರಮಗಳನ್ನು ಅವರೇನು ನೋಡದೆ ಬಿಡುವವರಲ್ಲ. ತಮ್ಮನ ಮನೆಗೆ ಬಂದಾಗೆಲ್ಲಾ ಟಿ.ವಿ. ಮುಂದೆ ಕುಳಿತು ಎರಡು ಸಿನೆಮಾ ನೋಡಿಯೇ ಹೋಗುತ್ತಿದ್ದುದು ನಾರಾಯಣಮ್ಮ. ಅವರ ಮಗಳಂತೂ ಅತ್ತು ಕರೆದುಹಠಮಾಡಿ ಮಾವನ ಮನೆಗೆ ಬರುತ್ತಿದ್ದುದೇ ಟಿ.ವಿ. ನೋಡಲಿಕ್ಕೆ. ಆದರೆ ಈ ಬಾರಿ ನಾರಾಯಣಮ್ಮ ಮತ್ತು ಅವಳ ಗಂಡ ಸೂರಪ್ಪನ ಮನೆಗೆ ಬಂದದ್ದೇ ಒಂದು ಮುಖ್ಯ ಕೆಲಸಕ್ಕೆ. ಸರಿ, ಇನ್ನೇನು ಮಾಡುವುದು. ಟಿ.ವಿಯನ್ನಾದರೂ ನೋಡೋಣ ಎಂದುಕೊಂಡು ನಾರಾಯಣಮ್ಮ ಮತ್ತು ಅವಳ ಕುಟುಂಬ ಅಚ್ಚುಕಟ್ಟಾಗಿ ಚಕ್ಕಮಕಳ ಹಾಕಿ ಕುಳಿತು ಟಿ.ವಿ.ಯತ್ತ ಕಣ್ಣು ಹಾಯಿಸಿದರು.

ಇದೇನಿದು, ಟಿ.ವಿಯಲ್ಲಿ ಕಾಣುತ್ತಿರುವುದೇನು? ಯಾರೋ ಸೂಟು ಬೂಟು ಹಾಕಿದ ನಾಲ್ಕು ಮಂದಿ ದುಬಾರಿ ಕುರ್ಚಿಗಳ ಮೇಲೆ ಕುಳಿತಿದ್ದಾರೆ. ಅದು ಇದೂ ಮಾತನಾಡುತ್ತಿದ್ದಾರೆ. ಮಧ್ಯೆ ಅವರವರ ನಡುವೆ ಏನೋ ವಾಗ್ವಾದ ನಡೆಯುತ್ತಿದೆ. ಎಂಥದೋ ಬೋರು ಹೊಡೆಸುವ ಕಾರ್ಯಕ್ರಮ. ಇದನ್ಯಾಕೆ ಹಾಕಿದ್ದಾರಪ್ಪಾ ಎಂದುಕೊಂಡು ಮೂವರು ಸೂರಪ್ಪ ಮತ್ತು ಗೆಳೆಯರ ಕಡೆಗೆ ಕಣ್ಣು ಹಾಯಿಸಿದರು. ಅವರೇನೋ ಮೈಯೆಲ್ಲಾ ಕಿವಿಯಾದಂತೆ ಗಮನವಿಟ್ಟು ಕೇಳುತ್ತಿದ್ದಾರೆ. "ಅಂತಹದು ಏನಿದೆಯೇ ಅದರಲ್ಲಿ" ನಾರಾಯಣಮ್ಮ ಯಾವುದಾದರೂ ಸಿನಿಮಾಹಾಕೊ ಸೂರ ಎಂದು ಹೇಳುವುದಕ್ಕೆ ಬಾಯಿತೆಗೆದಳು. ಇನ್ನೂ ಬಾಯಿಂದ ಮಾತು ಹೊರಬೀಳುತ್ತಿದ್ದಂತೆಯೇ ಸೂರಪ್ಪ ಬಾಯ ಮೇಲೆ ಬೆರಳಿಟ್ಟು "ಉಷ್" ಎಂದು ಮತ್ತೆ ಟಿ.ವಿ. ನೋಡುವುದರಲ್ಲಿ ಮಗ್ನನಾದ. ನಾರಾಯಣಮ್ಮನಿಗೆ ಆಶ್ಚರ್ಯವಾಯಿತು. "ಇದೇನಿದು ತಮ್ಮನಿಗೆ ನಾನೆಂದರೆ ಎಷ್ಟು ಅಕ್ಕರೆ, ಕಳಕಳಿ ಬಂದಾಗೆಲ್ಲಾ ಒಳ್ಳೆಯ ಉಪಚಾರಮಾಡಿ, ಬಾಡೂಟಹಾಕಿಸಿ, ಎರಡು ದಿವಸವಾದರೂ ಆರಾಮಾಗಿ ಇದ್ದು ನಾಲ್ಕು ಸಿನೆಮಾನೋಡಿ ಹೋಗು ನಿಮ್ಮ ಮನೆಯಲ್ಲಿ ತೋಟದಲ್ಲಿ ಮೈಮುರಿವ ದುಡಿಮೆ ಇದ್ದೇ ಇದೆ" ಎನ್ನುತ್ತಿದ್ದ ತಮ್ಮನಿಂದ ಇಂದು ಮಾತೂ ಇಲ್ಲ ಸಿನೆಮಾವೂ ಇಲ್ಲ ಎಂದುಕೊಂಡು ಅಸಮಾಧಾನವಾಯಿತು. ಬೇರೆದಿನವಾದರೆ ತಮ್ಮನಿಗೆ ಸರಿಯಾಗಿ ಝಾಡಿಸಿ ಬಿಡುವವಳೇ. ಆದರೇನು ಮಾಡುವುದು. ಈ ಬಾರಿ ಬಂದಿರುವುದೇ ಅವನಿಂದ ಉಪಕಾರ ಬಯಸಿ ಅಂತಹುದರಲ್ಲಿ ಸಣ್ಣ ವಿಷಯಕ್ಕೆ ಮಾತಿಗೆ ನಿಂತರೆ ಬಂದಕೆಲಸ ಕೈಗೂಡುವುದಿಲ್ಲ ಎಂದು ಸುಮ್ಮನಾದಳು. ಅಡಿಗೆ ಮನೆಯಲ್ಲಿದ್ದ ತಮ್ಮನ ಹೆಂಡತಿಯ ಕಡೆಗೆ ಗಮನ ಹರಿಸಿದಳು ಸೂರಪ್ಪನ ಹೆಂಡತಿಗೂ ಬೇಜಾರಾಗಿತ್ತು. ಅವರ ನೆಚ್ಚಿನ ಸಿನೆಮಾ ಒಂದು ಬೇರೆ ಛಾನೆಲ್‌ನಲ್ಲಿ ಪ್ರಸಾರವಾಗುತ್ತಿತ್ತು. ಇಡೀ ವಠಾರವೇ ಅದನ್ನು ನೋಡುತ್ತಿದ್ದರೆ ಇವರ ಮನೆಯಲ್ಲಿ ಈ ಕಥೆ. ತಮ್ಮದೇ ಟಿ.ವಿಯಲ್ಲಿ ತಮಗೆ ಬೇಕಾದುದನ್ನು ನೋಡುವಂತಿಲ್ಲ. ಮಕ್ಕಳೇನೋ ಸಿನೆಮಾನೋಡಲು ವಠಾರದ ತಮ್ಮ ಗೆಳೆಯರ ಮನೆಗೆ ಓಡಿದ್ದರು. ಆದರೆ ತಾನು ಗಂಡ ತನ್ನ ಗೆಳೆಯರನ್ನೂ ಕರೆದುಕೊಂಡು ಬಂದು ಯಾವುದೋಕೆಟ್ಟ ಕಾರ್ಯಕ್ರಮ ಹಾಕಿಕೊಂಡು ಕುಂತಿದ್ದಾನೆ. ಚುನಾವಣೆ ರಿಸಲ್ಟ್ ಬರುವಾಗ ಬಿಟ್ಟರೆ ಗಂಡ ಈ ರೀತಿ ಎಂದೂ ಮಾಡುತ್ತಿರಲಿಲ್ಲ ಎಂದು ಅವಳು ಯೋಚಿಸುತ್ತಿದ್ದಳು.

ನಾರಾಯಣಮ್ಮ ತನ್ನ ನಾದಿನಿಯ ಬಳಿ ಸರಿದು ಪಿಸುಮಾತಿನಲ್ಲಿ ಏನೇ ಅದು ನಿನ್ನಗಂಡ ನನ್ನೊಂದಿಗೆ ಮಾತು ಕೂಡ ಆಡದೆ ಅದ್ಯಾವುದೋ ಹಾಕಿಕೊಂಡು ಅಷ್ಟು ಅಕ್ಕರೆಯಿಂದ ನೋಡುತ್ತಿದ್ದಾನಲ್ಲ ಎಂದಳು. ಅವಳು ತನ್ನ ತಿಳುವಳಿಕೆ ಪ್ರದರ್ಶಿಸಲು ಅವಕಾಶವಾಯಿತೆಂದು ಆರಂಭಿಸಿದಳು. "ಅದೇನೋ ಬಜೆಟ್ ಅಂತೆ ಬಜೆಟ್ ಅತ್ತಿಗೆ. ಊರಲ್ಲೆಲ್ಲಾ, ರಾಜಕುಮಾರ್ ಸಿನೆಮಾ "ಬಂಗಾರದ ಮನುಷ್ಯ" ನೋಡುತ್ತಿದ್ದಾರೆ ಅಪರೂಪಕ್ಕೆ ಬಂದಿದೆ ಆದರೆ ನಮ್ಮನೆ ಗಂಡಸರಿಗೇನು ಹೇಳೋಣ ಅದೇನೋ ಹಾಕ್ಕೊಂಡುಕೂತವ್ರೆ ಎಂದು ವಟಗುಟ್ಟಿ ತನ್ನ ಅಸಮಧಾನ ಹೊರಹಾಕಿದಳು.

ಈ ಮಾತು ಕಿವಿಗೆ ಬಿದ್ದದ್ದೇ ಅವಳ ಗಂಡ ಕುಳಿತಲ್ಲೇ, "ಏನೇ ಅದು ನಿಂದು ಅಕ್ಕನ ಹತ್ರ, ಅವರಿಗಂತೂ ನಾವೇನು ನೋಡ್ತಿದೀವಿಯಂತ ಗೊತ್ತಾಗೊದಿಲ್ಲ. ನಿನಗೇ ಆಗ್ಲಿಂದ ಅಷ್ಟು ಸತಿ ಹೇಳಿದ್ರೂ ಗೊತ್ತಾಗಲಿಲ್ಲವ. ನಮ್ಮ ಹಣೇಬರಹಕಣೆ ಅದು ಟಿವಿಲಿ ಬರ್ತಾಇರೋದು ಈಗಿನ ಕಾಲ್ದಾಗೆ ನಮ್ಮ ಹಣೆಬರ ಬರೆಯೋದು ಬ್ರಮ್ಮ ಅಲ್ಲಕಣೇ. ಇವರು ಈ ಟಿ.ವಿಲಿ ಕಾಣ್ತಾ ಇದಾರಲ್ಲ ಇವರು. ಮಧ್ಯಾಹ್ನ ನಾನು ನೋಡ್ತಾ ಇದ್ದನಲ್ಲ, ಲೋಕಸಭೆ ಸೀನು ಅದರಲ್ಲಿ ಯಾವನೋ ಒಬ್ಬ ಗಂಟೆಗಟ್ಲೆ ಏನೋ ಹೇಳ್ತಿದ್ದನಲ್ಲ ಅವನು, ನಮ್ಮದೇಶದ ಹಣಕಾಸು ಮಂತ್ರಿ ಅವನು ಬರೆಯೋದು ಅವನು ನಮ್ಮ ಹಣೇಬರ ಬರೆದ ಇವರು ಅದನ್ನು ಓದಿನಮಗೆ ಅರ್ಥಮಾಡಿಹೇಳ್ತಾ ಅವ್ರೆ. ಇವರು ಹಳೇಕಾಲದ ಪುರೋಹಿತರತರ ತಮಗೆ ಏನುಬೇಕೋ ಅದನ್ನು ಓದ್ಕೊಂತಾರೆ ಅದರಲ್ಲಿ ನಮಗೆ ಒಳ್ಳೆದಾಗೋಮಾತೇನಾದ್ರ ಇದ್ರೆ ಅದನ್ನ ಬೊಂಬಡಬಜಾಯಿಸಿ ಹೇಳ್ತಾರೆ. ನಮಗೆ ಕೆಟ್ಟದಾಗೋದಿದ್ರೆ ಮುಚ್ಚಿಡ್ತಾರೆ. ಹಿಂಗಾಗಿ ಅವರ ಮಾತುಗಳ ಸಂದಿನಲ್ಲಿ ನಮಗೆ ಏನಾದ್ರು ಸ್ವಲ್ಪ ಅರ್ಥ ಆಗ್ಬೇಕು ಅಷ್ಟೇ. ಬನ್ನಿ ನೀವು ಕೇಳಿ ಇದು ನಮ್ಮ ನಿಮ್ಮ ಎಲ್ಲರ ಭವಿಷ್ಯದ ಇಸ್ಯ. ಈ ವರ್ಷ ನಮಗೆ ಏನೇನು ಎಡವಟ್ಟು ಕಾದಿದೆಯೋ ಈಗೆ ತಿಳಕೊಂಡ್ರೆ ಒಳ್ಳೇದು. ಭಾವ ನೀನೂ ಕೇಳು ರೈತಾಪಿ ಜನದ್ದಂತೂ ಮೊದಲೇ ಗೋಳು ಕೇಳೊರ್‍ಯಾರಿಲ್ಲ, ಅದ್ರ ಜೊತೆ ಈಗೇನೊ ಗೊಬ್ರದ ಬೆಲೆ ಜಾಸ್ತಿಮಾಡ್ತೀವಿ ಅಂತಿದ್ರು ಅದೇನು ಅಂತ ನನಗ್ಪೂರ್ತಿ ಅರ್ಥ ಆಗಿಲ್ಲ ಅದ್ಕೆ ಕೇಳ್ತಾ ಇದೀನಿ ನೀನು ಕೇಳು.


ಎಲ್ಲೋ ನೋಡುತ್ತ ಇಲ್ಲಿಯವರೆಗೂ ಇದು ಯಾವುದೂ ತನಗೆ ಸಂಬಂಧವಿಲ್ಲದವನಂತೆ ಕುಳಿತಿದ್ದ ಪಿಳ್ಳಪ್ಪ ಯಾವುದೊ ಯೋಚನೆಯಿಂದ ಗಡಬಡಿಸಿ ಆಂ, ಏನು ಗೊಬ್ರದ ಬೆಲೆ ಜಾಸ್ತಿಮಾಡ್ತಾರಂತ, ತಿರಗಾಹಂಗಂತ ಹೇಳ್ತಾ ಅವ್ರ. ಮತ್ತೇನಪ್ಪ ಬಂತು ವಕ್ರ ಎಂದು ಟಿ.ವಿಕಡೆಗೆ ಕಣ್ಣು ನೆಟ್ಟ.

ಟಿ.ವಿ.ಯಲ್ಲಿ ಚರ್ಚೆ ಮಾಡುತ್ತಿದ್ದ ನಾಲ್ಕು ಜನ ಬುದ್ಧಿವಂತರ ಮಾತುಗಳನ್ನು ಕೇಳುತ್ತಾ ಅವರಿಗೆ ತಮ್ಮ ಹಳ್ಳಿಯ ಪಂಚಾಯ್ತಿಕಟ್ಟೆಗಳ ನೆನಪು ಬಂದಿತು. ಜನರೆಲ್ಲಾ ಕೆಳಗೆ ಜಾಗಸಿಕ್ಕಿದಲ್ಲೆಲ್ಲಾ ಕುಂತು ಕಾಯುತ್ತಿರುವಾಗ ಕಟ್ಟೆಯ ಮೇಲೆ ಬೇವು, ಅರಳಿ ಮರದ ನೆರಳಿನಲ್ಲಿ ಹಾಯಾಗಿ ಕೂತು ಯಾರನ್ನು ಬಲಿಕೊಡಬೇಕು ಎಂದು ಮಾತನಾಡಿಕೊಳ್ಳುವ ಪಂಚಾಯತಿ ಧಣಿಗಳಂತೆ ಕಂಡರು ಅವರು.

ಆ ಬುದ್ಧಿವಂತರಾಡುತ್ತಿದ್ದ ಭಾಷೆ ಅವರ ಕಿವಿಗೆ ಕನ್ನಡದಂತೆಯೇ ಕೇಳಿಸುತ್ತಿತ್ತು. ಆದರೆ ಕನ್ನಡದಲ್ಲಿಯೇ ಮಿಂದು ಬೆಳೆದ ಆ ಮನಸ್ಸು, ಬುದ್ಧಿಗಳಿಗೆ ಆ ಮಾತುಗಳು ನಿಲುಕದೆ ಕೇವಲ ಶಬ್ದವಾದುವು. ಆಗೊಮ್ಮೆ ಈಗೊಮ್ಮೆ ಅವರಿಗೆ "ಫರ್ಟಿಲೈಸರ್ಸ್ ಬೆಲೆ, ಶೇ 15 ಸಬ್ಸಿಡಿ ಅಂದ್ರೆ ಸಹಾಯಧನಕಡಿತ" ಕಾರ್ಗಿಲ್ ಯುದ್ಧದವೆಚ್ಚ ಪ್ರಧಾನ ಮಂತ್ರಿಗ್ರಾಮೋದಯ ಯೋಜನೆ ಪಡಿತರ ಅಕ್ಕಿ ಗೋಧಿಬೆಲೆ ಏರಿಕೆ ಎಂಬಂತಹ ಮಾತುಗಳು ಕೇಳುತ್ತಿದ್ದವು. ಆದರೆ ಏನು ಹೇಳುತ್ತಿದ್ದಾರೆ ಎಂಬುದು ಅರ್ಥವಾಗಲಿಲ್ಲ.

ಹಳ್ಳಿಯಲ್ಲಿ ಬಸ್ ಹತ್ತಿದಾಗಿಂದ ತಮ್ಮನ ಮನೆ ತಲುಪುವವರೆಗೆ ತಮ್ಮ ಹಣೆಬರಹದ ಬಗ್ಗೆಯೇ ಯೋಚಿಸುತ್ತಾ ಅದನ್ನು ಹಳಿಯುತ್ತಾ ಬಂದಿದ್ದ ನಾರಾಯಣಮ್ಮ ತನ್ನ ತಮ್ಮ ಹಣೇಬರಹ ಬರೆಯುವವರು ಓದುವವರು ಎಂಬೆಲ್ಲಾ ಮಾತುಗಳನ್ನು ಕೇಳಿ ತಾನು ತನ್ನ ನಾದಿನಿಯೊಂದಿಗೆ ಟಿ.ವಿ. ನೋಡುತ್ತಾ ಕುಳಿತಳು.

ತನ್ನ ತಮ್ಮನೂ ಅವರ ಸ್ನೇಹಿತರೂ ಆಗೊಮ್ಮೆ ಈಗೊಮ್ಮೆ ಮಾಡುತ್ತಿದ್ದ ಉದ್ಗಾರಗಳೂ ಕಿವಿಗೆ, ಬೀಳುತ್ತಿದ್ದವು. "ಸಿಗರೇಟ ಬೆಲೆ ಮತ್ತೆ ಜಾಸ್ತಿ ಮಾಡಿಬಿಟ್ಟರಲ್ಲೊ" ಎಂದ ಒಬ್ಬ "ಥೂ ನಿನ್ನ ಸಿಗರೇಟ್ ಬೆಲೆ ಮಾತ್ರಾನೇ ಏನು ನೋಡು ಅವನು ಹೇಳ್ತಿದಾನೆ ಶೇ. 8 ತೆರಿಗೆ ಇದ್ದವ್ನೆಲ್ಲಾ ಯಾವ್ನ ಅಂತ ಹುಡುಕಬೇಕಾಯಿತು. ಈ ಟಿ.ವಿ.ಯವರೂ ಹೇಳಲ್ಲ. ಪೇಪರ್‌ನಲ್ಲಿ ಏನಾದ್ರೂ ಸ್ವಲ್ಪ ಹಾಕಬಹುದು. ನೋಡ್ಬೇಕು" ಎಂದವನು ಮತ್ತೊಬ್ಬ ಹೀಗೇ ಸಾಗಿತ್ತು.



ಕಾರ್ಯಕ್ರಮ ಮುಗಿಯಿತು ಆಕರ್ಷಕ ಧಾರವಾಹಿಯೊಂದು ಆರಂಭವಾಯಿತು. ಆದರೂ ಸೂರಪ್ಪ ಮತ್ತವನ ಸಂಗಡಿಗರೆಲ್ಲಾ ಚರ್ಚೆಯಲ್ಲಿಯೇ ಮುಳುಗಿದ್ದರು. ಅವರ ಮಾತುಗಳಿಂದ ಏನೋ ದೊಡ್ಡ ತಾಪತ್ರಯವೇ ಆಗಿದೆ. ಎಂದೆನಿಸಿದ ಹೆಂಗಸರೂ, ಪಿಳ್ಳಪ್ಪನೂ ಅವರ ಮಾತುಗಳಿಗೆ ಗಮನವಿತ್ತರು. ಸೂರಪ್ಪನೂ ಇವರಿಗೆ ಆಗಾಗ್ಗೆ ವಿವರಿಸಿ ಹೇಳಲಾರಂಭಿಸಿದ.ಸೂರಪ್ಪ ಮತ್ತು ಕೃಷ್ಣಪ್ಪನದೇ ಆ ಚರ್ಚೆಯಲ್ಲಿ ಪ್ರಧಾನ ಪಾತ್ರ. ಅವರ ಚರ್ಚೆಯಿಂದ ಪಿಳ್ಳಪ್ಪನಿಗೆ ನಾರಾಯಣಮ್ಮನಿಗೆ ಅರ್ಥವಾದದಿಷ್ಟು.

ವಿದೇಶದಿಂದ ಈಗಾಗಲೇ 2000 ಕ್ಕೂ ಹೆಚ್ಚು ವಸ್ತುಗಳ ಆಮದನ್ನು ಮಾಡಲು ಅವಕಾಶಕೊಟ್ಟಿರುವುದರಿಂದ ಕೃಷಿಯ ಹಾಗೂ ಕೈಗಾರಿಕೆಯ ಉತ್ಪನ್ನಗಳ ಬೆಲೆಗಳು ಮತ್ತಷ್ಟು ಕುಸಿಯುತ್ತವೆ. ಅದರ ಜೊತೆಗೆ ಬಜೆಟ್‌ನಲ್ಲಿ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಇದ್ದ ತೆರಿಗೆಯನ್ನು ಕಡಿಮೆ ಮಾಡಿದೆ. ಶೇ 40 ರಿಂದ 33 ಕ್ಕೆ ಆಗಲೆ ತನ್ನ ತೋಟದಲ್ಲಿ ಬೆಳೆದ ಕಬ್ಬಿನ ಹಾಗೂ ಕಡಲೇಕಾಯಿ(ಶೇಂಗಾ), ಈರುಳ್ಳಿ(ಉಳ್ಳಾಗಡ್ಡೆ) ಬೆಲೆ ಕುಸಿದು ಹೋಗಿದ್ದು ಫಲವನ್ನು ಉಂಡಿದ್ದ ಪಿಳ್ಳಪ್ಪ ಇದರಿಂದ ಅವನು ಬೆಳೆಗಳಿಗೆಂದೇ ಮಾಡಿದ ಸಾಲವನ್ನು ತೀರಿಸಲಾಗಿರಲಿಲ್ಲ. ಬಡ್ಡಿಗೆ ಸಾಲ ಕೊಟ್ಟಿದ್ದವರು ಅವನ ಬೆನ್ನಹಿಂದೆ ಬಿದ್ದಿದ್ದರು. ಅವರ ಸಾಲ ತೀರಿಸಲು ಮುಂದೆ ಬರುವ ಬೆಳೆಯನ್ನೆಲ್ಲಾ ಕೊಡಕಾಗುತ್ತಿತ್ತು. ಆದರೆ ಬೆಳೆ ಗೆ ಬೇಕಾದ ಬೀಜ ಕೊಳ್ಳಲೂ ಒಂದು ಪೈ ಅವನ ಬಳಿ ಉಳಿದಿರಲಿಲ್ಲ. ಆದಕ್ಕಾಗಿಯೇ ತನ್ನ ಭಾವಮೈದುನನ್ನು ಕೇಳಲು ಹೆಂಡತಿಯನ್ನು ಹೊರಡಿಸಿಕೊಂಡು ಬಂದಿದ್ದ. ಆದರೆ ಸೂರಪ್ಪ, ಕೃಷ್ಣಪ್ಪ ಹೇಳುತ್ತಿದ್ದುದನ್ನು ನೋಡಿದರೆ ಮುಂದಿನ ವರ್ಷದ ಬೆಳೆಯಗತಿಯೂ ಅದೇ ಆಗುತ್ತದೆ ಎಂದೆನಿಸಿತು. ಆದರೆ ಅವನಿಗೊಂದು ಆಶೆಯಿತ್ತು. ಬೇರೆ ಯಾವುದಾದರೂ ತರಕಾರಿ ಮೊದಲಾದುವುಗಳನ್ನು ಬೆಳೆದರೆ ಈ ಬೆಲೆ ಕುಸಿತದಿಂದ ತಪ್ಪಿಸಿಕೊಳ್ಳಬಹುದು ಎಂದು. ಸೂರಪ್ಪನನ್ನು ಈ ಬಗ್ಗೆ ಪ್ರಶ್ನೆ ಮಾಡಿದ. ಸೂರಪ್ಪ ಹೇಳಿದ "ಅಯ್ಯೋ ಭಾವ ನಿನಗೆಲ್ಲೋ ಹುಚ್ಚು. ನೋಡು 2000 ವಸ್ತುಗಳನ್ನು ಆಮದು ಮಾಡಲು ಅವಕಾಶ ಕೊಟ್ಟಿದ್ದಾರೆ. ಈ ವರ್ಷ ಕೆಲವು ಬೆಳೆಗಳು ಕುಸಿದಿವೆ ಮುಂದಿನ ವರ್ಷ ಮತ್ತಷ್ಟು ಯಾವ ಬೆಳೆ ಯಾವಾಗ ಎಂದೇನಿಲ್ಲ. ನಮ್ಮ ಕೈಗಾರಿಕೆಗಳಲ್ಲಿಯೂ ಹೀಗೆ ಆಗಿದೆ. ಉಕ್ಕು, ಕಾಗದ, ಟೆಲಿಫೋನ್, 5-10 ಸಾವಿರಜನಕ್ಕೆ ಉದ್ಯೋಗ ನೀಡಿದ ಯಾವುದನ್ನು ಬೇಕಾದರೂ ನೋಡು ಹೀಗೆ ಆಗಿವೆ ಅಥವಾ ಆಗುತ್ತಿವೆ. ದೊಡ್ಡ ದೊಡ್ಡ ಕೈಗಾರಿಕೆಗಳೇ ಮುಚ್ಚಿಕೊಳ್ಳುತ್ತಿವೆ. ಇನ್ನು ಉಳಿದವರ ಪಾಡೇನು"

ಅದಕ್ಕೆ ಕೃಷ್ಣಪ್ಪ ದನಿಗೂಡಿಸಿದ 'ಈಗತಾನೆ ಟಿ.ವಿ.ಯಲ್ಲಿ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಅಂತ ಹೇಳಿಕೊಂಡ್ನಲ್ಲಾ ಅವನ ಹೇಳಿದ್ದು ಕೇಳಿದೆಯಾ? ಆಮದು ಸುಂಕ ಕಡಿಮೆ ಮಾಡಿ ಎಕ್ಸೈಸ್ ಸುಂಕ ಅಂತ ಯಾವುದನ್ನೂ ಜಾಸ್ತಿ ಮಾಡಿದ್ದರಿಂದ ಅವರು ತಯಾರು ಮಾಡೋದರ ಬೆಲೆ ಜಾಸ್ತಿಯಾಗುತ್ತಂತೆ. ವಿದೇಶಿ ಮಾಲಿನ ಬೆಲೆ ಕಡಿಮೆ ಆಗುತ್ತಂತೆ. ಈ ಫ್ಯಾಕ್ಟರಿಗಳೆಲ್ಲಾ ಮುಚ್ಚಿಕೊಳ್ಳುವಾಗೆ ಆಗುತ್ತಂತೆ.

ಪಿಳ್ಳಪ್ಪ: ಹಾಗಾದರೆ ಆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡೋ ನಿಮ್ಮಗತಿ ಏನು?

ಸೂರಪ್ಪ: ನಮ್ಮ ಗತಿನೂ ನಿಮ್ಮ ಗತೀನೇ ಫ್ಯಾಕ್ಟರಿಗಳು ಮುಚ್ಚಿಕೊಂಡು ಕಾರ್ಮಿಕರು ಕೆಲಸ ಕಳೆದುಕೊಂತಾರೆ. ರೈತರು ದಿವಾಳಿಯಾಗಿ ಹೊಲಮನೆ ಮಾರಿಕೊಂತಾರೆ.


ಪಿಳ್ಳಪ್ಪ: ಕೂಲಿಕಾರರಾಗಿ ಬದ್ಕಬೇಕಾಗತ್ತೆ.ಅಂಗೆ ಅಂತ ಕಾಣತ್ತಪ್ಪ. ಈಗಾಗಲೇ ಬೀಜ ಔಷಧಿ ಬೆಲೆಗಳು ಏರಿ ಕುಂತವೆ. ಇನ್ನ ಗೊಬ್ರದ ಬೆಲೆನೂ ಜಾಸ್ತಿ ಆಯ್ತದಂತಲ್ಲಪ್ಪ. ನಾವೇನು ಬೇಸಾಯ ಮಾಡೋದು. ಎಲ್ಲಿಂದ ತರೋದಪ್ಪ ದುಡ್ಡು. ಬ್ಯಾಂಕ್‌ಗಳ, ಸಹಕಾರಿ ಸಂಘಗಳು ಏನಾದರೂ ಕೊಟ್ರೆ ಬದುಕ್ಕೋಬೌದು ಆದ್ರೆ.......

ಸೂರಪ್ಪ: ನೀನು ಬ್ಯಾಂಕು ಅಂದ್ಯಲ್ಲಾ ನೋಡು ಎಲ್ಲಾ ಬ್ಯಾಂಕುಗಳ ಶೇರನ್ನು ಖಾಸಗಿಯವರಿಗೆ ಮಾರಿಬಿಡ್ತಾರಂತೆ ಸರ್ಕಾರದ್ದು ಅನ್ನೋ ಬ್ಯಾಂಕುಗಳು ಸಾಹುಕಾರಿಯಾಗಿ ಬಿಡ್ತವಂತೆ.

ಕೃಷ್ಣಪ್ಪ: ಸರಿಯಾಗಿ ಹೇಳ್ದೆ ನೋಡು. ಬ್ಯಾಂಕ್‌ಗಳಿಂದ ದೊಡ್ಡದೊಡ್ಡ ಶ್ರೀಮಂತರು ತಗೊಂಡಿರೋ ಸಾಲ 58,000 ಕೋಟಿ ರೂಪಾಯಿ ವಾಪಸ್ಸೇ ಕೊಟ್ಟಿಲ್ವಂತೆ. ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ಕೊಟ್ಟಿಲ್ವಂತೆ. 40,000 ಕೋಟಿ ರೂಪಾಯಿ ಏನೋ ಅದೇ ದುಡ್ಡಿನಲ್ಲೇ ಅವರು ಬ್ಯಾಂಕ್‌ಗಳನ್ನೇ ಕೊಂಡ್ಕೊಂಡು ಬಿಡ್ತಾರಪ್ಪ. ಇನ್ನೂ ಅವರು ಸಾಹುಕಾರಿ ಬ್ಯಾಂಕ್‌ಗಳೇ ಬ್ಯಾಂಕ್‌ಗಳಿಂದ ತಗೊಂಡಿರೋ ಸಾಲದ ಹಣವೇ ಬಳಸಿ ಬ್ಯಾಂಕ್‌ಗಳನ್ನು ಕೊಂಡ್ಕೊಂಡು ತಮ್ಮ ಜೋಬಿನಾಗಿಟ್ಕೊಂಡು ಬಿಡ್ತಾರೆ.

ಪಿಳ್ಳಪ್ಪ: ಹಂಗಾದ್ರೆ, ಏನಪ್ಪಾ ನಾವು ಬದುಕೊದು ಏನೋ ಅಷ್ಟ್ರೋ ಇಷ್ಟ್ರೋ ರೈತರಿಗೆ, ಕೂಲಿಮಾಡೋರಿಗಿಂತ ಸಿಗಾ ಸಾಲಕ್ಕೂ ಮೋಸಾ ಅಲ್ಲಪ್ಪ.

ಸೂರಪ್ಪ: ಅಷ್ಟೇ ಅಲ್ಲ ಕೂಲಿ ನಾಲಿ ಮಾಡೋರು ಸಣ್ಣ ಪಟ್ಟ ರೈತರೂ ಹಸಿರು ಕಾರ್ಡ್‌ನ ಅಂತ ರೇಷನ್ ತಗೊಂತಿದ್ರಲ್ಲ ಅವರ ಅಕ್ಕಿ ಬೆಲೆ 5.10 ರೂಪಾಯಂತೆ. ಕೇಸರಿ ಕಾರ್ಡ್ ಗೋಧಿ ಬೆಲೆ 4.01 ರೂಪಾಯಂತೆ. ಕೇಸರಿ ಕಾರ್ಡ್ ತಾನೆ ನಿನ್ನತ್ರ ಇರೋದು ಭಾವ ಅವರ್ಗೆಲ್ಲಾ



ಕೃಪೆ: ಪ್ರಜಾಶಕ್ತಿ

ಸ್ವರ್ಣಾಂಧ್ರ ಕಾದು ಮರ



(ಹೊನ್ನಿನ ಆಂಧ್ರವಲ್ಲ ಮರಣದ ಆಂಧ್ರ)

ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಚಂದ್ರಬಾಬು ನಾಯ್ಡುರವರನ್ನು ಕಾಪಿ ಮಾಡುತ್ತಾ ವಿದೇಶಿಯರಿಗೆ ರತ್ನಗಂಬಳಿ ಹಾಸಿ ಕಾಯುತ್ತಾ ಕುಳಿತಿರುವುದು ನಮಗೆಲ್ಲಾ ಗೊತ್ತಿದೆ. ವಿಶ್ವ ಬ್ಯಾಂಕ್ ಸಾಲ, ವಿದೇಶಿ ಬಂಡವಾಳ ಇವೆರಡೇ ಅವರ ದಿವ್ಯ(!) ಮಂತ್ರ.
ಇಂತಹ ಸಂದರ್ಭದಲ್ಲಿ ಆಂಧ್ರದಲ್ಲೇನು ನಡೆದಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಹೊನ್ನಿನ ಭೂಮಿಯನ್ನಾಗಿ ಮಾಡುತ್ತೇನೆನ್ನುವ ಚಂದ್ರಬಾಬು ನಾಯುಡುವಿನ ಆಂಧ್ರದಲ್ಲಿ ನೂರಾರು ರೈತರು ಆತ್ಮಹತ್ಯೆಯನ್ನೇಕೆ ಮಾಡಿಕೊಳ್ಳುತ್ತಿದ್ದಾರೆ. ಹೈದರಾಬಾದ್ ಹಾಂಕಾಂಗ್ ಅಥವಾ ಸಿಂಗಾಪುರವಾಗುವ ಕನಸಿನಡಿ ನರಳುತ್ತಿರುವ ಜನತೆಯ ನೋವನ್ನು ಬಿಡಿಸಿಟ್ಟಿದ್ದಾರೆ ಸೀತಾರಾಂ ಯೆಚೂರಿ.

ಕರ್ನಾಟಕಕ್ಕೆ ವಿಶ್ವಬ್ಯಾಂಕ್ 12 ಸಾವಿರ ಕೋಟಿ ರೂ. ಸಾಲ ಕೊಡಲು ಒಪ್ಪಿಸಿರುವುದು ತಮ್ಮ ದೊಡ್ಡಸಾಧನೆಯೆಂಬಂತೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬೀಗುತ್ತಿದ್ದಾರೆ. ಈ ಸಾಲಕ್ಕೆ ರಾಜ್ಯದ ಜನತೆಯ ಹಿತಾಸಕ್ತಿಗೆ ವಿರುದ್ಧವಾದ ಯಾವುದೇ ನೀತಿಯನ್ನು ಹೇರುವ ಗುಪ್ತ ಶರತ್ತುಗಳಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನೇ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ವಿಶ್ವಬ್ಯಾಂಕ್ ಒಂದೂವರೆ ವರ್ಷದ ಹಿಂದೆ ಹೇಳುತ್ತಾ ತಿರುಗುತ್ತಿದ್ದರು. ಸಿಪಿಐ(ಎಂ)ನ ಆಂಧ್ರ ರಾಜ್ಯ ಸಮಿತಿ ಆಂಧ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ನಡುವಣ ಗುಪ್ತ ಮಾತುಕತೆಗಳು - ಒಪ್ಪಂದಗಳನ್ನು ಸಂಗ್ರಹಿಸಿ ಪುಸ್ತಕವೊಂದನ್ನು ತಂದಿತ್ತು. ಆ ಪುಸ್ತಕದಲ್ಲಿ ವಿಶ್ವಬ್ಯಾಂಕ್ ಹಾಕಿರುವ ಶರತ್ತುಗಳು, ಹೊಂದಿರುವ ಜನ-ವಿರೋಧಿ ನೀತಿಗಳು, ರಾಜ್ಯದ ಜನತೆಯ ಮೇಲೆ ಅದರ ದುಷ್ಪರಿಣಾಮಗಳ ಬಗ್ಗೆ ವಿಶ್ಲೇಷಿಸಿತ್ತು. ಈ ವಿಶ್ಲೇಷಣೆಯ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ವಿಶ್ವಬ್ಯಾಂಕಿನ 12 ಸಾವಿರ ಕೋಟಿ ಸಾಲ ಚಂದ್ರಬಾಬು ನಾಯ್ಡು ಅವರು ಹೇಳುವಂತೆ 'ಸುವರ್ಣ' ಆಂಧ್ರವಾಗುವುದಿಲ್ಲ. ಸಾಲದ ಹೊರೆ ಬಡವರ ಬವಣೆಗಳಿಂದ ಆಂಧ್ರದ 'ಮರಣ' ಆಗುತ್ತದೆ ಎಂದು ಸಾರುತ್ತದೆ ಈ ವಿಶ್ಲೇಷಣೆ. ಕರ್ನಾಟಕದಲ್ಲಿ ಇಂತಹುದೇ ವಂಚನೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಪ್ರಸ್ತುತ.

ಏನೂ ತಿಳಿಯದ ಮೂರ್ಖರನ್ನು ಬಿಟ್ಟರೆ, ವಿಶ್ವಬ್ಯಾಂಕ್ ಯಾವ ಮಾರವಾಡಿಗೂ ಕಮ್ಮಿ ಇಲ್ಲ ಎಂದು ಎಲ್ಲರಿಗೂ ಗೊತ್ತು. ಅದು ಅತ್ಯಂತ ಕಠಿಣ ಮತ್ತು ಹಾನಿಕಾರಕ ಶರತ್ತುಗಳನ್ನು ಹಾಕದೆ, ಅಭಿವೃದ್ಧ ಬಂಡವಾಳಶಾಹಿ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾದ ನೀತಿಯನ್ನು ಹೊರಿಸದೆ ಸಾಲ ಕೊಡುವುದಿಲ್ಲ - ಎಂಬುದು ಎಲ್ಲರಿಗೂ ಗೊತ್ತು. ಆದರೂ ಚಂದ್ರಬಾಬು ನಾಯ್ಡು ವಿಶ್ವಬ್ಯಾಂಕ್ ಸಾಲದ ಮೂಲಕ ಆಂಧ್ರವನ್ನು 'ಸುವರ್ಣ'ಮಾಡುವ ತಿರುಕನ ಕನಸು ಕಾಣುತ್ತಿದ್ದಾರೆ. ಈ ತನ್ನ ಕನಸು, ಯೋಜನೆಗಳನ್ನು ಇಡೀ ದೇಶವೇ, ಜಗತ್ತೇ ಹೊಗಳುತ್ತಿದೆ ಎಂದು ಬೆನ್ನು ಚಪ್ಪರಿಸಿಕೊಂಡಿದ್ದಾರೆ.

ವಿಶ್ವಬ್ಯಾಂಕ್ ಆಂಧ್ರಕ್ಕೆ ಸಾಲ ಕೊಡುವ ಮೊದಲು, ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿವರವಾದ ಅಧ್ಯಯನ ಮಾಡಿತು.

ಅಧ್ಯಯನ ಮಾಡಿದ ಮೇಲೆ ವಿಶ್ವಬ್ಯಾಂಕ್ ಈ ವಿಶ್ಲೇಷಣೆ ಮಾಡಿತು.

- ರಾಜ್ಯದ ಬೆಳವಣಿಗೆ ಮೂಲ ಸೌಕರ್ಯಗಳ ಅಭಾವದಿಂದ ಕುಂಠಿತಗೊಂಡಿದೆ.
- ರಾಜ್ಯ ಸರ್ಕಾರ ಸಂಪನ್ಮೂಲಗಳ ಅಭಾವದಿಂದ ಮೂಲ ಸೌಕರ್ಯಗಳು ಮತ್ತು ಸೇವೆಗಳಲ್ಲಿ ಸಂಪನ್ಮೂಲ ತೊಡಗಿಸುತ್ತಿಲ್ಲ.
- ರಾಜ್ಯದ ಆದಾಯ ಸರ್ಕಾರಿ ನೌಕರರ ವೇತನ, ಸಾರ್ವಜನಿಕ ಕ್ಷೇತ್ರದ ಉದ್ಯಮಗಳು, ಅಕ್ಕಿ ಮುಂತಾದ ಸಬ್ಸಿಡಿ, ಸಾಲದ ಬಡ್ಡಿ ಪಾವತಿಗೆ ಹೆಚ್ಚಾಗಿ ಖರ್ಚಾಗುತ್ತಿದೆ.
- ಪಾನ ನಿಷೇಧದಿಂದಾಗಿ ಎಕ್ಸೈಸ್ ಆದಾಯ ಕಡಿಮೆಯಾಗಿದೆ.

ರಾಜ್ಯ ಸರ್ಕಾರದ ಜತೆ ಗುಪ್ತ ಮಾತುಕತೆ-ಒಪ್ಪಂದ

ವಿಶ್ವಬ್ಯಾಂಕ್ ರಾಜ್ಯದ ಆರ್ಥಿಕ 'ಸುಧಾರಿಸಿ' ಬೆಳವಣಿಗೆ ಸಾಧಿಸಲು ಈ ಕೆಳಗಿನ ಸಲಹೆಗಳನ್ನು ಮಾಡಿತು.

- ನೌಕರರ ವೇತನ, ಸಾರ್ವಜನಿಕ ಕ್ಷೇತ್ರದ ಉದ್ಯಮಗಳಿಗೆ ಬಜೆಟ್ ಹಣ, ಅಕ್ಕಿಗೆ ಸಬ್ಸಿಡಿ ಮುಂತಾದ ಖರ್ಚು ಕಡಿಮೆ ಮಾಡುವುದು.
- ಸ್ಟಾಂಪ್ ಡ್ಯೂಟಿ, ವಾಹನ ತೆರಿಗೆ, ಮನೋರಂಜನಾ ತೆರಿಗೆ, ವೃತ್ತಿ ತೆರಿಗೆಗಳ ಹೆಚ್ಚಳ ಮೂಲಕ ಹೆಚ್ಚಿನ ಆದಾಯ
- ವಿದ್ಯುತ್ ಬೆಲೆ, ನೀರಾವರಿ ಕಂದಾಯ ಏರಿಸುವುದು.
- ಉಚ್ಚ ಶಿಕ್ಷಣ, 2ನೇ /3ನೇ ದರ್ಜೆ ಆಸ್ಪತ್ರೆಗಳಲ್ಲಿ ಸೇವೆಗಳಿಗೆ ಬೆಲೆ ಏರಿಸುವುದು ಇತ್ಯಾದಿಗಳಿಂದ ರಾಜ್ಯದ ಆದಾಯ ಹೆಚ್ಚಿಸಿ ರಸ್ತೆ, ನೀರಾವರಿ, ಬಂದರುಗಳು, ಶಿಕ್ಷಣ, ಆರೋಗ್ಯ, ಸೇವೆಗಳಿಗೆ ಖರ್ಚು ಹೆಚ್ಚಿಸುವುದು.
- ಮೂಲ ಸೌಕರ್ಯಗಳಿಗೆ ವಿದೇಶಿ ಖಾಸಗಿ ಬಂಡವಾಳ ಆಕರ್ಷಿಸುವ ನೀತಿ ತೆಗೆದುಕೊಳ್ಳುವುದು.

ರಾಜ್ಯಸರ್ಕಾರ ವಿಶ್ವಬ್ಯಾಂಕ್‌ನ ವಿಶ್ಲೇಷಣೆ, ಸಲಹೆಗಳನ್ನು ಕಣ್ಣುಮುಚ್ಚಿ ಒಪ್ಪಿಕೊಂಡಿತು. ರಾಜ್ಯ ಸರ್ಕಾರ ಗುಪ್ತ ಮಾತುಕತೆ ನಡೆಸಿ ವಿಶ್ವಬ್ಯಾಂಕ್ ಹೇರಿದ ಎಲ್ಲಾ ನೀತಿಗಳನ್ನು ಒಪ್ಪಿಕೊಂಡಿತು. ಈ ಒಪ್ಪಂದ ಆಧಾರದ ಮೇಲೆ 2310 ಕೋಟಿಯ ಮೊದಲ ಕಂತನ್ನು ಕೊಡಲು ವಿಶ್ವಬ್ಯಾಂಕ್ ತೀರ್ಮಾನಿಸಿತು. ಈ ಮೊದಲ ಕಂತಿನಲ್ಲಿ ಪ್ರಾಥಮಿಕ ಶಿಕ್ಷಣ 588 ಕೋಟಿ ರೂ. ಪ್ರಾಥಮಿಕ ಆರೋಗ್ಯ 168 ಕೋಟಿ ರೂ., ಪೌಷ್ಟಿಕ ಆಹಾರ 378 ಕೋಟಿ ರೂ., ನೀರಾವರಿಗೆ 504 ಕೋಟಿ ರೂ., ಸಂಪರ್ಕ ಸೌಕರ್ಯಗಳಿಗೆ 336 ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂದು ವಿಶ್ವಬ್ಯಾಂಕ್ ನಿರ್ದೇಶಿಸಿದೆ. ವಿದ್ಯುತ್ ಕ್ಷೇತ್ರದಲ್ಲಿ 'ಸುಧಾರಣೆ'ಗಳಿಗೆ (ಖಾಸಗೀಕರಣ ಎಂದು ಓದಿಕೊಳ್ಳಿ) ಪ್ರತ್ಯೇಕ 3600 ಕೋಟಿ ಸಾಲವನ್ನು ವಿಶ್ವಬ್ಯಾಂಕ್ ಯೋಜಿಸಿದೆ.

ವಿಶ್ವಬ್ಯಾಂಕ್ ಸಾಲದ ಶರತ್ತುಗಳೇನು?

ಈ ಸಾಲಕ್ಕಾಗಿ ಆಂಧ್ರ ಸರ್ಕಾರ ಕಣ್ಣುಮುಚ್ಚಿ ಒಪ್ಪಿಕೊಂಡ, ಷರತ್ತುಗಳು, ಹೇರಲ್ಪಟ್ಟ ನೀತಿಗಳೆಂದರೆ

- ಈಗ ರಾಜ್ಯದ ಶೇಕಡಾ 72 ಜನರ ಬಳಿ ಇರುವ ಅಕ್ಕಿ ಸಬ್ಸಿಡಿ ರೇಶನ್ ಕಾರ್ಡ್‌ಗಳನ್ನು ಶೇಕಡ 35 ಜನರಿಗೆ ಕಡಿತಗೊಳಿಸಿ ಇಳಿಸುವುದು.
- ಅಕ್ಕಿಗೆ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ನಿಗದಿತ ಬದಲಿ ಬೆಲೆಯ ಅರ್ಧಕ್ಕೆ ಇಳಿಸುವುದು.
- ಎಲ್ಲಾ ರೇಶನ್ ಕಾರ್ಡುಗಳನ್ನು ಒಂದು ಬಾರಿ ರದ್ದಗೊಳಿಸಿ ಆಮೇಲೆ ಸಬ್ಸಿಡಿಗೆ ಅರ್ಹರಾದ ಬಡವರಿಗೆ ಮಾತ್ರ ಹೊಸ ರೇಶನ್ ಕಾರ್ಡ್ ಕೊಡುವುದು.
- 39 ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು 29 ಸಹಕಾರಿ ಕ್ಷೇತ್ರದ ಉದ್ಯಮಗಳನ್ನು (ಇದರಲ್ಲಿ 18 ಸಕ್ಕರೆ, 11 ಮಿಲ್‌ಗಳು) ಮುಚ್ಚಬೇಕು, ಇಲ್ಲವೇ ಮಾರಬೇಕು.
- ವಾಹನ ತೆರಿಗೆಯನ್ನು ಹಣದುಬ್ಬರಕ್ಕೆ ಅನುಗುಣವಾಗಿ ಏರಿಸುವುದು, ವೃತ್ತಿ ತೆರಿಗೆಯನ್ನು ಏರಿಸುವುದು, ಆಸ್ತಿ ತೆರಿಗೆ ಹೆಚ್ಚಿಸುವುದು, ಮನೋರಂಜನಾ ತೆರಿಗೆ ವಿನಾಯಿತಿ ರದ್ದು ಮಾಡುವುದು.
- ಸಣ್ಣ ಕಾಲುವೆ, ಹಂಚಿಕೆ ಕಾಲುವೆ ಮತ್ತು ನೀರಾವರಿ ಪ್ರಾಜೆಕ್ಟ್ ಮಟ್ಟದಲ್ಲಿ ನೀರಾವರಿ ಬಳಕೆದಾರರ ಸಮಿತಿಗಳೇ ನೀರಾವರಿ ವ್ಯವಸ್ಥೆ ಉಸ್ತುವಾರಿ ನಡೆಸುವ, ದರ ವೆಚ್ಚ ಭರಿಸುವುದು(ಸರ್ಕಾರ ಇದರಿಂದ ಹೊರಬರುವುದು)
- 2002 ದಷ್ಟು ಹೊತ್ತಿಗೆ ಎಲ್ಲಾ ನೀರಾವರಿ ಮತ್ತು ಉಸ್ತುವಾರಿ ವೆಚ್ಚ ವಾಪಸು ಬರುವಂತೆ ಕಂದಾಯದ ಹೆಚ್ಚಳ
- ವಿದ್ಯುತ್ ಕ್ಷೇತ್ರ 'ಸುಧಾರಣೆ'ಗಳ(ಖಾಸಗೀಕರಣ ಎಂದು ಓದಿಕೊಳ್ಳಿ) ಬಗ್ಗೆ ಕಾನೂನು ಜಾರಿ.
- ವಿದ್ಯುತ್ ಕ್ಷೇತ್ರ ನಿಯಂತ್ರಣ ಕಮಿಷನ್ ರಚನೆ(ಖಾಸಗೀಕರಣಕ್ಕೆ ಪೂರ್ವಭಾವಿಯಾಗಿ)
- ವಿದ್ಯುತ್ ವಿತರಣೆಯ ಅರ್ಧಭಾಗ ಜಂಟಿ ಕ್ಷೇತ್ರಕ್ಕೆ ವರ್ಗಾವಣೆ
- ಕೃಷಿಗೆ ವಿದ್ಯುತ್ ದರದ ಮೂರು ಪಟ್ಟು ಏರಿಕೆ
- ರಸ್ತೆ ಸಾರಿಗೆಯಲ್ಲಿ ವಿದೇಶಿ ಖಾಸಗಿ ಬಂಡವಾಳ ಆಕರ್ಷಿಸುವಂತೆ 'ರಸ್ತೆ ಸುಂಕ' ಹಾಕಲು ಅನುವು ಮಾಡಿಕೊಡಬೇಕು.
- ರಸ್ತೆ ನಿರ್ಮಾಣದಲ್ಲಿ ಭಾರಿ ಮಿಷನರಿ ಬಳಸಲು ಪ್ರೋತ್ಸಾಹ
- ಶಿಕ್ಷಣದಲ್ಲಿ ಜನರ ಪಾಲ್ಗೊಳ್ಳುವಿಕೆ, ಸಾಕ್ಷರತಾ ಕಾರ್ಯಕ್ರಮ, ವಯಸ್ಕರ ಶಿಕ್ಷಣದ ಹೆಸರಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರದ ಜವಾಬ್ದಾರಿ ಕಳೆದುಕೊಳ್ಳಬೇಕು.
- ಉಚ್ಚ ಶಿಕ್ಷಣದಲ್ಲಿ ಶೇಕಡಾ 3 ವೆಚ್ಚ ವಾಪಸು ಬರುವಂತೆ ಫೀ ಹೆಚ್ಚಳ
- ಗ್ರಾಮೀಣ ಮಟ್ಟದಲ್ಲಿ ಕಾಂಟ್ರಾಕ್ಟ್ ಟೀಚರುಗಳ ನೇಮಕ
- ವೈದ್ಯಕೀಯ ಸೇವೆಯ ಶೇಕಡಾ 20ನ್ನು ರೋಗಿಗಳು ಭರ್ತಿ ಮಾಡುವಂತೆ ಸೇವಾವಚ್ಚದಲ್ಲಿ ಹೆಚ್ಚಳ
- ಪ್ರಾಥಮಿಕ ವೈದ್ಯಕೀಯ ವ್ಯವಸ್ಥೆಯ ಸಾಧ್ಯವಿರುವ ವಿಭಾಗಗಳನ್ನೆಲ್ಲಾ ಖಾಸಗೀಕರಿಸುವುದು.

ಈ ಎಲ್ಲಾ ಷರತ್ತುಗಳು, ಹೇರಲ್ಪಟ್ಟ ನೀತಿಗಳ ಬಗ್ಗೆ ರಾಜ್ಯ ಸರ್ಕಾರ-ವಿಶ್ವಬ್ಯಾಂಕ್ ನಡುವೆ ನಡೆದ ಮಾತುಕತೆ-ಒಪ್ಪಂದಗಳ ದಾಖಲೆಗಳನ್ನು ಸಿಪಿಐ(ಎಂ) ಸಂಗ್ರಹಿಸಿ ಈ ಪುಸ್ತಕದಲ್ಲಿ ಪ್ರಕಟಿಸಿದೆ.

ವಿಶ್ವಬ್ಯಾಂಕ್ ಸಾಲದ ಪರಿಣಾಮಗಳೇನು?

ವಿಶ್ವಬ್ಯಾಂಕ್ ನಿರ್ದೇಶಿಸಿರುವ ಈ ಎಲ್ಲಾ ನೀತಿ ಸೂತ್ರಗಳು, ಕಾರ್ಯಕ್ರಮಗಳು, ರಾಜ್ಯದ ಜನತೆ ಮೇಲೆ ಏನು ಪರಿಣಾಮ ಬೀರಬಹುದು?

ಬಡವರ-ಶ್ರೀಮಂತರ ನಡುವೆ ಕಂದಕ ಹೆಚ್ಚಿಸುವುದು

- ಬಡವರ ಬಗ್ಗೆ ಸರ್ಕಾರ ಕೈಗೊಂಡಿರುವ ಎಲ್ಲಾ ಕ್ರಮಗಳ ಕಡಿತದಿಂದ ಮತ್ತು ಆಗುವ 'ಬೆಳವಣಿಗ ಉಣ್ಣುವ ಉಳ್ಳವರಿಗೆ ಪ್ರಯೋಜನವಾಗುವುದರಿಂ ಕಂದಕ ಹೆಚ್ಚಬಹುದು.
- ಬಂಡವಾಳಶಾಹಿಗಳು, ಭೂಮಾಲಕರು ಕಾಂಟ್ರಾಕ್ಟರುಗಳು, ಭ್ರಷ್ಟ ರಾಜಕಾರಣಿಗಳು ಇನ್ನೂ ದೊಡ್ಡ ಶ್ರೀಮಂತರಾಗಬಹುದು.

ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳುವುದು

- ರಾಜ್ಯ ಸರ್ಕಾರದ ಸಾಲ ವಿಪರೀತವಾ ಏರಿದೆ(1990 ರಲ್ಲಿ 5870 ಕೋಟಿ ರೂ.ಗಳಿಂ 1998 ರಲ್ಲಿ 22,863 ಕೋಟಿ ರೂ.-ಸುಮಾ ನಾಲ್ಕು ಪಟ್ಟು)
- ವಿದೇಶಿ ಸಾಲ ನಾಲ್ಕು ವರ್ಷಗಳಲ್ಲಿ 10 ಪಟ್ಟಿಗ ಹೆಚ್ಚು ಏರಿದೆ(1993-94 ರಲ್ಲಿ 894 ಕೋ ರೂ.ನಿಂದ 1997-98 ರಲ್ಲಿ 10,415 ಕೋಟಿ ಏರಿದೆ.)
- ರಾಜ್ಯದ ರೆವಿನ್ಯೂನ ಭಾಗವಾಗಿ ಬಡ್ಡಿ ಪಾವತಿ ಬೇಕಾದ ಹಣದ ಪ್ರಮಾಣ ಸಹ 1980-81 ರಿಂ 1994-95 ರವರೆಗೆ ಇಮ್ಮಡಿಯಾಗಿದೆ.(ಶೇಕಡಾ ರಿಂದ ಶೇಕಡಾ 14 ಕ್ಕೆ ಏರಿದೆ)
- ಕಳೆದ ಮೂರು ನಾಲ್ಕು ವರ್ಷಗಳಿಂದ ಹೊ ಸಾಲದ ಅರ್ಧಕ್ಕೂ ಹೆಚ್ಚು ಬಡ್ಡಿ ಪಾವತಿ ಖರ್ಚಾಗುತ್ತಿದೆ. ಇದು ರಾಜ್ಯ ಸಾಲದ ಕೂಪ ಆಗಲೇ ಬಿದ್ದಿದೆ ಎಂಬುದರ ಸಂಕೇತ.
- ವಿಶ್ವಬ್ಯಾಂಕ್ ವಿದ್ಯುತ್, ಸಂಪರ್ಕ, ಶಿಕ್ಷಣ ಆರೋಗ್ಯದಂತಹ ಮೂಲ ಸೌಕರ್ಯ, ಸೇವೆಗ ಕ್ಷೇತ್ರಕ್ಕೆ ಸಾಲ ಕೊಡುವುದು. ಈ ಕ್ಷೇತ್ರಗಳ ಹೂಡಿದ ಹಣಕ್ಕೆ ಹೆಚ್ಚುವರಿ ಉಳಿತಾಯ ಅ



ಕೃಪೆ: ಪ್ರಜಾಶಕ್ತಿ

...ಆಂಧ್ರ

ಅದೂ ಧರ್ಮಕಾಲದಲ್ಲಿ ಬರುತ್ತದೆ. ಆದ್ದರಿಂದ ವಿಶ್ವಬ್ಯಾಂಕ್‌ನ ಸಾಲ ತೀರಿಸಲು ರಾಜ್ಯದ ಉಳಿದ ಮೂಲಗಳಿಂದ ಬಂದ ಹಣ ವೆಚ್ಚ ಮಾಡಬೇಕಾಗುತ್ತದೆ. ಆಗ ಇತರ ಬೆಳವಣಿಗೆ ಖರ್ಚುಗಳಿಗೆ ಏನೇನೂ ಹಣ ಇರುವುದಿಲ್ಲ.

ಈಗ ರಾಜ್ಯವೇ ವಿದೇಶಿ ಸಾಲಗಳ ಬಡ್ಡಿ ಪಾವತಿಯಲ್ಲಿ ಡಾಲರ್‌ನ ಬೆಲೆ ಏರಿಕೆಯನ್ನು (ರೂಪಾಯಿಗಳಲ್ಲಿ) ಭರಿಸಬೇಕು. ಹಿಂದೆ ಇದನ್ನು ಕೇಂದ್ರ ಭರಿಸುತ್ತಿತ್ತು. ಡಾಲರ್‌ನ ಆಕಸ್ಮಿಕ ಭಾರೀ ಬೆಲೆ ಏರಿಕೆಯೊಂದೇ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಏರುಪೇರು ಮಾಡಬಲ್ಲದು.

- ಎಲ್ಲಾ ಪ್ರಾಜೆಕ್ಟ್‌ನ ಮೊದಲ ಶೇಕಡಾ 30 ಭಾಗ ರಾಜ್ಯ ಸರ್ಕಾರ ಹಾಕಬೇಕು. ಅಂದರೆ ಎಲ್ಲಾ ರಾಜ್ಯ ಸರ್ಕಾರದ ಖರ್ಚಿನ ಸಿಂಹಪಾಲು ವಿಶ್ವಬ್ಯಾಂಕ್ ನಿರ್ದೇಶಿತ ಯೋಜನೆಗಳಿಗೆ ಹೋಗುತ್ತದೆ. ಆ ಮೂಲಕ ಇಡೀ ರಾಜ್ಯ ಸರ್ಕಾರದ ಆದ್ಯತೆಗಳನ್ನು ವಿಶ್ವಬ್ಯಾಂಕ್ ಸ್ಪಷ್ಟವಾಗಿ ನಿರ್ಧರಿಸುತ್ತದೆ.
- ರಾಜ್ಯ ಸರ್ಕಾರ ತನ್ನ ಪಾಲು ಹೂಡಲು ಸಾಧ್ಯವಾಗದಿದ್ದರೆ ಅದಕ್ಕೆ ವಿಶ್ವಬ್ಯಾಂಕ್‌ಗೆ ದಂಡ ತೆರಬೇಕು! ವಿಶ್ವಬ್ಯಾಂಕ್‌ನಿಂದ ಮಂಜೂರಾದ ಸಾಲವನ್ನು ನಿಗದಿತ ಸಮಯದೊಳಗೆ ಬಳಸದಿದ್ದರೆ, ಸಾಲ ಮೊತ್ತದ ಅರ್ಧದಿಂದ ಮುಕ್ಕಾಲು ಶೇಕಡಾ ದಂಡ ತೆರಬೇಕು.
- ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಅನುಸರಿಸಿದರೆ ಮೂಲ ಸೌಕರ್ಯಗಳ ಕ್ಷೇತ್ರದಲ್ಲಿ ವಿದೇಶಿ ಖಾಸಗಿ ಬಂಡವಾಳ ಹರಿದು ಬರುತ್ತದೆ ಎಂಬುದು ಈ ಸಾಲದ ಹಿಂದಿನ ನೆಚ್ಚಿಕೆ. ಈ ನೆಚ್ಚಿಕೆ ನಿಜವಾಗದಿದ್ದರೆ ರಾಜ್ಯ ಸರ್ಕಾರ ಸಾಲದ ಕೂಪದಲ್ಲಿರುತ್ತದೆ. ಬೆಳವಣಿಗೆ ಪೂರ್ತಿ ನಿಂತು ಹೋಗುತ್ತದೆ.

ಸಾರ್ವಜನಿಕ ಉದ್ಯಮಗಳ ನಾಶ-ಖಾಸಗೀಕರಣ

- ಅಲ್ವಿನ್ ಲಿಡೋ, ಎಪಿ ಸ್ಕೂಟರ್ಸ್, ರಿಪಬ್ಲಿಕ್ ಫೋರ್ಜ್, ಎ.ಪಿ.ಅಂಗವಿಕಲರ ಕಾರ್ಪೊರೇಷನ್, ಎ.ಪಿ.ಮೀನುಗಾರಿಕೆ ಕಾರ್ಪೊರೇಷನ್‌ಗಳನ್ನು ಆಗಲೇ ಮುಚ್ಚಲಾಗಿದೆ.
- ಆಂಧ್ರ ವಿದ್ಯುತ್ ಬೋರ್ಡ್ ಖಾಸಗೀಕರಣಕ್ಕೆ ಆಗಲೇ ಕಾನೂನು ಮಾಡಲಾಗಿದೆ.
- ಆಂಧ್ರ ಸಾರಿಗೆ ಕಾರ್ಪೊರೇಷನ್ ಖಾಸಗೀಕರಣಕ್ಕೆ ಯೋಜನೆ ಸಿದ್ಧವಾಗುತ್ತಿದೆ.
- ನಿಜಾಮ್ ಸಕ್ಕರೆ ಕಾರ್ಖಾನೆಯ ಹಲವು ಘಟಕಗಳು ಮುಚ್ಚಿವೆ. ಉಳಿದದ್ದನ್ನು ಮಾರಲು ಪ್ರಯತ್ನ ನಡೆದಿದೆ.
- ಸರ್ಕಾರ ಸಹಕಾರಿ ಸಕ್ಕರೆ ಮತ್ತು ಮಿಲ್‌ಗಳನ್ನು ಕೆಲವು ಭೂಮಾಲಕರಿಗೆ, ಕಾರ್ಖಾನೆ ಮಾಲೀಕರಿಗೆ ಕೊಟ್ಟು ಬಿಡಲು ಪ್ರಯತ್ನಿಸುತ್ತಿದೆ.
- ಖಾಸಗೀಯವರಿಗೆ ಆಸಕ್ತ ಇಲ್ಲದ ಸಾಮಾಜಿಕ ಸೇವೆಯ ಕ್ಷೇತ್ರಗಳಲ್ಲಾದರೂ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಇರುವ ಸಾಧ್ಯತೆಯನ್ನೇ ನಾಶ ಮಾಡಲಾಗಿದೆ.

ಉದ್ಯೋಗಗಳ ನಾಶ

- ರಾಜ್ಯ ಸರ್ಕಾರ ಪ್ರತಿ ವರ್ಷ ತನ್ನ ಉದ್ಯೋಗಿಗಳ ಸಂಖ್ಯೆಯನ್ನು ಶೇಕಡಾ 1.5 ರಷ್ಟು ಕಡಿಮೆ ಮಾಡಬೇಕು. ಇದು 2002 ದವರೆಗೆ ಮುಂದುವರೆಯಬೇಕು ಎಂದು ವಿಶ್ವಬ್ಯಾಂಕ್ ತಾಕೀತು ಮಾಡಿದೆ. ರಾಜ್ಯ ಸರ್ಕಾರ ಈಗಾಗಲೇ ಇದನ್ನು ಜಾರಿ ಮಾಡಲಾರಂಭಿಸಿದೆ. ಖಾಲಿಯಾದ ಸ್ಥಾನಗಳನ್ನು ತುಂಬುವುದನ್ನು ನಿಲ್ಲಿಸಲಾಗಿದೆ.
- ರಾಜ್ಯ ಸಾರಿಗೆ ಕಾರ್ಪೊರೇಷನ್ ಮತ್ತಿತರ ಸಂಸ್ಥೆಗಳ ಉದ್ಯೋಗಗಳ ಕಡಿತ ವಿಶ್ವಬ್ಯಾಂಕ್ ಒತ್ತಡದಂತೆ ಆರಂಭವಾಗಿದೆ.
- ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಸಾವಿರಾರು ಉದ್ಯೋಗಿಗಳು ಈಗಾಗಲೇ ದಾರಿಯಲ್ಲಿದ್ದಾರೆ ... ಹಣ ಒದಗಿಸಲು ಉದ್ಯೋಗ ಕಮಿಟಿ ಮಾಡಬೇಕು. ಉದ್ಯೋಗಗಳ ಸವಲತ್ತು ರಚನೆ ಮಾಡಬೇಕು. ಎಂಬ ಭಾರಿ ಪ್ರಚಾರ ರಾಜ್ಯ ಸರ್ಕಾರ-ವಿಶ್ವಬ್ಯಾಂಕ್ ಕೈಗೊಂಡಿದೆ.

ಸಾಮಾಜಿಕ ನ್ಯಾಯ ಇನ್ನಷ್ಟು ಅಪಾಯದಲ್ಲಿದೆ

- ದಲಿತರು, ಆದಿವಾಸಿಗಳು ಇತರ ಹಿಂದುಳಿದವರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ದೊರಕಿದ್ದ ಸೀಮಿತ ಉದ್ಯೋಗವಕಾಶಗಳೂ ನಾಶವಾಗುವುದು. ಅವರಿಗೆ ದೊರಕಬಹುದಾದ ಉದ್ಯೋಗವಕಾಶಗಳು ಸೃಷ್ಟಿಯಾಗುವ ಸಾಧ್ಯತೆ ಇಲ್ಲವೇ ಇಲ್ಲ. ಖಾಸಗೀ ಕ್ಷೇತ್ರದಲ್ಲಿ ಸೀಮಿತ ಉದ್ಯೋಗವಕಾಶಗಳು ಸೃಷ್ಟಿಯಾದರೂ ಅವು ಇವರಿಗೆ ತೆರೆದಿರುವುದಿಲ್ಲ.
- ಉಚ್ಚ ಶಿಕ್ಷಣದ ಫೀಸ್ ಏರಿಕೆ, ಸರ್ಕಾರಿ ಶಾಲೆಗಳು ಇನ್ನಷ್ಟು ಅಧೋಗತಿಗೆ ಹೋಗುವುದು ಹಿಂದುಳಿದವರ, ದಲಿತರ, ಆದಿವಾಸಿಗಳು ಶಿಕ್ಷಣ ಪಡೆದು ಮುಂದೆ ಬರುವ ಅಲ್ಪ-ಸಾಧ್ಯತೆಯನ್ನೂ ನಾಶ ಮಾಡುತ್ತದೆ.
- ವೈದ್ಯಕೀಯ ಸೇವೆಗಳ ಬೆಲೆ ಏರಿಕೆ, ಖಾಸಗೀಕರಣ ದೂರ ಪ್ರದೇಶದಲ್ಲಿ ವಾಸಿಸಿರುವ, ನಗರದ ಹಿಂದುಳಿದವರ ಬಡವರಿಗೆ ವೈದ್ಯಕೀಯ ಸೇವೆ ನಿಲುಕದಂತೆ ಮಾಡುತ್ತದೆ.
- ರೇಶನ್‌ನಲ್ಲಿ ಸಿಗುವ ಆಹಾರದ ಬೆಲೆ ಏರಿಕೆ, ಪ್ರಮಾಣದಲ್ಲಿ ಕಡಿತ ಸಹ ಬಡವರ, ದಲಿತರ ಬಾಳನ್ನು ಇನ್ನಷ್ಟು ದುರ್ಭರಗೊಳಿಸುತ್ತದೆ.
- ವಿದ್ಯುತ್ ಬೆಲೆ ಏರಿಕೆ, ನೀರಾವರಿ ಕಂದಾಯ ಸಣ್ಣ ಮತ್ತು ಅತಿಸಣ್ಣ ರೈತರನ್ನು ತೀವ್ರವಾಗಿ ಬಾಧಿಸುತ್ತದೆ. ಇವರು ಗೇಣಿಗೆ ಸಾಗುವಳಿ ಮಾಡುವುದು(ಶೇಕಡಾ 30 ರಷ್ಟು) ಇವರಿಗೆ ನೀರಾವರಿ ಬಳಕೆ ಸಂಘಟನೆಗಳಲ್ಲಿ ಯಾವುದೇ ಪಾತ್ರ ಇರುವುದಿಲ್ಲ. ಅವರು ನೀರಾವರಿಯಿಂದ ಪೂರ್ಣ ವಂಚಿತರಾಗಿ ಕೃಷಿ ಬಿಟ್ಟು ಗುಳೆ ಹೋಗಬೇಕಾಗಬಹುದು.
- ರಸ್ತೆ ಮುಂತಾದ ಭಾರಿ ಕಾಮಗಾರಿಯಲ್ಲಿ ವಿದೇಶಿ ಕಂಪನಿಗಳ ಪ್ರವೇಶದಿಂದ ಭಾರಿ ಮಿಶಿನರಿ ಬಳಸಲಾಗುವುದು. ಇಂತಹ ಕಾಮಗಾರಿಗಳಲ್ಲೂ, ಕೂಲಿಯ ಸಾಧ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ.
- ಪಾನನಿಷೇಧ ಹಂತಹಂತವಾಗಿ (ವಿಶ್ವಬ್ಯಾಂಕ್ ನಿರ್ದೇಶನದಂತೆ) ಸಡಿಲಗೊಂಡಂತೆ ಬಡವರ ಕುಟುಂಬಗಳಿಗೆ, ಮಹಿಳೆಯರಿಗೆ ಆರ್ಥಿಕ-ಸಾಮಾಜಿಕ ಸಮಸ್ಯೆ ಉಲ್ಬಣಗೊಳ್ಳುತ್ತದೆ.

ಜನರ ಪ್ರತಿಭಟನೆಯ ವಿರುದ್ಧ ದಮನಚಕ್ರ

- ವಿಶ್ವ ಬ್ಯಾಂಕ್ ನಿರ್ದೇಶಿತ ನೀತಿಗಳ ವಿರುದ್ಧ ಜನರ ಪ್ರತಿಭಟನೆ ಹತ್ತಿಕ್ಕಲು ರಾಜ್ಯ ಸರ್ಕಾರದ ದಮನ ಚಕ್ರ ವಿಪರೀತವಾಗುತ್ತಿದೆ. ಜನರ ಪ್ರತಿಭಟನೆಗೆ ಕಿವಿಗೊಡುವಂತೆ ಕಂಡರೆ ವಿಶ್ವಬ್ಯಾಂಕ್ ಧಣಿಗಳು ಎಲ್ಲಿ ಸಾಲ ನಿಲ್ಲಿಸಿಬಿಡುತ್ತಾರೋ ಎಂಬ ಭಯ ಇಡೀ ಸರ್ಕಾರದ ಯಂತ್ರದ ಕ್ರೌರ್ಯ ಹೆಚ್ಚಿಸುತ್ತಿದೆ. ಎ.ಪಿ. ವಿದ್ಯುತ್ ಬೋರ್ಡ್,ಅಲ್ವಿನ್, ... ವಿದ್ಯುತ್ ಮಸೂದೆ ಮಂಜೂರು ಮಾಡಲು ಸರ್ಕಾರ ಬಳಸಿದ ದಮನ ಚಕ್ರ ಇದಕ್ಕೆ ಉದಾಹರಣೆ.
- ಟ್ರೇಡ್ ಯೂನಿಯನ್, ಜನರ ಸಂಘಟನೆಗಳ ಮೇಲೆ ದಮನಚಕ್ರ ವಿಪರೀತವಾಗಿ ಏರಿದೆ.



ವಿಶ್ವಬ್ಯಾಂಕ್ ಹೇರಿದ ಜನ-ವಿರೋಧಿ ನೀತಿಗಳನ್ನು ಮರೆ ಮಾಚಲು ನಾಟಕ.

ವಿಶ್ವಬ್ಯಾಂಕ್ ಜನರಿಂದ ಆಯ್ಕೆಯಾದ ಸರ್ಕಾರವನ್ನು ಜನ-ವಿರೋಧಿ ನೀತಿಗಳನ್ನು ಅಂಗೀಕರಿಸಲು ಒತ್ತಾಯ ತರುತ್ತಿದೆ ಎಂದರೆ ತಮ್ಮಿಬ್ಬರಿಗೂ ಉಳಿಗಾಲವಿಲ್ಲ ಎಂದು ಗೊತ್ತಿರುವ ಇಬ್ಬರೂ ಇದು ರಾಜ್ಯ ಸರ್ಕಾರದ ನೀತಿಯೋ ಎಂಬಂತೆ ನಾಟಕ ಆಡುತ್ತವೆ. ವಿಶ್ವಬ್ಯಾಂಕ್ ಹೇರಿದ ನೀತಿಯನ್ನು ಒಪ್ಪಿಕೊಂಡ ಮೇಲೆ, ಅದಕ್ಕಾಗಿ ಒಂದು ಸಮಿತಿ ಮಾಡಲಾಗುತ್ತದೆ. ಆ ಸಮಿತಿಯಲ್ಲಿ ವಿಶ್ವಬ್ಯಾಂಕ್ ಹೇಳಿದವರು ಇರುತ್ತಾರೆ. ಆ ಸಮಿತಿ ವಿಶ್ವಬ್ಯಾಂಕ್ ತಯಾರಿಸಿದ ನೀತಿಗಳನ್ನು ತಮ್ಮದೇ ಶಿಫಾರಸು ಎಂಬಂತೆ ಮಂಡಿಸುತ್ತದೆ.

. ವಿದ್ಯುತ್ ಕ್ಷೇತ್ರದ 'ಸುಧಾರಣೆ'ಗಳ ಬಗ್ಗೆ ಹಿತೇನ್ ಭಯ್ಯಾ ಸಮಿತಿ, ಸರ್ಕಾರಿ ಉದ್ಯೋಗಿಗಳ ಬಗ್ಗೆ ಸುಬ್ರಮಣ್ಯಂ ಸಮಿತಿ ಇವೆಲ್ಲಾ ವಿಶ್ವಬ್ಯಾಂಕ್ ಹೇಳಿದ ನೀತಿಗಳನ್ನು ಕಾಪಿ ಹೊಡೆದು ಶಿಫಾರಸು ಮಾಡಿದವು.

. ವಿಶ್ವಬ್ಯಾಂಕ್ ನೀತಿಗಳಿಂದ ಬರಲಿರುವ ಆಘಾತಗಳಿಂದ ಜನರ ಗಮನ ಬೇರೆಡೆಗೆ ತಿರುಗಿಸಲು ಚಂದ್ರಬಾಬು ನಾಯ್ಡು ಸರ್ಕಾರ ಆಡಳಿತ ಆಧುನೀಕರಿಸಿ, ಸುಧಾರಿಸಲು ಹೊರಟಿದೆ ಎಂದು ಭಾವನೆ ಕೊಡಲು ಕಂಪ್ಯೂಟರೀಕರಣ, ಜನ್ಮಭೂಮಿ, ಫೈಲ್ ಯಜ್ಞ, ಪಿವಿಪಿ ಮುಂತಾದ ಜನರನ್ನು ಒಳಗೊಳ್ಳುವ 'ನಾಟಕ'ಗಳನ್ನು ಆಡಲಾಗುತ್ತಿದೆ.

. ಖಾಸಗೀಕರಣದಲ್ಲಿ ಭ್ರಷ್ಟಾಚಾರ ವಿಪರೀತವಾಗಿ ಏರಿದೆ.

ಈ ಹಾದಿ ಬೇಡ-ಬದಲಿ ಬೇಕು

ಚಂದ್ರಬಾಬು ನಾಯ್ಡು, ಅವರ ಹೊಗಳುಭಟ್ಟ ಬೂರ್ಜ್ವಾ ಮಾಧ್ಯಮ, ವಿಶ್ವಬ್ಯಾಂಕ್ ಭಟ್ಟಂಗಿಗಳು ಏನೇ ಹೇಳಲಿ ಆಂಧ್ರದಲ್ಲಿ ಈಗ ತುಳಿಯಲಾಗುತ್ತಿರುವ 'ಬೆಳವಣಿಗೆ ಹಾದಿ' ಹೊಸದಲ್ಲ. ದಕ್ಷಿಣ ಕೊರಿಯಾ, ಥಾಯ್ಲೆಂಡ್, ಇಂಡೋನೇಶ್ಯಾದಲ್ಲಿ ಅನುಸರಿಸಿ ಆ ದೇಶಗಳನ್ನು ಇತ್ತೀಚಿಗಿನ ಭಾರಿ ಬಿಕ್ಕಟ್ಟಿಗೆ ಸಿಲುಕಿಸಿದ ಹಾದಿ ಇದು. ಈ ಎಲ್ಲಾ ಉದಾಹರಣೆಗಳಲ್ಲಿ 'ಉಳ್ಳವರಿಗೆ' ಬೇಕಾದ 'ಬೆಳವಣಿಗೆ' ಆಗಿದೆ. ಈಗ ಹೈದರಾಬಾದಿನಲ್ಲಿ ಆಗುತ್ತಿದ್ದಂತೆ - ಏರ್‌ಪೋರ್ಟ್‌ಗಳು, ಫ್ಲೈ ಓವರ್‌ಗಳು. ಇಲ್ಲಿ ಎಲ್ಲಾ ವಿಶ್ವಬ್ಯಾಂಕ್- ಐಎಂಎಫ್, ಅಲ್ಲಿನ ಅಡಿಯಾಳು ಸರ್ಕಾರಗಳು ಸಾಧಿಸಿದ್ದೆಂದರೆ-ಬಹುರಾಷ್ಟ್ರೀಯ ಕಂಪನಿಗಳ ಸರಕುಗಳಿಗೆ ಮಾರುಕಟ್ಟೆ ನಿರ್ಮಿಸಿದ್ದು. ಅದಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ನಿರ್ಮಿಸಿದ್ದು. ಮೂಲ ಸೌಕರ್ಯಗಳ ಕ್ಷೇತ್ರದ ಕಂಪನಿಗಳಿಗೆ ವ್ಯಾಪಾರ, ಲಾಭ ಒದಗಿಸಿದ್ದು ಅಷ್ಟೆ. ಈ ಎಲ್ಲಾ ಕಡೆ ಬಡವರ ಜೀವನ ಎಲ್ಲೂ ಸುಧಾರಿಸುವುದಿಲ್ಲ. ಹಾಗೆಂದು ವಿಶ್ವಬ್ಯಾಂಕ್ ಹೇಳುವುದೂ ಇಲ್ಲ. ದೇಶದ (ಉಳ್ಳವರ ಎಂದು ಓದಿಕೊಳ್ಳಿ) ಬೆಳವಣಿಗೆಗೆ ಜನ ತ್ಯಾಗ ಮಾಡಬೇಕು ಎಂದು ವಿಶ್ವಬ್ಯಾಂಕ್ ಹೇಳುತ್ತದೆ.

ಇದಕ್ಕೆ ಬದಲಿ ಇಲ್ಲವೇ? ಇದೆ. ಭೂಸುಧಾರಣೆ ಮತ್ತು ಮೂಲ ಸೌಕರ್ಯಗಳಲ್ಲಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡುವುದು ಇಂತಹ ಬದಲಿ ನೀತಿಯ ಮುಖ್ಯ ಸೂತ್ರಗಳು. ಇದ್ದಬಿದ್ದ ಭೂಸುಧಾರಣಾ ನೀತಿಯನ್ನು ಮೂಲೆಗುಂಪು ಅಥವಾ ಸಡಿಲಗೊಳಿಸಲಾಗುತ್ತಿದೆ. ಬಹುಸಂಖ್ಯಾತ ಬಡವರಿಗೆ ಭೂಮಿ, ಹಣದ ಸಂಪನ್ಮೂಲ ಒದಗಿಸದೆ ಬೆಳವಣಿಗೆ ಆಗುತ್ತದೆ ಎನ್ನುವುದು ಮೂರ್ಖತನ. ಅದೇ ರೀತಿ ಮೂಲ ಸೌಕರ್ಯಗಳಿಗೆ ವಿದೇಶಿ ಸಾಲದ ಅಗತ್ಯವಿಲ್ಲ ಆಂತರಿಕವಾಗಿ ಶ್ರೀಮಂತರಿಂದ ಸಂಗ್ರಹಿಸಿದ ತೆರಿಗೆ ಮೇಲೆ ಮೂಲ ಸೌಕರ್ಯ ಒದಗಿಸಲು ಸಾಧ್ಯವಿದೆ. ವಿದೇಶಿ ಸಾಲ ಬೇಡವೇ ಬೇಡ ಎಂದು ಯಾರೂ ಹೇಳುವುದಿಲ್ಲ. ನಮ್ಮ ಆದ್ಯತೆಗಳಿಗೆ ಅನುಗುಣವಾಗಿ, ಸೀಮಿತ ಕ್ಷೇತ್ರಗಳಲ್ಲಿ ವಿದೇಶಿ ಸಾಲ ತೆಗೆದುಕೊಳ್ಳಬಹುದು. ಆದರೆ 'ಬೆಳವಣಿಗೆ ನೀತಿ'ಯ ಆಧಾರವಾಗುವುದು ಸಾಧ್ಯವಿಲ್ಲ.

ಬಜೆಟ್: ದೇಶದ ಬಡವ ವಿದೇಶಿ ಕಿರುಬಗಳ ದವಡೆಗೆ

ಪುಟ 5 ರಿಂದ

10,12 ರೂಪಾಯಂತೆ.

ಕೃಷ್ಣಪ್ಪ: ರೇಷನ್ ಅಂಗಡಿನಲ್ಲೇ ರೇಷನ್ ಬೆಲೆ ಜಾಸ್ತಿಯಾದ್ರೆ ಇನ್ನು ದಿನಸಿ ಅಂಗಡಿನಲ್ಲೇಷ್ಟಾಯ್ತದಪ್ಪ ಹೇಳು ನೀನೆ. ರೈಲಿನಲ್ಲೇನೋ ಲಗ್ಗೇಜ್ ಬೇರೆ ಜಾಸ್ತಿ ಮಾಡವ್ರಂತೆ. ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಮಾಡಸ್ತಾರಂತೆ. ಇನ್ನು ಬೆಲೆಗಳ ಗತಿ ಏನಾಗುತ್ತೋ ಏನು ಕಥೆನೋ

ನಾರಾಯಣಮ್ಮ: ನೀವೆಲ್ಲಾ ಹೇಳ್ತಾ ಇರೋದು ನೋಡಿದ್ರೆ ಏನಪ್ಪ ಗತಿ. ಈ ಕಡೆ ಗೊಬ್ಬರದ ಬೆಲೆ ಜಾಸ್ತಿ, ಆ ಕಡೆ ರೇಷನ್ ಬೆಲೆ ಜಾಸ್ತಿ, ಅಂಗಡಿನಲ್ಲೂ ಬೆಲೆಗಳೆಲ್ಲ ಜಾಸ್ತಿಯಾಗುತ್ತೆ, ಸಾಲ ಸಿಗಲ್ಲ, ಎಂಗೋ ಸಿಟಿಗೆ ಬಂದು ಬದ್ಕೋಣ ಅಂದ್ರೆ ಫ್ಯಾಕ್ಟರಿಗಳು ಮುಚ್ಕಿಂತಾವೆ ಅಂತಿರಾ ಇನ್ನ ಎಲ್ರಿಗೂ ಕೂಲಿ ಎಲ್ಲಿ ಸಿಗಬೇಕು?

ಕೃಷ್ಣಪ್ಪ: ಅಲ್ಲಿ ಒಂದೈತೆ ನೋಡು ಸಮಾಚಾರ. ಸರ್ಕಾರದಿಂದ ಅಭಿವೃದ್ಧಿ ಅಂತ ಖರ್ಚು ಮಾಡ್ತಾ ಇದ್ರಲ್ಲ - ನೀರಾವರಿ ಡ್ಯಾಂ ಕಟ್ಟೋಕೆ ಕೆರೆ, ರಸ್ತೆ, ಕಟ್ಟಡ ಅಂತ ಅದಕ್ಕೂ ಎಲ್ಲಾ ದುಡ್ಡು ಖೋತಾ ಅಂತೆ. ಹಿಂದಿನ ಹತ್ತು ವರ್ಷಕ್ಕಿಂತ ಕಡಿಮೆ ಅಂತೆ ಇನ್ನು ಕೂಲಿ ಎಲ್ಲಿ ಸಿಗೋದು.

ಪಿಳ್ಳಪ್ಪ: ಸರಿ ಬಿಡಪ್ಪ ಕೂಲಿನೂ ಸಿಗಾಗಿಲ್ಲ. ರೇಷನ್ ಸಿಗಂಗಿಲ್ಲ. ಬದ್ಕೋದೆಂಗೆ. ಇದಕ್ಕೆನಾ ನೀನು ನಿನ್ನ ಹಣೆಬರ ಬರೀತಾವ್ರೆ ನೋಡು ಅಂತ ಅಂತಿದ್ದುದ್ದು. ನಮ್ಮ ಹಳ್ಳಿ ಒಳಗೆ ಯಾರ ಮನೆ ಆಸ್ತಿ ಎತ್ತಾಕಾನಾ ಅಂತ ಗೌಡ, ಛೇರ್ಮನ್ನೂ ಎಲ್ಲಾ ಮಸಿತಾ ಕುಂತಿರ್ತಾರಲ್ಲ ಅಂಗಾಯ್ತು ಅನ್ನು ಮತ್ತೆ.

ಗಣೇಶ: ಹೌದು ಕಣಪ್ಪ ನಿಸಾರ್ ಅಹಮದ್ ಅಂತ 'ಕುರಿಗಳು ಸಾರ್ ಕುರಿಗಳು' ಅಂತ ಒಂದು ಪದ್ಯದಲ್ಲಿ ಹೇಳವ್ರಲ್ಲ ಅಂಗೆ.

ಬಿಸಲಿನಲ್ಲಿ ನಮ್ಮ ದೂಡಿ ಮರದಡಿಯಲಿ ತಾವು ಕೂತು
ಮಾತು, ಮಾತು,ಮಾತು, ಮಾತು
ಮಾತಿನ ಗೈರತ್ತಿನಲ್ಲೇ ಕರಾಮತ್ತು ನಡೆಸುವವರು
ನಮ್ಮ ಮೈಯ ತುಪ್ಪಟವರವಷ್ಟೂ ಬಿಡದ ಹಾಗೆ
ಸವರಿ ಕಂಬಳಿಗಳ ನೇಯುವಂಥ ಯೋಜನೆಗಳ
ಹಾಕುವವರು ಮಾರಮ್ಮನ ಮುಡಿಗೆ ಕೆಂಪು
ದಾಸವಾಳ ಆಯುವವರು ಬೆಟ್ಟದಾಟಿ ಕಿರುಬನುಗ್ಗಿ
ನಮ್ಮೊಳಿಬ್ಬರನ್ನು ಮುಗಿಸಿ
ನಾವು ಬ್ಯಾ, ಬ್ಯಾ ಎಂದು ಬಾಯಿ ಬಾಯಿ
ಬಡಿದುಕೊಂಡು
ಬೊಬ್ಬೆ ಹಾಕುತ್ತಿದ್ದರೂ
ಚಕ್ಕಭಾರ ಆಟದಲ್ಲೇ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಕುರುಬರು.

ಪಿಳ್ಳಪ್ಪ: ಸರಿ ನಮ್ಮಲ್ಲೇನೋ ಊರಧಣಿಗಳು ಆಸ್ತಿ ಮಾಡ್ಕೊಂತಾರೆ. ಆದ್ರೆ ಇಡೀ ದೇಶವೆಲ್ಲಾ ದೋಚಕ್ಕೆ ಹೊಂಟಿರೋರು ಯಾರಪ್ಪ? ಅದೇನೋ ಹೇಳ್ದಲ್ಲ 'ಬೆಟ್ಟದಾಟಿ ಕಿರುಬ ನುಗ್ಗಿ ನಮ್ಮಲ್ಲೊಬ್ಬರನ್ನು..... ಅಂತ ಆ ಕಿರುಬಗಳು ಯಾರಪ್ಪ

ಸೂರಪ್ಪ: ಅವ್ರು ಮಹಾ ದೊಡ್ಡ ಕಿರುಬಗಳೋಳು ಬಿಡು. ಮೊದಲು ಫರಂಗಿಯೋರು ಇದ್ರಲ್ಲ ಅಂತಾವ್ರೆ ಅಮೆರಿಕಾ, ಇಂಗ್ಲೆಂಡು, ಫ್ರಾನ್ಸ್, ಜಪಾನು ಅಂಥ ಏಳೆಂಟು ದೇಶ ಅವಪ್ಪಾ. ನಮ್ಮ ದೇಶದ ಬೇಲಿನೆಲ್ಲಾ ಕಿತ್ತಾಕಿ ಅವರಿಗೆ ನುಗ್ಗಿ ತಿಂದ್ಹಾಕಿ ಅಂತ ಬಿಟ್‌ಬಿಟ್ಟವ್ರೆ.



ಮಸುಕಾದ ರೈತನ ಬದುಕು



ಅಮರ್ತ್ಯಸೇನ್ ಇಂದು ಜಗತ್ಪ್ರಸಿದ್ಧರಾಗಿರುವ ಅರ್ಥಶಾಸ್ತ್ರಜ್ಞ, ನೊಬೆಲ್ ಪ್ರಶಸ್ತಿ ಪಡೆದ ಭಾರತೀಯರು. ಜನರ ಆರೋಗ್ಯ, ಶಿಕ್ಷಣ, ಮಾನವ ಅಭಿವೃದ್ಧಿಯ ಒಟ್ಟು ನೋಟದಿಂದ ಆರ್ಥಿಕ ಪ್ರಶ್ನೆಗಳನ್ನು ಪರಿಶೀಲಿಸಿದವರು. ಜಗತ್ತಿನ ಇತರೆಲ್ಲಾ ಅರ್ಥ ಶಾಸ್ತ್ರಜ್ಞರೂ ಕೇವಲ ಹಣ, ಹಣಕ್ಕಾಗಿ ಹಣ ಎಂಬಂತಹ ವಿಷಯಗಳಲ್ಲಿ, ಅದಕ್ಕೆ ಸಂಬಂಧಿಸಿದ ಅರ್ಥವಿಲ್ಲದ ಲೆಕ್ಕಾಚಾರಗಳಲ್ಲಿ ಮುಳುಗಿರುವಾಗ ಆ ಪ್ರವಾಹದ ವಿರುದ್ಧ ಈಸಿ ಜೈಸಿದವರು. ಅವರು ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಮಾಡಿದ ಆಶಯ ಭಾಷಣ ಇದು.

ಆರೋಗ್ಯದ ರಾಜಕಾರಣ

ಅನು: ಡಾ. ಪ್ರಕಾಶ್ ಸಿ.ರಾವ್, ಪ್ರೊ. ಎಂ.ಆರ್.ನಾಗರಾಜ್

ನಾನು ಚರ್ಚಿಸಬೇಕೆಂದಿರುವ ವಿಷಯ "ಆರೋಗ್ಯ ಹಾಗೂ ಆರ್ಥಿಕ ಬೆಳವಣಿಗೆಗೆ ಇರುವ ಸಂಬಂಧ" ಇದೊಂದು ಜಟಿಲ ಸಮಸ್ಯೆ. ಒಂದು ದೃಷ್ಟಿಯಲ್ಲಿ ನೋಡಿದರೆ ಈ ಪ್ರಶ್ನೆಗೆ ಸುಲಭ ಉತ್ತರ ಹೊಳೆಯುತ್ತದೆ. ಜನರ ಆರೋಗ್ಯ ಸುಧಾರಣೆಯೇ ಪ್ರಗತಿಯು ಪ್ರಧಾನ ಧ್ಯೇಯ ಎಂಬುದನ್ನು ಸಾರ್ವತ್ರಿಕವಾಗಿ ಜಗತ್ತಿನಾದ್ಯಂತ, ಎಲ್ಲರೂ ಒಪ್ಪಿಕೊಳ್ಳಬೇಕಾದ ವಿಷಯ. ಆದಾರೆ ಈ ಪ್ರಾಥಮಿಕ ಜ್ಞಾನ ನಮ್ಮನ್ನು ಹೆಚ್ಚು ದೂರ ಒಯ್ಯಲಾರದು. ನಾವು ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಪ್ರಗತಿಯ ಧ್ಯೇಯಗಳ ಪೈಕಿ ಆರೋಗ್ಯ ಎಷ್ಟು ಮಹತ್ವದ್ದು? ವಾರ್ಷಿಕ ತಲಾ ಆದಾಯ ಹೆಚ್ಚಿಸುವ ಮೂಲಕ ಆರ್ಥಿಕ ಪ್ರಗತಿ ಸಾಧಿಸಿದ್ದೇ ಆದರೆ ಜನಾರೋಗ್ಯವನ್ನು ಸಾಧಿಸಲು ಆರ್ಥಿಕ ಬೆಳವಣಿಗೆ ಸಾಕೇ ಅಂದರೆ ತಲಾ ವಾರ್ಷಿಕ ಆದಾಯವನ್ನು ಹೆಚ್ಚಿಸಿದಾಗ ಆರೋಗ್ಯವು ತನ್ನಿಂದ ತಾನೇ ಉತ್ತಮವಾಗುವುದೇ? ಅಥವಾ ಆರ್ಥಿಕ ಬೆಳವಣಿಗೆ ಮಾತ್ರವಲ್ಲ ಆರೋಗ್ಯ ಸುಧಾರಣೆಯ ಬಗ್ಗೆ ಪ್ರತ್ಯೇಕವಾಗಿ ಗುರಿ ಇರಿಸಿಕೊಳ್ಳಬೇಕೆ? ಆರ್ಥಿಕ ಬೆಳವಣಿಗೆಯು ಎಲ್ಲ ಒಳ್ಳೆಯ ವಿಷಯಗಳನ್ನು ಒಳಗೊಂಡಿದೆಯೇ? ಅಥವಾ ಅಲ್ಲಿಯೂ ಯಾವುದಕ್ಕೆ ಆದ್ಯತೆ ನೀಡಬೇಕು ಎಂಬ ಬಗ್ಗೆ ಹುಡುಕಾಬೇಕೆ? ಆರೋಗ್ಯ ಮತ್ತು ಆರೋಗ್ಯ ಪಾಲನೆಯ ವಿಷಯದಲ್ಲಿ ಸಮಾನತೆಯ ಕಾಳಜಿ ಎಷ್ಟರ ಮಟ್ಟಿಗೆ ಬಿಂಬಿತವಾಗಿದೆ?.

ಸಮೃದ್ಧಿಗೂ, ಆರೋಗ್ಯ, ದೀರ್ಘಾಯುಷ್ಯ ಹಾಗೂ ಇತರ ಸಾಧನೆಗೂ ಸಂಬಂಧವಿದೆ ಎನ್ನಬಹುದು. ಆದರೆ ಇನ್ನೊಂದು ರೀತಿ ನೋಡಿದರೆ ಈ ಸಂಬಂಧ ಬಲವಾದುದೇನಲ್ಲ ಹಾಗೂ ಆ ಸಂಬಂಧವು ಇನ್ನೂ ಕೆಲವು ವಿಷಯಗಳ ಮೇಲೆ ಅವಲಂಬಿಸಿದೆ. ಇಲ್ಲಿ ಮುಖ್ಯ ವಿಷಯ ಅಜರಾಮರರಾಗುವುದಲ್ಲ, ನೋವು ಬಾಧೆಗಳಿಲ್ಲದೆ ಬಾಳನ್ನು ಅಜೀವಪರ್ಯಂತ ನಡೆಸುವುದು.

ಸಂಪತ್ತು ನಮಗೆ ಸುದೀರ್ಘ, ಆರೋಗ್ಯಕರ ಹಾಗೂ ಸುಖಜೀವನ ನಡೆಸಲು ಅನುವು ಮಾಡಿಕೊಡುತ್ತಿದೆ. ಸಂಪತ್ತಲ್ಲದೆ, ಇನ್ನೂ ಅನೇಕ ವಿಷಯಗಳು ನಮ್ಮ ಮೇಲೆ ಪರಿಣಾಮ ಬೀರುವ ಕಾರಣ ಕೇವಲ ಸಂಪತ್ತಿನಿಂದಲೇ ಆರೋಗ್ಯ ವರ್ಧಿಸದು. ಆದ್ದರಿಂದ ಅಭಿವೃದ್ಧಿ ಎಂಬುದು ಸಂಪತ್ತು ಗಳಿಕೆ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಹಾಗೂ ಆದಾಯಕ್ಕೆ ಸಂಬಂಧಪಟ್ಟ ವಿಷಯಗಳು ಬೀರುವ ಪ್ರಭಾವವನ್ನು ಮೀರಿದ್ದು.

ಅಮೆರಿಕದಲ್ಲಿ ಆರೋಗ್ಯವಂಚಿತ ಜನರು

ಶ್ರೀಮಂತ ದೇಶದ ಕೆಲವು ಗುಂಪುಗಳು ಮೂರನೇ ದೇಶದ ಜನರಿಗಿಂತ ಹೆಚ್ಚು ವಂಚಿತರಾಗಿದ್ದಾರೆ ಎಂಬುದು ಗಮನಾರ್ಹ ಅಂಶ. ಉದಾಹರಣೆಗೆ ಅಮೆರಿಕದ ಪ್ರಜೆಗಳಾದ ನಿಗ್ರೋಗಳು ಜೀವನದ ಅವಧಿ ಮೂರನೇ ಜಗತ್ತಿನ ಜನರಿಗಿಂತಲೂ (ಚೀನ, ಭಾರತದ ಕೇರಳ, ಶ್ರೀಲಂಕಾ, ಜಮೈಕಾ, ಕೋಸ್ಟಾರಿಕಾ) ಕಡಿಮೆಯಾಗಿದೆ. ಅಮೆರಿಕಾದ ಕಪ್ಪು ಜನರ ತಲಾ ಆದಾಯ ಬಿಳಿ ಅಮೆರಿಕನ್ನರಿಗಿಂತಲೂ ಕಡಿಮೆ ಇದ್ದರೂ, ಚೀನ ಅಥವಾ ಕೇರಳ ಜನರ ಆದಾಯಕ್ಕಿಂತ (ದೇಶಗಳ ನಡುವಿನ ಆದಾಯ ವ್ಯತ್ಯಾಸವನ್ನು ಗಮನಿಸಿದ ಮೇಲೂ) ಹೆಚ್ಚು. ಈ ಸನ್ನಿವೇಶದಲ್ಲಿ ಈ ಕಪ್ಪುಜನರ ಹಾಗೂ ಬಡ ಚೀನಿಯರ ಹಾಗೂ ಕೇರಳ ಜನರ ಆಯುಸ್ಸಿನ ಹೋಲಿಕೆ ಕುತೂಹಲಕರವಾಗಿದೆ. ಅದರಲ್ಲೂ ಅಮೆರಿಕಾದ ಕಪ್ಪುಜನರ ಮಕ್ಕಳ ಮರಣ ಸಂಖ್ಯೆ ಭಾರತ ಅಥವಾ ಚೀನಾದ ಮಕ್ಕಳ ಸಾವಿನ ಸಂಖ್ಯೆಗಿಂತ ಕಡಿಮೆ ಇದ್ದರೂ ಅವರು ವಯಸ್ಸಿಗೆ ಬಂದ ನಂತರ ಆ ಚಿತ್ರ ಬದಲಾಗುತ್ತದೆ.

ಚೀನದ ಹಾಗೂ ಕೇರಳದ ಗಂಡಸರು ಅಮೆರಿಕದ ಕಪ್ಪು ಜನರಿಗಿಂತ ದೀರ್ಘಾಯುಷಿಗಳು. ಅಮೆರಿಕಾ ವಾಸಿ ಕಪ್ಪು ಮಹಿಳೆ ಕೇರಳದ ಮಹಿಳೆಗಿಂತ ಅಲ್ಪಾಯುಷಿ. ಅಮೆರಿಕಾ ನಿವಾಸಿ ಕಪ್ಪು ಜನರನ್ನು ಅಮೆರಿಕದ ಬಿಳಿ ಜನಾಂಗಕ್ಕೆ ಹೋಲಿಸಿದಲ್ಲಿ, ತಲಾ ಆದಾಯದಲ್ಲಿ ವಂಚಿತರಾಗಿದ್ದಾರೆ, ಕೇರಳದ ಮಹಿಳೆ ಮತ್ತು ಪುರುಷರಿಗೆ, ಚೀನದ ಪುರುಷರಿಗೆ ಹೋಲಿಸಿದಲ್ಲಿ ಆಯುರ್ಮಾನದಲ್ಲಿ ವಂಚಿತರಾಗಿದ್ದಾರೆ.


ತಲಾ ಆದಾಯ ಹೆಚ್ಚಿದ್ದಲ್ಲಿ ಅಕಾಲ ಮರಣ ಹಾಗೂ ಅನಾರೋಗ್ಯವನ್ನು ತಡೆಗಟ್ಟಬಹುದಾಗಿದೆ. ಆದಾಯ ಖಚಿತವಾದ ಪ್ರಭಾವ ಬೀರುತ್ತಿದೆ. ಆದರೂ ಇತರೇ ವ್ಯತ್ಯಾಸಗಳಾದ ಅಂದರೆ ವೈದ್ಯಕೀಯ ಸೌಲಭ್ಯ, ಜನಾರೋಗ್ಯ ರಕ್ಷಣೆ, ಶಿಕ್ಷಣ ಸೌಲಭ್ಯ ಇರದಿದ್ದಲ್ಲಿ ಶ್ರೀಮಂತನ ಆಯಸ್ಸು ಕಡಿಮೆಯಾಗಬಹುದು ಹಾಗೂ ಬಡಜನರ ಆಯುಸ್ಸು ಶ್ರೀಮಂತರಿಗಿಂತ ಹೆಚ್ಚಿಗೆ ಇರಬಹುದಾಗಿದೆ. ಒಳ್ಳೆ ಆರೋಗ್ಯ ಹಾಗೂ ಉಳಿವು 'ಹೆಚ್ಚು ಆದಾಯ ಗಳಿಕೆಗೆ ಸಹಾಯಮಾಡುತ್ತಿದೆ.

ಒಬ್ಬ ವ್ಯಕ್ತಿಯ ಆಯುಸ್ಸಿನ ಹೆಚ್ಚಳ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಹೆಚ್ಚಳದಿಂದ ಆಗುತ್ತದೆ ಎಂದಲ್ಲ, ಅದು ಜನಾರೋಗ್ಯಕ್ಕೆ ಮಾಡುವ ಖರ್ಚು ಹಾಗೂ ಬಡತನ ನಿರ್ಮೂಲನೆಯಿಂದ ಆಗಲು ಸಾಧ್ಯ, ಇದು ಆರ್ಥಿಕ ಬೆಳವಣಿಗೆಯಿಂದ ಯಾರಿಗೆ ಪ್ರಯೋಜನವಾಗಿದೆ ಎಂಬುದನ್ನು ಅವಲಂಬಿಸುತ್ತದೆ.

ಕನಿಷ್ಟ ಶಿಕ್ಷಣ, ಅಗತ್ಯ ಆರೋಗ್ಯ, ಭೂಸುಧಾರಣೆಯನ್ನು ಕೂಡಲೇ ಪೂರ್ಣಗೊಳಿಸಿದ್ದು ಮುಂತಾದವುಗಳನ್ನೊಳಗೊಂಡ ಅನೇಕ ಐತಿಹಾಸಿಕ ಕಾರಣಗಳಿಂದಾಗಿ, ಭಾರತ, ಬ್ರೆಜಿಲ್, ಪಾಕಿಸ್ತಾನಕ್ಕಿಂತ ಜಪಾನ್, ಕೊರಿಯಾ, ಚೀನಾ, ಹಾಂಗ್‌ಕಾಂಗ್, ಮೊದಲಾದ ದೇಶಗಳ ಆರ್ಥಿಕ ಚಟುವಟಿಕೆಗಳಲ್ಲಿ ಸಾಮಾನ್ಯ ಜನರು ವ್ಯಾಪಕವಾಗಿ ಭಾಗವಹಿಸುವುದು ಸಾಧ್ಯವಾಯಿತು. ಭಾರತ ಬ್ರೆಝಿಲ್ ಹಾಗೂ ಪಾಕಿಸ್ತಾನದಲ್ಲಿ ಸಾಮಾಜಿಕ ಅವಕಾಶವನ್ನು ಕಲ್ಪಿಸುವುದು ನಿಧಾನವಾಗಿ ಸಾಗಿದೆ. ಇದರಿಂದಾಗಿ ಆರ್ಥಿಕ ಬೆಳವಣಿಗೆಗೆ ಅಡೆತಡೆಯಾಗಿದೆ. ಸಾಮಾಜಿಕ ಅವಕಾಶ ಹೆಚ್ಚಿಸುವುದರಿಂದ, ಅಧಿಕ ಉದ್ಯೋಗ ನೀಡುವ ಆರ್ಥಿಕ ಬೆಳವಣಿಗೆಯು ಸಾಧ್ಯವಾಗಿದೆ ಹಾಗೂ ಆಯುನಿರೀಕ್ಷಣೆ ಹೆಚ್ಚು ಮಾಡಿ ಮರಣ ಸಂಖ್ಯೆ ಕಡಿಮೆ ಮಾಡಿ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಲಾಗಿದೆ. ಕೆಲವು ಹೆಚ್ಚು ಅಭಿವೃದ್ಧಿಯ ದರ ಹೊಂದಿದ ದೇಶಗಳಾದ ಬ್ರೆಝಿಲ್‌ನಲ್ಲಿ ಈ ಹೋಲಿಕೆ ತೀವ್ರವಾಗಿದೆ. ಈ ದೇಶಗಳಲ್ಲಿ ತೀರ ಸಾಮಾಜಿಕ ಅಸಮಾನತೆ, ನಿರುದ್ಯೋಗ, ಜನಾರೋಗ್ಯ ಸಾಧನೆಯಲ್ಲಿ ಅಲಕ್ಷ್ಯ ಕಂಡುಬಂದರೂ, ಈ ದೇಶಗಳು ತಲಾ ಒಟ್ಟಾರೆ ರಾಷ್ಟ್ರೀಯ ಆದ್ಯಾಯದಲ್ಲಿ ಬೆಳವಣಿಗೆಯನ್ನು ಹೊಂದಿವೆ. ಹೆಚ್ಚು ಆರ್ಥಿಕ ಬೆಳವಣಿಗೆಯುಳ್ಳ ದೇಶಗಳ ಜನಾಯುಷ್ಯದ ಹೆಚ್ಚಳ ನಿಧಾನವಾಗಿ ಸಾಗಿದೆ. ಬೆಳವಣಿಗೆ ಆಧಾರಿತ ಪದ್ಧತಿಯು ವೇಗವಾದ ಆರ್ಥಿಕ ಬೆಳವಣಿಗೆಯೊಂದಿಗೆ ಅದರ ಯಶಸ್ಸು ಬೆಳವಣಿಗೆಯ ಗತಿ, ಜನಸಾಮಾನ್ಯರಲ್ಲಿ ವ್ಯಾಪಕ ಆಧಾರವುಳ್ಳ ಆರ್ಥಿಕತೆ ಹಾಗೂ ಅಧಿಕ ಆರ್ಥಿಕ ಸಂಪತ್ತಿನ ಸರಿಯಾದ ಉಪಯೋಗದ ಮೇಲೆ ಅವಲಂಬಿಸುತ್ತದೆ.

ಆರೋಗ್ಯ ರಕ್ಷಣೆಯ ರಾಜಕಾರಣ: ಆರ್ಥಿಕ ದೂರದೃಷ್ಟಿ ಇರುವುದು ತಪ್ಪಲ್ಲ, ಆದರೆ ಜನಸಂಪತ್ತನ್ನು ಜನೋಪಯೋಗಕ್ಕೆ ಉಪಯೋಗಿಸದೇ ಇರುವುದು ತಪ್ಪು ಹಾಗೂ ಆರ್ಥಿಕ ರಕ್ಷಣೆಗೆ ಆಪತ್ತು ಉಂಟುಮಾಡಬಹುದಾಗಿದೆ. ಬಡದೇಶಗಳ ಜನಸಂಪನ್ಮೂಲಗಳನ್ನು ಸಮಾಜದ ಒಳಿತಿಗೆ ಉಪಯೋಗಿಸದೆ ಕೇವಲ ಯುದ್ಧ ಮಾಡಲು ಸೈನ್ಯ ಶಕ್ತಿಯನ್ನು ವೃದ್ಧಿಸಲು ಉಪಯೋಗಿಸಲಾಗುತ್ತಿದೆ. ಯಾವುದಕ್ಕೆ ಆದ್ಯತೆ ಕೊಡಬೇಕು ಎಂಬುದರ ಗೊಂದಲದ ಸಂಕೇತವಿದು.

> "ಜನರು ಕೇವಲ ರೋಗಿಗಳಂತೆ ನಿಷ್ಕ್ರಿಯರಾಗದೆ ಬದಲಾವಣೆಯ ಹರಿಕಾರರಾಗಬೇಕು. ನಿಷ್ಕ್ರಿಯಿಯ ಫಲ ರೋಗ ಹಾಗೂ ಸಾವು"
>
> \- ಅಮರ್ತ್ಯಸೇನ್



ಈ ಮುಖ್ಯ ವಿಷಯ ಸಾಮಾಜಿಕ ಜೀವನದ ಎರಡು ವಿಷಯಗಳಿಗೆ ಸಂಬಂಧಿಸಿದೆ. ಒಂದು ಸಕ್ರಿಯ ರಾಜಕಾರಣದ ಪಾತ್ರವನ್ನು ಗುರುತಿಸುವುದು; ಎರಡು ಆರ್ಥಿಕ ಚರ್ಚೆಯ ಮುಕ್ತ ಮನಸ್ಸಿನ ಪರಾಮರ್ಶೆ ಮಾಡುವುದು. ಸಂಪನ್ಮೂಲಗಳನ್ನು ಹಂಚುವಾಗ ಆರೋಗ್ಯ ಹಾಗೂ ಶಿಕ್ಷಣಕ್ಕಿಂತ ಹೆಚ್ಚಿನ ಮಹತ್ವ ಕೊಡದಿದ್ದಲ್ಲಿ ಅದು ಅಪಾಯವನ್ನು ಉಂಟು ಮಾಡಬಲ್ಲದು. ಈ ಅಪಾಯವನ್ನು ತಡೆಗಟ್ಟಲು ಪ್ರಬುದ್ಧ ಸಾರ್ವಜನಿಕ ಚರ್ಚೆ ಸಹಾಯಕವಾಗಬಲ್ಲದು. ಜನರು ಸಮರ್ಥ ಜೀವನ ನಡೆಸಲು ಪ್ರಮುಖ ಅವಶ್ಯಕತೆಗಳನ್ನು ಹುಡುಕಿ ನಿರ್ಧರಿಸಬೇಕಾಗುತ್ತದೆ. ಪ್ರಜಾಪ್ರಭುತ್ವದ ವಿಧಾನ ಲಭ್ಯವಿರುವುದರಿಂದ ಜನರ ಅಗತ್ಯತೆಗಳನ್ನು ಗೊತ್ತುಪಡಿಸಿ, ಸಂಪನ್ಮೂಲಗಳನ್ನು ಸರಿಯಾಗಿ ಬೆಳೆಸಲು ಮುಕ್ತಮಾಹಿತಿ ಹಾಗು ಚರ್ಚೆ ಅಗತ್ಯ. ಆರೋಗ್ಯ ರಕ್ಷಣೆಯ ಚರ್ಚೆಯಲ್ಲಿ ಹುಸಿ ಆರ್ಥಿಕತೆಯನ್ನು ಗುರುತಿಸಬಹುದಾಗಿದೆ. ರಾಷ್ಟ್ರ ಶ್ರೀಮಂತವಾಗುವ ತನಕ ಸಂಪನ್ಮೂಲಗಳ ಕೊರತೆಯಿರುವುದರಿಂದ ಆರೋಗ್ಯ ಹಾಗೂ ಶಿಕ್ಷಣದಂತಹ ಸಾಮಾಜಿಕ ಅಗತ್ಯಗಳಿಗೆ ಹೆಚ್ಚು ಹಣ ವಿನಿಯೋಗಿಸುವುದನ್ನು ಮುಂದೂಡಬೇಕು ಎಂದು ಹೇಳಲಾಗುತ್ತದೆ. ಆರೋಗ್ಯ ಹಾಗೂ ಶಿಕ್ಷಣ ಸೇವೆಗಳು ಬೇರೆ ವೆಚ್ಚಗಳಿಗೆ ಹೋಲಿಸಿದಲ್ಲಿ ಕಡಿಮೆ ಖರ್ಚಿನದು ಹಾಗೂ ಹೆಚ್ಚು ಉದ್ಯೋಗಗಳನ್ನು ನೀಡುವಂತಹವು. ಆದ್ದರಿಂದ ಬಡ ದೇಶದಲ್ಲಿ ಆರೋಗ್ಯ ಹಾಗೂ ಶಿಕ್ಷಣದ ಸೇವೆಗಳನ್ನು ವ್ಯಾಪಕವಾಗಿಸಲು ಸಂಪನ್ಮೂಲದ ಕೊರತೆ ಅಡ್ಡ ಬರಬೇಕಾಗಿಲ್ಲ.

ಉಪಸಂಹಾರ

ಒಳ್ಳೆಯ ಆರೋಗ್ಯವು ಒಳ್ಳೆ ಬೆಳವಣಿಗೆಗೆ ಪೂರಕವೇ ಎಂದು ಪ್ರಶ್ನಿಸುವವರು ಒಳ್ಳೇ ಆರೋಗ್ಯ, ಬೆಳವಣಿಗೆಯ ಅವಿಭಾಜ್ಯ ಅಂಗ ಎಂಬುದನ್ನು ನಿರ್ಲಕ್ಷಿಸುತ್ತಾರೆ. ಆರೋಗ್ಯ ರಕ್ಷಣೆಯನ್ನು ಸಾಧನವಾಗಿಸಿ ಪ್ರಗತಿ ಸಾಧಿಸಿ ಆರ್ಥಿಕ ಬೆಳವಣಿಗೆಗೆ ಅದು ಪೂರಕವೆಂದು ಸಾಧಿಸಬೇಕಾಗಿಲ್ಲ. ಸಂದರ್ಭ ಒಳ್ಳೆಯದಾಗಿದ್ದಲ್ಲಿ ಒಳ್ಳೇ ಆರೋಗ್ಯ ಹಾಗೂ ಆರ್ಥಿಕ ಸಂಪತ್ತು ಪರಸ್ಪರ ಪೂರಕ. ಆರೋಗ್ಯವಂತ ಮಾನವರು ಹೆಚ್ಚು ಗಳಿಸಬಲ್ಲರು, ಹೆಚ್ಚು ಗಳಿಸಿದವರು ಆರೋಗ್ಯ ಸೌಲಭ್ಯವನ್ನು ದೊರಕಿಸಿಕೊಳ್ಳಬಲ್ಲರು; ಒಳ್ಳೇ ಪೌಷ್ಠಿಕ ಆಹಾರವನ್ನು ಉಪಯೋಗಿಸಬಲ್ಲರು; ಹಾಗೂ ಆರೋಗ್ಯಕರ ಜೀವನ ನಡೆಸಲು ಸ್ವತಂತ್ರರು.

ಆರೋಗ್ಯ ಸುಧಾರಿಸಲು ಅಂತಹ ಅನುಕೂಲತೆಗಳು ಇಲ್ಲದ ಸಂದರ್ಭದಲ್ಲಿ ಆರೋಗ್ಯ ನೀತಿಯೂ ಸೇರಿದ ಹಾಗೆ ಅನೇಕ ಕ್ರಮಗಳನ್ನು ಕೈಗೊಳ್ಳಬಹುದು. ಆರ್ಥಿಕ ಪ್ರಗತಿ ಹಾಗೂ ಆರೋಗ್ಯ, ಸುಧಾರಣೆಗೆ ಸಂಬಂಧವಿದ್ದರೂ ಇಂದು ದೇಶಗಳ ಧೋರಣೆಗಳನ್ನು ರೂಪಿಸುವ ವಿಧಾನದ ತಪ್ಪು ದೃಷ್ಟಿಕೋನದಿಂದಾಗಿ ಸಡಿಲಗೊಳ್ಳುತ್ತದೆ. ಆರ್ಥಿಕ ಬೆಳವಣಿಗೆಯಿಂದ ಉತ್ಪನ್ನವಾದ ಹೆಚ್ಚಿನ ಆದಾಯವನ್ನು ಜನಾರೋಗ್ಯ ಸುಧಾರಿಸಲು ಹಾಗೂ ಬಡತನ ಕಡಿಮೆ ಮಾಡಲು ಹೇಗೆ ಉಪಯೋಗಿಸಲಾಗುವುದು ಎಂಬುದರ ಮೇಲೆ ಆರೋಗ್ಯ ಸುಧಾರಣೆ ಸಾಧ್ಯ. ಬೆಳವಣಿಗೆ ಆಧಾರಿತ ಆರೋಗ್ಯ ಸಾಧನೆ ಕೇವಲ ಆರ್ಥಿಕ ಬೆಳವಣಿಗೆಗಿಂತ ಹೆಚ್ಚು ಪ್ರಯೋಜನಕಾರಿ. ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿಲ್ಲದಿದ್ದರೂ ಪ್ರಾಥಮಿಕ ಜನ ಆರೋಗ್ಯಕ್ಕೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಕೆ ಮಾಡಬಹುದಾಗಿದೆ. ವೈದ್ಯಕೀಯ ಚಿಕಿತ್ಸೆ ಹಾಗೂ ಆರೋಗ್ಯ ರಕ್ಷಣೆಯನ್ನು ಜನರಿಗೆ ತಲುಪಿಸುವುದಕ್ಕೆ ಸಂಬಂಧಿಸಿದ ಹಣ ನೀಡಿಕೆ ಬಗ್ಗೆ ಗಮನ ಹರಿಸುವುದು ಅತಿಮುಖ್ಯ. ಆರೋಗ್ಯ, ರಕ್ಷಣೆ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಸೇವೆಯಾಗಿರುವುದರಿಂದ ಕಡಿಮೆ ಆದಾಯವಿರುವ ದೇಶಗಳು ಆರೋಗ್ಯದ ಬಗ್ಗೆ ಹೆಚ್ಚು ಗಮನ ವಹಿಸಬೇಕು.

ಕೊನೆಯದಾಗಿ ಸಕ್ರಿಯ ರಾಜಕಾರಣ ಹಾಗೂ ಪ್ರಬುದ್ಧ ಆರ್ಥಿಕ ಸಂಪನ್ಮೂಲಗಳನ್ನು ಸಾಮಾಜಿಕವಾಗಿ ಹಂಚುವ ಕೆಲಸದ ಸಾರ್ವಜನಿಕ ಚರ್ಚೆಯು ಅವಿಭಾಜ್ಯ ಅಂಗ. ಪ್ರಬುದ್ಧ ಸಾರ್ವಜನಿಕ ಚರ್ಚೆ, ಜನರ ಭಾಗವಹಿಸುವಿಕೆಯಿಂದ ಮಾತ್ರ ನಮ್ಮ ಜೀವನಕ್ಕೆ ಹಾಗೂ ಸ್ವಾತಂತ್ರ್ಯಕ್ಕೆ ರಕ್ಷಣೆ ನೀಡಬಲ್ಲ ಬದಲಾವಣೆ ತರಲು ಸಾಧ್ಯ. ಜನರು ಕೇವಲ ರೋಗಿಗಳಂತೆ ನಿಷ್ಕ್ರಿಯರಾಗದೆ ಬದಲಾವಣೆಯ ಹರಿಕಾರರಾಗಬೇಕು, ನಿಷ್ಕ್ರಿಯತೆಯ ಫಲ ರೋಗ ಹಾಗೂ ಸಾವು.

○



ಬೆಂಗಳೂರಿನಲ್ಲಿ ಪೋಲೀಸರ ಲಾಠಿಯೇಟಿಗೆ ಬಲಿಯಾಗಿ ಯಲಹಂಕದ ಬಳಿಯ ಕೋಗಿಲು ಗ್ರಾಮದ ನಾಗರಾಜು ಅಸು ನೀಗಿದ್ದಾರೆ. ಅವನ ತಪ್ಪಿಷ್ಟೇ, ಸಂವಿಧಾನ ವಿಮರ್ಶೆ ಬೇಡ ಎಂದು ಒತ್ತಾಯಿಸಲು ರಾಜಭವನದ ಕಡೆಗೆ ತೆರಳುತ್ತಿದ್ದ ದಲಿತರ ಮೆರವಣಿಗೆಯಲ್ಲಿ ಪಾಲುಗೊಂಡಿದ್ದು. ಅದೇ ರೀತಿ ಗದಗ್ ಜಿಲ್ಲೆಯ ಮೂಲೆಯಲ್ಲಿರುವ ಅದೇ ರೀತಿ ಗಜೇಂದ್ರಗಡ ಎಂಬ ಪುಟ್ಟಪಟ್ಟಣದ ವಿದ್ಯಾರ್ಥಿ ಯುವಕರು ಗ್ರಾಮೀಣ ಕೃಪಾಂಕ ಕೇಳಿ ಚಳುವಳಿ ಮಾಡಿದರು. ನೂರಾರು ಜನರಿಗೆ ಲಾಠಿಯೇಟು ಹಾಗೂ ಕೊಲೆ ಮಾಡಲು ಯತ್ನಿಸಿದರೆಂಬ ಸುಳ್ಳು ಕೇಸು. ಹಳ್ಳಿ ಹಳ್ಳಿಗಳಲ್ಲಿ ವಿದ್ಯಾರ್ಥಿಗಳ ಮನೆಗೆ ನುಗ್ಗಿ ದಾಂಧಲೆ ನಡೆಸಿ ಅವರ ಪುಸ್ತಕ, ಕಾಗದಗಳನ್ನು ಎತ್ತಿಕೊಂಡು ಬರುವ ಪೋಲೀಸರು.

ಗಜೇಂದ್ರ ಗಡ

ಕೃಪಾಂಕ ಕೇಳಿದವರಿಗೆ ಲಾಠಿ ಏಟು, ಬಂಧನ

ಕೆ.ಮಹಾಂತೇಶ್

ಗಜೇಂದ್ರಗಡ-ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ಬರುವ ಒಂದು ಚಿಕ್ಕ ಪಟ್ಟಣ. ಜಿಲ್ಲೆಯಲ್ಲಿ ಶೈಕ್ಷಣಿಕವಾಗಿಯೂ ಸಹ ಮುಂದುವರೆದ ಸ್ಥಳ. ಪ್ರಾಥಮಿಕ ಹಂತದಿಂದ ಹಿಡಿದು-ಪದವಿ-ಶಿಕ್ಷಣದವರೆಗೂ ಇಲ್ಲಿ ಅವಕಾಶಗಳು ಲಭ್ಯವಿದೆ. ಸರ್ಕಾರಿ- ಶಾಲಾ-ಕಾಲೇಜುಗಳ ಜೊತೆ ಖಾಸಗೀ ಶಾಲಾ-ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಮಾತ್ರವಲ್ಲದೆ, ಯಾವೊಂದು ಸೌಲತ್ತುಗಳು ಇಲ್ಲದೆ ಇರುವ ಹಲವು ಹೋಮಿಯೋಪಥಿ ಮತ್ತು ಆಯುರ್ವೇದಿಕ್ ಖಾಸಗಿ ಕಾಲೇಜುಗಳು ಸಹ ತಲೆ ಎತ್ತಿವೆ. ಕೃಷಿ ಚಟುವಟಿಕೆಯ ಜೊತೆಯಲ್ಲೇ ವ್ಯಾಪಾರ ವಹಿವಾಟು ಪ್ರಧಾನವಾಗಿ ನಡೆಯುತ್ತಿರುವ ಗಜೇಂದ್ರಗಢ ಪಟ್ಟಣದ ಜನಸಂಖ್ಯೆ ಸುಮಾರು 25 ರಿಂದ 30 ಸಾವಿರದಷ್ಟಿರಬಹುದು. ಗದಗ ಜಿಲ್ಲೆಯಲ್ಲಿಯೇ ಸಾಹಿತ್ಯಿಕ, ಸಾಂಸ್ಕೃತಿಕ, ಪ್ರಗತಿಪರ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುವಾಗಲೇ, ಮಟ್ಕಾ, ಜೂಜುನಂತಹ ಸಮಾಜ ಬಾಹಿರ ಚಟುವಟಿಕೆಗಳ ಕೇಂದ್ರವಾಗಿ, ಗಜೇಂದ್ರಗಡ ಮಾರ್ಪಾಡಾಗುತ್ತಿದೆ ಎಂಬ ಆತಂಕದ ವರದಿಗಳು ಕೂಡಾ ಕೇಳಿಬರುತ್ತಿವೆ.

ಫೆ.25 ರಂದು ಗಜೇಂದ್ರಗಢದಲ್ಲಿ ಗ್ರಾಮಾಂತರ ಕೃಪಾಂಕಕ್ಕಾಗಿ 'ಸಂವಿಧಾನ ಪರಾಮರ್ಶೆ' ಗೆ ವಿರೋಧಿಸಿ ವಿದ್ಯಾರ್ಥಿಗಳು ಮುಷ್ಕರ ನಡೆಸಿದ ಸಂದರ್ಭದಲ್ಲಿ ನಡೆದ ಅಹಿತಕರ ಘಟನೆಗಳು ಮತ್ತಷ್ಟು ಆತಂಕವನ್ನು ಹೆಚ್ಚಿಸಿವೆ. ವಿದ್ಯಾರ್ಥಿ-ಯುವಜನರ ಚಳುವಳಿಯ ದುರ್ಲಾಭವನ್ನು ಸಮಾಜಘಾತುಕ ಶಕ್ತಿಗಳು ಸಮರ್ಥವಾಗಿ ಬಳಸಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಅಲ್ಲದೆ ಕಳೆದ ಹಲವು ವರ್ಷಗಳಿಂದಲೂ ಈ ಚಿಕ್ಕನಗರದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ನಾಶಪಡಿಸಲು ಪ್ರಯತ್ನಿಸುತ್ತಿದ್ದ ಶಕ್ತಿಗಳಿಗೆಲ್ಲಾ ಇದೊಂದು ಅವಕಾಶ ಆಹಾರವಾಗಿ ಸಿಕ್ಕಿದೆ. ಮತ್ತೊಂದೆಡೆ, ಹಲವು ವರ್ಷಗಳಿಂದಲೂ ಕ್ರಿಯಾತ್ಮಕವಾಗಿ, ಪ್ರಗತಿಪರವಾಗಿ ಹೋರಾಟ ನಡೆಸುತ್ತಿದ್ದ, ಚಟುವಟಿಕೆಗಳನ್ನು ನಡೆಸುತ್ತಿದ್ದ ಇಲ್ಲಿನ ಎಸ್.ಎಫ್.ಐ. ಮತ್ತು ಡಿವೈಎಫ್ಐ ಸಂಘಟನೆಗಳು ಇಂತಹ ಘಟನೆಗಳಿಗೆ ಕಾರಣವಲ್ಲವೆಂದು, ಇದೊಂದು ಪೋಲೀಸರ ವಿರುದ್ಧ ಗಜೇಂದ್ರಗಢ ಜನತೆ ಇದುವರೆಗೂ ಇಟ್ಟುಕೊಂಡಿದ್ದ ಆಕ್ರೋಶವೆನ್ನಬಹುದು. ಅಲ್ಲದೆ, ಇದೇ ಅವಕಾಶವನ್ನು ಕೆಲವು ಸಮಾಜಘಾತುಕರು ಬಳಸಿಕೊಂಡಿದ್ದಾರೆಂದು ಸ್ಥಳೀಯ ಮತ್ತು ರಾಜ್ಯ ಮಟ್ಟದ ಪತ್ರಿಕೆಗಳು ವರದಿ ಮಾಡಿವೆ.

ಘಟನೆಯ ವಿವರ

ಇತ್ತೀಚಿಗೆ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಎತ್ತಿ ಹಿಡಿದು ಗ್ರಾಮಾಂತರ ಕೃಪಾಂಕವನ್ನು ರದ್ದುಪಡಿಸಿದ್ದರಿಂದ 'ಸಂವಿಧಾನ ತಿದ್ದುಪಡಿ' ಮಾತ್ರವೇ ಇರುವ ಏಕೈಕ ಮಾರ್ಗವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ/ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಗ್ರಾಮಾಂತರ ಯುವಜನರು ಮತ್ತು ವಿದ್ಯಾರ್ಥಿಗಳು ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕೆಂದು ಎಸ್.ಎಫ್.ಐ.-ಡಿವೈಎಫ್ಐ ರಾಜ್ಯ ಸಮಿತಿಗಳು ಜಂಟಿಯಾಗಿ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಫೆ.25 ರಂದು ಗಜೇಂದ್ರಗಢದ ಶಾಲಾಕಾಲೇಜಿನ ವಿದ್ಯಾರ್ಥಿಗಳು, ಬೆಳಿಗ್ಗೆ 11 ಗಂಟೆಗೆ ಸ್ಥಳೀಯ-ಭೂಮರೆಡ್ಡಿ ಡಿಗ್ರಿ ಕಾಲೇಜಿನಿಂದ ಶಾಂತಿಯುತ ಮೆರವಣಿಗೆ ಪ್ರಾರಂಭಿಸಿ, ಊರಿನ ಮಧ್ಯ ಭಾಗದಲ್ಲಿರುವ ಕಾಲಕಾಲೇಶ್ವರಿ ವೃತ್ತದ ಬಳಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿ ಬಹಿರಂಗ ಸಭೆ ನಡೆಸುತ್ತಿದ್ದಾಗ ಮಧ್ಯ ಪ್ರವೇಶಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಬಿ.ಚವ್ಹಾಣ್ ಮತ್ತು ರೋಣದ ಪಿ.ಎಸ್.ಐ. ಮರಬಶೆಟ್ಟಿ ಪ್ರತಿಭಟನಾಕಾರರೊಂದಿಗೆ ರಸ್ತೆ ತಡೆ ನಡೆಸುವ ವಿಚಾರದಲ್ಲಿ ಮಾತಿನ ಚಕಮಕಿ ಪ್ರಾರಂಭಿಸಿದರು. ಅಲ್ಲದೆ, ಗ್ರಾಮೀಣ ಯುವಜನರ ಅಸಮಾಧಾನವನ್ನು ಅರ್ಥ ಮಾಡಿಕೊಳ್ಳದೆ ಅವರಿಗೆ ಅನಾಗರಿಕ ಶಬ್ದಗಳನ್ನು ಬಳಸಿ ಪರಿಸ್ಥಿತಿಯು ವಿಕೋಪಕ್ಕೆ ಹೋಗಲು ಕಾರಣರಾಗಿದ್ದಾರೆ. ಪೋಲೀಸ್ ಅಧಿಕಾರಿಗಳ ಅನುಚಿತ ವರ್ತನೆಯನ್ನು ತೀವ್ರವಾಗಿ ಖಂಡಿಸಿದ ವಿದ್ಯಾರ್ಥಿಗಳು ಈ ಬಗ್ಗೆ ಕ್ಷಮಾಪಣೆ ಕೇಳಲು ಆಗ್ರಹಪಡಿಸಿದಾಗ ಆಕ್ರೋಶಗೊಂಡ ಪೋಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ನಡೆಸಿದ್ದಾರೆ. ವಿದ್ಯಾರ್ಥಿಗಳ ಕಡೆಯಿಂದಲೂ ಕಲ್ಲು ತೂರಾಟದಂತಹ ಘಟನೆಗಳು ನಡೆದು, ಅಲ್ಲೇ ನಿಂತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಗಾಜುಗಳು ಒಡೆದು ಹೋಗಿವೆ. ಪರಿಸ್ಥಿತಿ ಕೈಮೀರುವ ವೇಳೆಗಾಗಲೇ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಊರಿನ ಇತರೆ ಸಾವಿರಾರು ಜನರು ಜಮಾವಣೆಗೊಂಡು ಪೋಲೀಸರ ಕ್ರಮವನ್ನು ಖಂಡಿಸಿದ್ದಾರೆ. ಅಷ್ಟಕ್ಕೆ ಪೋಲೀಸರು ಸುಮ್ಮನಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತಿರಲಿಲ್ಲ. ಸಿಕ್ಕ-ಸಿಕ್ಕವರ ಮೇಲೆಲ್ಲಾ ಲಾಠಿ ಚಾರ್ಜ್ ನಡೆಸಿ ಪ್ರಮುಖ ಬೀದಿಗಳಲ್ಲಿ ವಿದ್ಯಾರ್ಥಿಗಳನ್ನು ಓಡಿಸಿಕೊಂಡು ಹೋಗಿ ಹೊಡೆದಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಎಸ್‌ಎಫ್ಐ-ಡಿವೈಎಫ್ಐ ಮುಖಂಡರು, ಎಲ್ಲಾ ವಿದ್ಯಾರ್ಥಿಗಳು ಮನೆಗಳಿಗೆ ತೆರಳಲು ಸೂಚಿಸಿ, ತಾವು ತಮ್ಮ ಮನೆಗಳಿಗೆ ಹೋಗಿದ್ದಾರೆ.

ಈ ಚಳುವಳಿ ಮುಗಿದು ಪೋಲೀಸರು ಸಿಕ್ಕ ಸಿಕ್ಕವರನ್ನು ಥಳಿಸಿ, ಒಂದು ಘಂಟೆಯ ನಂತರದಲ್ಲಿ ಊರಿನ ಮಧ್ಯದಲ್ಲಿ ನಿಲ್ಲಿಸಿದ್ದ ಪೋಲೀಸ್ ಜೀಪ್‌ಗೆ ಹಾಗೂ ಮೋಟಾರ್ ಬೈಕ್‌ಗೆ ಯಾರೋ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ. ಅಲ್ಲದೆ ಅದೇ ಗುಂಪು ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿ ಹೊರಗಡೆ ಇಟ್ಟಿದ್ದ ಕೂಲ್ ಡ್ರಿಂಕ್ಸ್ ಬಾಟಲಿಗಳನ್ನು ಒಡೆದು, ಅಲ್ಲಿದ್ದ ಬಸ್‌ಗಳ ಕಡೆಗೆ ತೂರಿ ಕಿಟಕಿ-ಬಾಗಿಲುಗಳ ಗಾಜುಗಳನ್ನು ಪುಡಿ ಪುಡಿಗೊಳಿಸಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳು ನಡೆಸಿದ ಈ ಚಳುವಳಿಗೂ ಮತ್ತು ನಂತರದಲ್ಲಿ ಘಟಿಸಿರುವ ಅಹಿತಕರ ಘಟನೆಗಳಿಗೂ ಯಾವುದೇ ನೇರ ಸಂಬಂಧ ಕಾಣುತ್ತಿಲ್ಲವೆಂದು ಸ್ಥಳೀಯರು ಹೇಳುತ್ತಾರೆ. ಅಲ್ಲದೆ ಆರಂಭದಲ್ಲಿಯೇ ಪೋಲೀಸರು ಸಂಯಮದಿಂದ ವರ್ತಿಸಿದ್ದರೆ ಇಂತಹ ಘಟನೆಯನ್ನು ನಮ್ಮೂರಿನಲ್ಲಿ ತಪ್ಪಿಸಲು ಸಾಧ್ಯವಿತ್ತು ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಈ ಘಟನೆಗೆ ಸಂಬಂಧಿಸಿ ಪೋಲೀಸರು ಸಿಕ್ಕ-ಸಿಕ್ಕ ವಿದ್ಯಾರ್ಥಿ-ಯುವಕರನ್ನು ಬಂಧಿಸಿ ಸುಮಾರು 47 ಜನರನ್ನು ನ್ಯಾಯಾಲಯದ ಬಂಧನಕ್ಕೊಪ್ಪಿಸಿ ಗದಗ್‌ನ ಜೈಲಿನಲ್ಲಿ ಇಟ್ಟಿದ್ದಾರೆ.

ಪತ್ರಿಕೆಗಳು ಹೇಳುತ್ತಿರುವುದೇನು?

ಪತ್ರಿಕಾ ವರದಿಗಳೇ ಸಾಕ್ಷ್ಯಾಧಾರಗಳಾಗಲು ಸಾಧ್ಯವಿಲ್ಲ ನಿಜ. ಆದರೆ ಗಜೇಂದ್ರಗಡದಲ್ಲಿ ಫೆ.25 ರಂದು ನಡೆದ ಘಟನೆಗಳಿಗೆ ಸಂಬಂಧಿಸಿದಂತೆ ಅಲ್ಲಿನ ರಾಜ್ಯ ಮಟ್ಟದ ಮತ್ತು ಸ್ಥಳೀಯ ಪತ್ರಿಕೆಗಳ ಅಭಿಪ್ರಾಯಗಳು ತುಂಬಾ ಮಹತ್ವದ್ದಾಗಿವೆ.

ಗಜೇಂದ್ರಗಡದಲ್ಲಿ ನಡೆದ 'ದುಷ್ಕೃತ್ಯ'ದಲ್ಲಿ ವಿದ್ಯಾರ್ಥಿ ಚಳುವಳಿ ನೆಪ ಮಾತ್ರ. ಇದರ ಹಿಂದೆ ಸಮಾಜಘಾತುಕ ಶಕ್ತಿಗಳ ಕೈವಾಡ ಇದೆ ಎಂದು ಒಂದು ಪತ್ರಿಕೆ ಬರೆದರೆ, ಹುಬ್ಬಳ್ಳಿಯ ಕೆಲವು ಗೂಂಡಾಗಳ ಕೈವಾಡ ಈ ಘಟನೆಗಳ ಹಿಂದೆ ಇದೆ ಎಂದು ಮತ್ತೊಂದು ಪತ್ರಿಕೆ ಬರೆದಿದೆ. ಅಲ್ಲದೆ ಸಂಜೆಯ ದಿನಪತ್ರಿಕೆಯೊಂದು 'ಈ ಘಟನೆಗೆ ಕಾರಣವಾಗಿರುವ ಸಮಾಜ ಘಾತುಕರ ಬಗ್ಗೆ ಪೋಲೀಸ್ ಇಲಾಖೆಗೆ ಗೊತ್ತಿದೆ' ಎಂದು ಬರೆದಿದೆ.

ಸ್ಥಳೀಯ ಪತ್ರಿಕೆಗಳು ಈ ಘಟನೆಗಳ ಕುರಿತಂತೆ ಪ್ರತ್ಯೇಕ ಲೇಖನಗಳನ್ನು ಬರೆದು, ಪೋಲೀಸರ ಅನುಚಿತ ವರ್ತನೆಯನ್ನು ವಿದ್ಯಾರ್ಥಿ ಮುಖಂಡರ ಬೇಜವಾಬ್ದಾರಿತನವನ್ನು ಖಂಡಿಸಿದ್ದಾರೆ. ಅದರೊಂದಿಗೆ ಈ ಗಲಭೆಯ ಹಿಂದೆ ವ್ಯವಸ್ಥಿತ ರಾಜಕೀಯ ಪಿತೂರಿ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿವೆ.

ಎಸ್‌ಎಫ್ಐ-ಡಿವೈಎಫ್ಐ ನಿಯೋಗ ಭೇಟಿ

ಈ ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ, ಡಿವೈಎಫ್ಐನ ಗದಗ ಜಿಲ್ಲಾ ಮುಖಂಡರಾದ ಅಬ್ದುಲ್ ರಜಾಕ್ ಮುಲ್ಲಾ, ಡಿವೈಎಫ್ಐ ಧಾರವಾಡ ಜಿಲ್ಲಾ ಮುಖಂಡರಾದ ಮಹೇಶ ಪತ್ತಾರ, ಎಸ್‌ಎಫ್ಐ ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮಣ್ ಕುಲಕರ್ಣಿ, ಗಜೇಂದ್ರಗಢಕ್ಕೆ ಭೇಟಿ ನೀಡಿದ್ದಾರೆ. ಇದಲ್ಲದೆ ಸಿಪಿಐ(ಎಂ) ಧಾರವಾಡ ಜಿಲ್ಲಾ ಕಾರ್ಯದರ್ಶಿ ಸಿ.ಆರ್.ಭಟ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ನಿತ್ಯಾನಂದ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಿ.ಜಿ.ಗೋಂದಕರ್ ನೇತೃತ್ವದ ನಿಯೋಗವು ಭೇಟಿ ನೀಡಿ, ಘಟನೆಗೆ ಕಾರಣವಾಗಿರುವ ಪರಿಸ್ಥಿತಿಗಳ ಮಾಹಿತಿ ಸಂಗ್ರಹಿಸಿ, ಬಂಧಿತರೆಲ್ಲರೂ ಅಮಾಯಕರಾಗಿದ್ದು, ಈ ಘಟನೆಯ ಹಿಂದೆ ಸ್ಥಳೀಯ ರಾಜಕೀಯ ಶಕ್ತಿಗಳ ಕೈವಾಡದ ಬಗ್ಗೆ ಶಂಕೆ ವ್ಯಕ್ತಪಡಿಸಿ, ಅಂತಹ ಸಮಾಜಘಾತುಕರನ್ನು ಕೂಡಲೇ ಬಂಧಿಸಬೇಕು ಮತ್ತು ಬಂಧಿಸಿರುವ ಅಮಾಯಕ ವಿದ್ಯಾರ್ಥಿ ಯುವಜನರನ್ನು ಬಿಡುಗಡೆ ಮಾಡಲು ಒತ್ತಾಯಿಸಿವೆ.

ಡಿವೈಎಫ್ಐ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್‌ಎಫ್ಐ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ, ರಾಜ್ಯ ಸಮಿತಿ ಸದಸ್ಯ ಲಿಂಗರಾಜ್ ಮತ್ತು ಧಾರವಾಡ-ಗದಗ್ ಜಿಲ್ಲಾ ಡಿವೈಎಫ್ಐ ಮುಖಂಡರನ್ನೊಳಗೊಂಡ ರಾಜ್ಯ ಮಟ್ಟದ ನಿಯೋಗವು ಗದಗ ಮತ್ತು ಗಜೇಂದ್ರಗಡಕ್ಕೆ ಭೇಟಿ ನೀಡಿ ಜೈಲಿನಲ್ಲಿರುವ ವಿದ್ಯಾರ್ಥಿ-ಯುವಜನರನ್ನು, ಜಿಲ್ಲಾ ... ಸಂಗ್ರಹಿಸಿದ ವರದಿಯ ಆಧಾರದಲ್ಲಿ ಗದಗದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಗಜೇಂದ್ರಗಡದಲ್ಲಿ ಅಹಿತಕರ ಘಟನೆ ನಡೆಯಲು ಪೋಲೀಸರ ಅನುಚಿತ ವರ್ತನೆಯೇ ಕಾರಣವೆಂದು ಅಭಿಪ್ರಾಯ ಪಟ್ಟಿದೆ. ಮಾತ್ರವಲ್ಲ, ಪೋಲೀಸರ ತಪ್ಪುಗಳನ್ನು ಮುಚ್ಚಿಹಾಕಲು ಅಮಾಯಕ ವಿದ್ಯಾರ್ಥಿಗಳನ್ನು ಬಂಧಿಸಿ, ಅವರ ಮೇಲೆ ಕೊಲೆ ಯತ್ನದ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಎಂದು ಆರೋಪಿಸಲಾಯಿತು. ಅಲ್ಲದೆ ಬಂಧಿತ ವಿದ್ಯಾರ್ಥಿ ಯುವಜನರನ್ನು ಬಿಡುಗಡೆಗೊಳಿಸದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿತು.

ಎಸ್‌ಎಫ್ಐ ಸಂಘಟನೆಯನ್ನು ಮುಗಿಸಲು ಸಂಚು

ಗಜೇಂದ್ರಗಡದಲ್ಲಿರುವ ಭೂಮರೆಡ್ಡಿ ಪದವಿ ಕಾಲೇಜ್ ಕಳೆದ ಹಲವಾರು ವರ್ಷಗಳಿಂದಲೂ ಎಸ್‌ಎಫ್ಐನ ಕ್ರಿಯಾಶೀಲ ಕೇಂದ್ರ. ಎಸ್.ಎಫ್.ಐ ಮುಖಂಡರು, ಕಾರ್ಯಕರ್ತರು ನಿರಂತರವಾಗಿ ಅಲ್ಲಿ ಕಾರ್ಯಕ್ರಮಗಳ ಮೂಲಕ ಹೋರಾಟಗಳ ಮೂಲಕ ಹೆಸರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಆಡಳಿತ ಮಂಡಳಿಯು ವಿಪರೀತ ಶುಲ್ಕವನ್ನು ಹೆಚ್ಚಿಸಿದಾಗ ನಿರಂತರ ಪ್ರತಿಭಟನೆಯ ಮೂಲಕ ಹೋರಾಟ ನಡೆದು ಶುಲ್ಕ ಇಳಿಸಲು ಸಾಧ್ಯವಾಗಿದೆ. ಇದೇ ಕಾಲೇಜ್‌ನಲ್ಲಿ ಈ ಹಿಂದೆ ಹಲವಾರು ಎಸ್‌ಎಫ್ಐ ಮುಖಂಡರ ವಿರುದ್ಧ ಸುಳ್ಳು ಆರೋಪ ಹೊರಿಸಿ ಕಾಲೇಜಿನಿಂದ ಹೊರಹಾಕಿದಾಗ ಅದರ ವಿರುದ್ಧ ಪ್ರತಿಭಟನೆ ನಡೆದು ಜಯ ಗಳಿಸಲು ಸಾಧ್ಯವಾಗಿದೆ. ಇದು ಆಡಳಿತ ಮಂಡಳಿಗೆ ನುಂಗಲಾರದ ತುತ್ತಾಗಿರುವುದು ಸಹಜವಾಗಿದೆ. ಏನಾದರೂ ಮಾಡಿ ಈ ಕಾಲೇಜ್‌ನಲ್ಲಿ ಎಸ್‌ಎಫ್ಐ ಸಂಘಟನೆಯನ್ನು ಬೆಳೆಸಲು ಬಿಡಬಾರದೆನ್ನುವ ಪ್ರಯತ್ನ ಕಳೆದ ಹಲವಾರು ವರ್ಷಗಳಿಂದಲೂ ನಡೆಯುತ್ತಿತ್ತು. ಅಲ್ಲದೆ ಎಸ್‌ಎಫ್ಐಗೆ ಬೆಂಬಲಿಸುವ ಶಿಕ್ಷಕರಿಗೂ ಹಲವು ರೀತಿಯ ಕಿರುಕುಳಗಳು ನಡೆಯುತ್ತಾ ಬಂದವು.

ಫೆ.25 ರ ಘಟನೆ ಗಜೇಂದ್ರಗಡದಲ್ಲಿ ನಡೆಯುತ್ತಿದ್ದಂತೆ ಹಾಲು ಕುಡಿದಷ್ಟು ಸಂತಸಗೊಂಡ ಕಾಲೇಜು ...

ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಗಜೇಂದ್ರಗಡದಲ್ಲಿ ಗ್ರಾಮೀಣ ಕೃಪಾಂಕಕ್ಕಾಗಿ ಹೋರಾಟ ನಿರತ ವಿದ್ಯಾರ್ಥಿ-ಯುವಜನರ ಮೇಲೆಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು.

ವಿದ್ಯಾರ್ಥಿ ಯುವ ಜನರ ಮೇಲೆ ದೌರ್ಜನ್ಯ ನಡೆಸಿರುವ ಮತ್ತು ಇಡೀ ಘಟನೆಗೆ ಕಾರಣವಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಇತರೆ ಪೋಲೀಸ್‌ರನ್ನು ಸಸ್ಪೆಂಡ್ ಮಾಡಬೇಕು.

ಭೂಮರೆಡ್ಡಿ ಕಾಲೇಜಿನ ಆಡಳಿತ ಮಂಡಳಿ ಇಬ್ಬರು ಅರೆಕಾಲಿಕ ಉಪನ್ಯಾಸಕರನ್ನು 16 ಜನ ವಿದ್ಯಾರ್ಥಿಗಳನ್ನು ಪರೀಕ್ಷೆಯಿಂದ ಡಿಬಾರ್ ಮಾಡಿರುವ - ಪ್ರಜಾಪ್ರಭುತ್ವ ವಿರೋಧಿ ಕ್ರಮ ಕೈಬಿಡಬೇಕು.

ಈ ಘಟನೆಯಲ್ಲಿ ಕೈವಾಡವಿರುವ ಸಮಾಜಘಾತುಕ ಶಕ್ತಿಗಳನ್ನು ಬಂಧಿಸಬೇಕು ಮತ್ತು ಎಸ್.ಎಫ್.ಐ-ಡಿ.ವೈ.ಎಫ್.ಐ. ಕಾರ್ಯಕರ್ತರ ಮತ್ತು ಮುಖಂಡರ-ತಂದೆ-ತಾಯಿಗಳನ್ನು ಪೋಷಕರನ್ನು ಬಂಧಿಸುವುದು, ಬೆದರಿಸುವುದು ಇತ್ಯಾದಿ ಕ್ರಮಗಳನ್ನು ಕೈಬಿಡಬೇಕೆಂದು ಆಗ್ರಹಿಸಿ ರಾಜ್ಯದ ಎಲ್ಲಾ ಎಸ್.ಎಫ್.ಐ-ಡಿ.ವೈ.ಎಫ್.ಐ. ಘಟಕಗಳು ಇತರ ಪ್ರಗತಿಪರ ಸಂಘಟನೆಗಳೊಂದಿಗೆ ಸೇರಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಎಸ್.ಎಫ್.ಐ-ಡಿ.ವೈ.ಎಫ್.ಐ ರಾಜ್ಯ ಸಮಿತಿಗಳು ಕರೆ ನೀಡಿವೆ.



ಸಂವಿಧಾನ ಪರಾಮರ್ಶೆ ವಿರೋಧಿಸಿದ ಡಿ.ಎಸ್.ಎಸ್. ಕಾರ್ಯಕರ್ತರ ಮೇಲೆ ಪೋಲೀಸ್ ಲಾಠಿ ಪ್ರಹಾರ

"ಮೋಡಗಳಲ್ಲಿ ಮೊದಲ ಹೆಜ್ಜೆ"
ಕಥಾ ಸಂಕಲನದಿಂದ

ಅನುವಾದಕರು
ವೆಂಕಟರಾಜ ಪಾನಸೆ

ಕೃಪೆ:
ನವಕರ್ನಾಟಕ ಪ್ರಕಾಶನ

ಕಥೆ

ಕಳೆದ ವಾರ.........ಗಿಂಜನ ಬುಡಕಟ್ಟಿನ ಗ್ವೆಲ್ನಿಟ್ ಕೆಲಸ ಮಾಡುತ್ತಿದ್ದ ಜಾನುವಾರು ಕೇಂದ್ರದ ಬಿಳಿ ಒಡೆಯ ಅವನ ಹೆಂಡತಿಯ ಮೇಲೆ ಮಾಡಿದ ಅತ್ಯಾಚಾರದ ಫಲವಾಗಿ ಹುಟ್ಟಿದ ಕೂಸು 'ಎನ್ ಗೂಲ' ಆ ಕೂಸಿನ ತಾಯಿ ಹಾಗೂ ಇಡೀ ಬುಡಕಟ್ಟು ಆ ಮಗುವನ್ನು ಉಪೇಕ್ಷಿಸಿದರೂ ತನ್ನದಲ್ಲದ ಆ ಮಗುವನ್ನು ಪ್ರೀತಿಯಿಂದ ಸಲಹುತ್ತಾನೆ ಗ್ವೆಲ್ನಿಟ್.......... ಮುಂದೆ ಓದಿ

ಎನ್.ಗೂಲಾ

ಕೆಥರಿನ್. ಸುಸನ್ನ ಪ್ರಿಚರ್ಡ್ (ಆಸ್ಟ್ರೇಲಿಯ)

ಆಕಾಶದಲ್ಲಿ ಚಂದ್ರ ಮೇಲೇರಿ ಬರುತ್ತಿದ್ದ. ಎಲ್ಲಿಯಾದರೂ ಯಾವುದಾದರೂ ಧ್ವನಿ ಕೇಳಿಬಂದೀತೆ ಎಂದು ಕಾತರನಾಗಿ ನಿಂತು ನಿಂತು ಹುಡುಕುತ್ತಿದ್ದ. ಆತನಿಗೆ ಮಾರ್ಗದರ್ಶಕವಾಗುವ ಕಿಂಚಿತ್ ಸ್ವರವೂ ಎಲ್ಲಿಂದಲೂ ಕೇಳಿಬರಲಿಲ್ಲ. ಕೊನೆಗೊಮ್ಮೆ ಆ ಹೆಣ್ಣು ಮಗುವನ್ನು ಕಂಡ. ಅಂಗಾತ್ತಾಗಿ ಬಿದ್ದಿತ್ತು. ಕಪ್ಪು ಗೆದ್ದಲು ಹುಳುಗಳ ಹಿಂಡು ಹಿಂಡೇ ಮುತ್ತಿಕೊಂಡಿತ್ತು. ಕಣ್ಣು-ಬಾಯಿಗಳ ಸುತ್ತ ಮುಕುರಿಕೊಂಡಿದ್ದವು. ಕೈಕಾಲು, ಬೆರಳುಗಳ ಸಂದಿನೊಳಗಿಂದ ತೇವವನ್ನು ಹೀರುತ್ತಿದ್ದವು.

ಗ್ವೆಲ್ನಿಟ್ ಮಗುವನ್ನು ಕೈಗೆತ್ತಿಕೊಂಡ. ಜೀವಂತವಾಗಿ ಉಸಿರಾಡುತ್ತಿತ್ತು. ಗೆದ್ದಲು ಹುಳುಗಳು ಮಗುವಿನ ಚೇತನವನ್ನು ಇನ್ನೂ ಹೀರಿಕೊಂಡಿಲ್ಲವೆಂದು ನಂಬಲಾರದಷ್ಟು ಮಗು ಮೂರ್ಛೆ ಹೋಗಿತ್ತು. ಮಗುವಿನ ಮೈಗಂಟಿಕೊಂಡಿದ್ದ, ಬಾಯಿ ಕಣ್ಣುಗಳಿಗೆ ಮೆತ್ತಿಕೊಂಡಿದ್ದ, ಚರ್ಮ ಕಿತ್ತು ಗಾಯಗೊಂಡಿದ್ದ ಹಣೆಯಲ್ಲಿ ಹೀರುತ್ತಿದ್ದ ಗೆದ್ದಲು ಹುಳುಗಳನ್ನೆಲ್ಲ ತೊಡೆದು ಹಾಕಿದ. ಮಗುವಿನ ಮೈಯಲ್ಲಿ ಪುನಃ ಚೇತನ ತುಂಬಲು ಅವನ ಬಳಿಯಲ್ಲಿ ಬೇರೇನೂ ಇರಲಿಲ್ಲ. ಅವನ ಬಾಯಿ ಉಗುಳನ್ನು ಬಿಟ್ಟು. ಬಾಯಿ ಜೊಲ್ಲನ್ನೇ ಅದರ ಬಾಯಲ್ಲಿ ಹಾಕಿದ.

ಅತ್ಯಂತ ಜಾಗರೂಕತೆಯಿಂದ ಗ್ವೆಲ್ನಿಟ್ ಇಲ್ಲಿಂದ ಹೊರಟ. ದಾರಿಯಲ್ಲಿ ಆಗಾಗ ಅದರ ಬಾಯಲ್ಲಿ ತನ್ನ ಬಾಯನ್ನು ಇಕ್ಕುತ್ತಿದ್ದ. ಉಸಿರಾಟವಿದೆಯೆ, ಇಲ್ಲವೇ ಎಂದು ಕಿವಿ ಹಚ್ಚಿಕೇಳುತ್ತಿದ್ದ.

ಆತ ಅಂಗಳಕ್ಕೆ ಬಂದಾಗ ಎದುರಿಗೆ ಮಿಟ್ಟೂನಳೇ ಕಂಡಳು. ಸಾವಧಾನದಿಂದ ಆತ ಹೇಳಿದ; "ಎನ್'ಗೂಲ ಬದುಕದಿದ್ದರೆ ಮಿಟ್ಟೂನ್ - ನೀನು ಕೂಡಾ ಬಾಳಲಾರೆ ನೋಡು."

ಮಿಟ್ಟೂನ್ ಕೂಸನ್ನು ಕೈಗೆತ್ತಿಕೊಂಡಳು. ಮೊಲೆಯುಣ್ಣಲು ಅದರ ಬಾಯಿಗೆ ಬಲವೇ ಇರಲಿಲ್ಲ. ಎನ್'ಗೂಲಳ ಬಾಯಲ್ಲಿ ಹನಿ ಹನಿ ಹಾಲು ಬೀಳುವಂತೆ ಅವಳು ಮೊಲೆಗಳನ್ನು ಹಿಡಿದಳು. ತನ್ನಾತನಿಗೆ ಅದೇನು ಹುಚ್ಚು ಹಿಡಿದಿದೆಯೋ ಎಂಬುದು ಮಿಟ್ಟೂನಳಿಗೆ ಅರ್ಥವಾಗಲಿಲ್ಲ.

ಈ ಪಿಳ್ಳೆಯ ಬಗ್ಗೆ ತನ್ನಲ್ಲಿ ಹುಟ್ಟಿದ ಅಂತಃಕರಣ, ಅನುಕಂಪಗಳ ಬಗ್ಗೆ ಸ್ವತಃ ಗ್ವೆಲ್ನಿಟ್‌ಗೇ ವಿಚಿತ್ರವಾಗಿ ತೋರಿತು. ಅವನ ಮೂಳೆಗಳನ್ನು ಕರಗಿಸಿಬಿಡುವಂಥ ಮಾಟವೇನಾದರೂ ಆ ಕೂಸಿನಲ್ಲಿತ್ತೆ? ಅಥವಾ ಮಗುವಿನ ಕಣ್ಣಿನ ಹೊಳಪಿನಲ್ಲಿ ತನ್ನ ಗತ ಪೂರ್ವಿಕರ ಚೇತನವೇನಾದರೂ ಕಂಡು ಅವನ ಹೃದಯವನ್ನು ಗೆದ್ದಿತ್ತೆ? ಅಥವಾ ಆತನೆಂದೂ ಮರೆಯದ ಆ ಕೋಮಲ ಕುಸುಮದ ಪೀತ ಕಂದು ವರ್ಣದ ಆಕರ್ಷಣೆಯೇ?

ಮಿಟ್ಟೂನ್ ಸರಿಯಾಗಿ ಮಗುವನ್ನು ನೋಡಿಕೊಳ್ಳುವಳೋ ಇಲ್ಲವೊ ಎಂದು ಗ್ವೆಲ್ನಿಟ್ ಕೆಲವು ದಿನ ಕಾದುಕೊಂಡು ನೋಡುತ್ತಿದ್ದ. ಕೆಲವು ದಿನಗಳ ಬಳಿಕ ಹಾಗೆ ಕಾದು ನೋಡಬೇಕಾದ ಅವಶ್ಯಕತೆಯಿಲ್ಲವೆಂದು ತೋಚಿತು. ಯಾಕೆಂದರೆ ಎನ್'ಗೂಲ ಸತ್ತರೆ ತಾನೂ ಸಾಯಿಸಲ್ಪಡುವೆ ಎಂಬ ಭಯ ಅವಳಲ್ಲಿ ಈಗ ಬೇರೂರಿತ್ತು.

ಮೂಳೆಗಳು ಬಾಡಿ ಹೋಗುವಷ್ಟು ಗೆದ್ದಲು ತಿಂದಿರಲಿಲ್ಲ. ಅಂತೆಯೆ ಬದುಕೀತು ಎಂದು ಮುದಿ ಹೆಂಗಸರು ಉದ್ಗರಿಸಿದರೆ ಬಾಲಿಕೆ, ಎನ್' ಗೂಲ ಬಲವಾಗಿದ್ದಳು, ಬಾಳಬೇಕೆಂಬ ದೃಢ ಸಂಕಲ್ಪವಿತ್ತು. ಅಂತೆಯೆ ಬದುಕಿದಳು ಎಂದು ಗ್ವೆಲ್ನಿಟ್ ಪುನರುದ್ಗರಿಸಿದ. ಎನ್'ಗೂಲ ಪುಟ್ಟ ಹುಡುಗಿಯಾಗಿದ್ದಾಗ ಹಕ್ಕಿಯಂತೆ ಲವಲವಿಕೆಯಿಂದ ಕೂಡಿದ್ದಳು, ಸೊಗಸಾಗಿದ್ದಳು. ಗ್ವೆಲ್ನಿಟ್ ಆಕೆಯ ಬಗ್ಗೆ ತುಂಬ ಅಭಿಮಾನಪಟ್ಟಿದ್ದ. ಆಕೆ 'ಮಾಮಾ' - ಅಪ್ಪಾ - ಎಂದು ಕರೆದಾಗಲಂತೂ ಆತನ ಹೆಮ್ಮೆ ಉಕ್ಕಿತ್ತು.

ಎನ್'ಗೂಲ ಆ ದೇಶಿಯರ ಪಾಳ್ಯದಲ್ಲಿ ಹೇಗೆ ಆಡುತ್ತಿದ್ದಳು! ಬೇರೆ ಹುಡುಗರು ಕೆಲವೊಂದು ಸಲ ಆಕೆಯನ್ನು 'ಏ ಹಳದಿಯೆ' ಎಂದು ಕೂಗುತ್ತಿದ್ದುದು, ಸಿಟ್ಟೆಗೆದ್ದ ಆಕೆ ಅವರ ಮೇಲೆ ಹೇಗೆ ಹಾರಿ ಬೀಳುತ್ತಿದ್ದಳು. ಮೈಕೈ ಪರಚಿಕೊಳ್ಳುತ್ತಿದ್ದಳು. ಕೊನೆಗೆ ತಾಯಂದಿರು ಬಂದು ಬಿಡಿಸಿಕೊಳ್ಳುವುದು ಇದೆಲ್ಲವನ್ನು ಆತ ವರ್ಣಿಸುತ್ತಿದ್ದಾಗ ಮೇರಿಯ ಮೈಮೇಲೆ ಮುಳ್ಳುಗಳೇಳುತ್ತಿದ್ದವು. ಭಾವನೆಗಳು ಪುಟಿದೇಳುತ್ತಿದ್ದವು.

ಒಮ್ಮೊಮ್ಮೆ ಎನ್'ಗೂಲ ಚೆರ್ರಿ ಹಣ್ಣು ಕಾಯಿಗಳನ್ನು ಸುಟ್ಟು ಕರಿ ಮಣ್ಣನ್ನು ಎಣ್ಣೆಯೊಂದಿಗೆ ಬೆರಸಿ ಬಳಿದುಕೊಳ್ಳುತ್ತಿದ್ದಳು. ಆದರೆ ಏನೂ ಪ್ರಯೋಜನವಾಗುತ್ತಿದ್ದಿಲ್ಲ. ತಮ್ಮಂತೆ ತೋರ್ಪಡಿಸಿಕೊಳ್ಳಲು ಮಾಡುವ ಈ ಪ್ರಯತ್ನಗಳನ್ನು ಕಂಡು ಬೇರೆ ಹುಡುಗರು ಇನ್ನಷ್ಟು ಅಪಹಾಸ್ಯದಿಂದ ಚುಡಾಯಿಸುತ್ತಿದ್ದರು.

ಸಣ್ಣ ಹುಡುಗಿ ಬೆತ್ತಲೆಯಾಗಿ ಎಣ್ಣೆ-ಕಪ್ಪು ಮಣ್ಣುಗಳ ಮಿಶ್ರಣವನ್ನು ಮೈಗೆ ಲೇಪಿಸಿಕೊಳ್ಳುವುದು, ಕರೀ ಚರ್ಮದ ಬೇರೆ ಬಾಲಿಕೆಯರೆಲ್ಲ ಆಕೆಯ ಸುತ್ತ ಕುಣಿಯುವುದು, ಹಲ್ಲುಕಿರಿಯುವುದು, ಆನಂತರ ಅವಳನ್ನು ಹುಚ್ಚಳಂತೆ ಮಾಡುವುದು, ಇಷ್ಟರಲ್ಲೇ ಮರದ ತೋಪಿನೊಳಗಿನಿಂದ ಆ ದೊಡ್ಡ ಮನುಷ್ಯ ಬಂದು ಎಲ್ಲರನ್ನೂ ಸಿಟ್ಟಿನಿಂದ ಗದರಿಸುವುದು ಆ ಬಳಿಕ ಹುಡುಗಿಯನ್ನೆತ್ತಿಕೊಂಡು ಹೋಗಿ ತೊಳೆಯುವುದು.... ಇದೆಲ್ಲವೂ ಮೇರಿಯ ಕಣ್ಮುಂದೆ ಕಟ್ಟಿದಂತಾಗುತ್ತಿತ್ತು. ಆತ ಆಕೆಗೆ ಹೇಳಿದುದೇನು? ಚರ್ಮದ ಬಣ್ಣವೂ ಪರಿಗಣಿಸಲ್ಪಡುವುದಲ್ಲವೇ?.... ಬುಡಕಟ್ಟಿನ ಸದಸ್ಯರಾಗಿರಲು ಧೈರ್ಯಬೇಕಲ್ಲವೇ?.... ಯಾವುದೋ ಒಂದು ಕೆಟ್ಟ ದೆವ್ವ ಆಕೆಯ ತಾಯಿಯನ್ನು ಅಂಜಿಸಿಕೊಂಡು ಮಗು ಹುಟ್ಟುವ ಮೊದಲೇ ಅದರ ಚರ್ಮದ ಬಣ್ಣವನ್ನು ಅಪಹರಿಸಿತು ಎಂಬುದನ್ನು ಪ್ರತಿಯೊಬ್ಬರೂ ಮರೆತುಬಿಡಬೇಕು....

ಮಗಳನ್ನು ಸಂತೈಸುವುದಕ್ಕಾಗಿ ಆತನೊಂದು ಹಾಡು ಹೇಳುವುದಿತ್ತು. ಆ ಹಾಡು ದೂರದ ನಾಡಿನಲ್ಲಿ ಬೆಳೆಯುತ್ತಿದ್ದ ಕಂದು ಮತ್ತು ಪೀತ ವರ್ಣದ ಹೂವಿಗೆ ಸಂಬಂಧಿಸಿದುದು. ಬ್ಯೆಂಡಾ ನೆಲ್ಲಿ ಕೂಡ ಈ ಹಾಡು ಹೇಳುತ್ತಿದ್ದಳು. ಇದರೊಂದಿಗೆ ಇನ್ನು ಒಂದು ಕತೆ ಪ್ರಚಲಿತವಿತ್ತು.

ಆಟವಾಡುತ್ತಿದ್ದ ಎರಡು ಮಕ್ಕಳು ಹೋಗಿ ಗಿಡಗಂಟೆಗಳಲ್ಲಿ ದಾರಿ ತಪ್ಪಿಸಿಕೊಂಡವು. ತಾಯಂದಿರು ಹುಡುಕಿದರು. ಕೊನೆಗೆ ಹೂವಿನವಾಸನೆಯೊಂದು ಬರತೊಡಗಿತು. ಅದರ ಗುಂಟ ಹೋದಾಗ ಮಕ್ಕಳೆರಡೂ ಕೈಯಲ್ಲಿ ಎನ್'ಗೂಲ ಕುಸುಮಗಳನ್ನು ಹಿಡಿದುಕೊಂಡು ಬರುತ್ತಿದ್ದವು.

'ಅಶ್ವಾರೋಹಿಯೊಬ್ಬ ಪಾಳ್ಯದೊಳಕ್ಕೆ ನುಗ್ಗಿ ಎನ್' ಗೂಲಳನ್ನು ಎತ್ತಿಕೊಂಡು ಹೋದಾಗ ಆಕೆಗಿನ್ನೂ ಆರೇ ವರ್ಷಗಳಾಗಿದ್ದವು" ವೃದ್ಧನ ಧ್ವನಿ ಮತ್ತೆ ಮೇರಿಯ ಲಕ್ಷ್ಯವನ್ನು ಕತೆಯ ಕಡೆಗೆ ಸೆಳೆಯಿತು.

ಇದು ಘಟಿಸಿದಾಗ ಗ್ವೆಲ್ನಿಟ್ ಗುಡ್ಡದ ಹಿಂದುಗಡೆ ಜಾನುವಾರುಗಳ ಮೇಲ್ವಿಚಾರಣೆಯಲ್ಲಿ ತೊಡಗಿದ್ದ. ಬುಡಕಟ್ಟಿನವರು ಎನ್'ಗೂಲಳನ್ನೂ ತಮ್ಮವಳೆಂದು ಅಂಗೀಕರಿಸಿದ್ದರು. ಅವಳ ಮೈ ಸೊಬಗು ಮತ್ತು ನಡಿಗೆಯ ಲಾಲಿತ್ಯಗಳು ಹಿರಿಯ ಸಂತೋಷಕ್ಕೆ ಪಾತ್ರವಾಗಿದ್ದವು. ಬುಡಕಟ್ಟಿನ ಸಂಸ್ಥೆಯೊಂದರಲ್ಲಿ ಆಕೆಗೆ ವಿಶೇಷ ಸ್ಥಳವನ್ನು ನೀಡಲಾಗಿತ್ತು. ಸಂಜೆ ಗ್ವೆಲ್ನಿಟ್‌ನನ್ನು ಮಿಟ್ಟೂನ್ ಕಂಡಾಗ ಭೋರೆಂದು ಅತ್ತು ಕರೆದಳು. ಅಶ್ವಾರೋಹಿ ಹುಡುಗಿಯನ್ನೆತ್ತಿಕೊಂಡು ಹೋಗಲು ತಾನು ಅವಕಾಶ ನೀಡಿದೆನೆಂದು ಗ್ವೆಲ್ನಿಟ್ ಬಯ್ಯಬಹುದೆಂದು ಬೆದರಿ ಹುಚ್ಚೆದ್ದು ಅತ್ತಳು. ಆದರೆ ಅಶ್ವಾರೋಹಿ ಎನ್' ಗೂಲಳನ್ನು ಎತ್ತಿಕೊಂಡ ಹೋದ ಬಗೆಯನ್ನು ಕೈಗಳನ್ನು ಕಟ್ಟಿ, ಬಾಯಿಗೆ ಕರವಸ್ತ್ರ ಬಿಗಿದು, ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಪಾರಾದ ರೀತಿಯನ್ನು ಕಂಡು ಅಲ್ಲಿಯ ಪ್ರತಿ ಸ್ತ್ರೀ ಪುರುಷರಲ್ಲೂ ಕೋಪ ತಿರಸ್ಕಾರಗಳನ್ನು ಹುಟ್ಟಿಸಿತ್ತು.

ಗ್ವೆಲ್ನಿಟ್ ತನ್ನ ಧನಿಯ ಮನೆಯಲ್ಲಿದ್ದ ಕುದುರೆಯೊಂದನ್ನು ಬಿಚ್ಚಿ ಏರಿಕೊಂಡು ಫೋರ್ಟ್‌ನಲ್ಲಿದ್ದ ಪೋಲೀಸ್ ಸ್ಟೇಷನ್ನಿಗೆ ತೆರಳಿ ದೂರು ಕೊಟ್ಟ.

ನನ್ನ ಮಗಳನ್ನು ಅವರೇಕೆ ಎತ್ತಿಕೊಂಡು ಹೋದರು ಎಂದು ವಿಚಾರಿಸಲು ಬಂದಿದ್ದೇನೆಂದು ಪೋಲೀಸರು ಮುಂದೆ ಆತ ನುಡಿದಾಗ ಅವರೆಲ್ಲ ನಕ್ಕುಬಿಟ್ಟರು.

'ಆಕೆ ನಿನ್ನ ಮಗಳಲ್ಲ!' ಎಂದು ಅಲ್ಲಿಯೇ ನಿಂತಿದ್ದ ಎತ್ತರವಾಗಿದ್ದ ಅಶ್ವಾರೋಹಿ ನುಡಿದು "ನೀನು ಇಸ್ಪೀಟೆಲೆಯ ಎಕ್ಕದಷ್ಟು ಕರ್‍ರಗಿದ್ದೀಯಾ. ಮತ್ತೆ ಈ ಹುಡುಗೆ ಅರೆ ಜಾತಿಯವಳು. ದೇಶಿಯರ ಪಾಳ್ಯಗಳಲ್ಲಿರುವ ಇಂಥ ಅರೆಜಾತಿಯ ಮಕ್ಕಳನ್ನು ಬೇರ್ಪಡಿಸಿ, ಬಿಳಿಯರ ನಡೆನುಡಿಗಳನ್ನು ಕಲಿಯಲು ಸರ್ಕಾರದ ಹಾಗೂ ಮಿಷಿನರಿ ಶಾಲೆಗಳಿಗೆ ಕಳುಹಿಸಿಕೊಡಬೇಕೆಂದು ನಮಗೆ ಆಜ್ಞೆಗಳಿವೆ" ಎಂದ.

ಗ್ವೆಲ್ನಿಟ್ ದುಃಖ, ಸಿಟ್ಟುಗಳಿಂದ ಅವನನ್ನು ಪ್ರಶ್ನಿಸಿದ:

""ಆಕೆಯನ್ನು ನೀನು ಎಲ್ಲಿಗೆ ಕಳುಹಿಸಿಕೊಟ್ಟೆ?"

ಪೋಲೀಸ್ ಅದನ್ನು ಹೇಳಲಿಲ್ಲ.

"ವಿಚಾರ ಏನೆಂದರೆ ಮಗುವನ್ನು ದೇಶಿಯರಿಂದ ದೂರಿಡುವುದು. ಅಂದರೆ ದೇಶಿಯರಿಗೂ ತನಗೂ ಏನೇನೂ ಸಂಬಂಧವಿಲ್ಲ. ಅವರೊಂದಿಗೆ ಮಾಡಬೇಕಾದುದೇನೂ ಇಲ್ಲ. ಅವರೇ ಬೇರೆ, ತಾನೇ ಬೇರೆ ಎಂಬ ಭಾವನೆ ಬೆಳೆಯಬೇಕು ಮತ್ತು ಅದು ಬಲವಾಗಬೇಕು. ಹಿಂದಿನ ಸಂಬಂಧಗಳನ್ನೆಲ್ಲ ಎಂದೆಂದೂ ಮರೆತು ಬಿಡಬೇಕು ಎಂಬುದೇ ಇದರ ಉದ್ದೇಶ' ಎಂದು ಅಶ್ವಾರೋಹಿ ಹೇಳಿದ.

ತನ್ನ ಮೇಲೆ ಮತ್ತು ಎನ್' ಗೂಲಳ ಮೇಲೆ ಬಂದೆರಗಿದ ಈ ಅನಾಹುತದಿಂದ ಹತಾಶಗೊಂಡ, ಖಿನ್ನ ಮನಸ್ಕ ಗ್ವೆಲ್ನಿಟ್ ಬೇಸರದಿಂದಲೇ ಹೊರಬಂದ, ಆತನಿಗೆ ದಾರಿಯಲ್ಲಿ ಭೇಟಿಯಾದ, ಆ ನಗರಿಯಲ್ಲಿದ್ದ ಬೇರೆ ದೇಶಿಯರಿಂದ ಅವಳಂಥವೇ ಆಗಿದ್ದ ಇನ್ನೂ ಅನೇಕ ಸಣ್ಣ ಸಣ್ಣ ಮಕ್ಕಳನ್ನು ಎನ್'ಗೂಲಳನ್ನು ತಂದಿದ್ದ ಮರುದಿನವೇ ದಕ್ಷಿಣಾಭಿಮುಖವಾದ ನೌಕೆಯೊಂದರಲ್ಲಿ ಕುಳ್ಳಿರಿಸಿ ಕಳುಹಿಸಿಕೊಡಲಾಯಿತೆಂದು ತಿಳಿಯಿತು. ದಕ್ಷಿಣಾಭಿಮುಖವಾಗಿ ಹೊರಟಿದ್ದ ಮುಂದಿನ ಇನ್ನೊಂದು ನೌಕೆಯಲ್ಲೇ ಗ್ವೆಲ್ನಿಟ್ ಪ್ರಯಾಣ ಬೆಳಸಿದ.

ನೌಕಾ ಮನುಷ್ಯರೊಂದಿಗೆ ಗ್ವೆಲ್ನಿಟ್ ಮಾತನಾಡುತ್ತಾ ಎನ್' ಗೂಲಳ ಬಗ್ಗೆ ವಿಚಾರಿಸಿದ. ಎಲ್ಲಿಗೆ ಕಳುಹಿಸಿದ್ದಾರೆಂಬುದನ್ನು ಹೇಳುವುದು ಕಷ್ಟವೆಂದು ಆತ ತಿಳಿಸಿದ. ಇಂಥ ಅರೆಜಾತಿಯ ಮಕ್ಕಳನ್ನು, ಸಾಕಿ ಬೆಳೆಸಲು ಪರ್ಥ್ ಪಟ್ಟಣದ ಹೊರ ವಲಯಗಳಲ್ಲಿ ರೋಮನ್ ಕೆಥೋಲಿಕ್, ಮುಕ್ತಿಪಡೆ, ಮೆಥಾಡಿಸ್ಟ್ ಹಾಗೂ ಇನ್ನಿತರ 'ಹೋಮ್'ಗಳೂ ಶಾಲೆಗಳೂ ಇವೆಯೆಂದೂ ಸರ್ಕಾರ ಇದಕ್ಕಾಗಿ ಗ್ರಾಂಟು ಕೊಡುವುದೆಂದೂ ತಿಳಿಯಬಂತು.

ಗ್ವೆಲ್ನಿಟ್ ಆ ಪ್ರದೇಶಗಳಲ್ಲೆಲ್ಲ ಸುತ್ತಿ ಎನ್'ಗೂಲಳಿಗಾಗಿ ವಿಚಾರಿಸಿದ. ಆದರೆ ಯಾರೂ ಎನ್' ಗೂಲ ಬಗ್ಗೆ ಏನನ್ನೂ ಹೇಳಲಿಲ್ಲ ಮತ್ತು ಅವಳೂ ಎಲ್ಲೆಲ್ಲೂ ಕಾಣಲಿಲ್ಲ.

ಮೇರಿಯ ಮನಸ್ಸಿನಲ್ಲಿದ್ದ ಗೊಂದ - ಘರ್ಷಣೆಗಳು ಅವಳ ಮೆದುಳನ್ನು ಕಿವಚುವಂತೆ ಮಾಡತೊಡಗಿದವು. ತಾನಾರೆಂಬುದನ್ನು ನೋಡಿ ತಿಳಿದುಕೊಳ್ಳಲು ಮುದುಕನ ಮನಸ್ಸು ಹಂಚಿಕೆ ಹಾಕಿದೆಯೇ? ಅಥವಾ ನಿಜವಾಗಿಯೂ ಇತರ ದೇಶೀಯ ಮಕ್ಕಳು ಅಣಕಿಸಿದ ಆ 'ಪುಟ್ಟ ಹಳದಿಯ ಪಿಳ್ಳೆ' ತಾನೋ? ಇದು ಒಂದು ವೇಳೆ ನಿಜವೇ ಆಗಿದ್ದರೂ ಕೂಡ ಇದನ್ನು ನಾನು ಒಪ್ಪಿಕೊಳ್ಳಲೇ ಬಾರದು ಎಂದುಕೊಂಡಳು. ಮುದುಕನ ಬಗ್ಗೆ ಅವಳಿಗೆ ಕೆಡುಕೆನಿಸಿತು. ಆದರೇನು ಆಕೆ ಅರ್ಧ ಬಿಳಿಯಳಾಗಿದ್ದಳು. ಈತನಂತೂ ತನ್ನ ತಂದೆಯಲ್ಲ, ತನ್ನ ತಂದೆ ಬಿಳಿಯ ಮನುಷ್ಯನಾಗಿದ್ದ. ಸೆಟ್ಲ್‌ಮೆಂಟ್‌ನಲ್ಲಿದ್ದ ಜನ ಆಕೆ, ಬಿಳಿಯರೆಡೆ ಸರಿದಾಕೆಯಲ್ಲ - ಬಿಳಿಯರ ಕಡೆಗಾಗಲಿ, ಕರಿಯರ ಕಡೆಗಾಗಲಿ.

ಆದಾಗ್ಯೂ ಆಕೆ - ಮನೆಯೊಂದರಲ್ಲಿ ಶ್ವೇತೀಯರಂತೆಯೇ ಜೀವಿಸುವ ಹಕ್ಕನ್ನು ಪಡೆಯಲು ಅಷ್ಟೇ ಮರ್ಯಾದಸ್ಥೆಯೆಂದು ಮನ್ನಿಸಲ್ಪಡಲು ಬದು ದೀರ್ಘಕಾಲ ಹೋರಾಡಿದ್ದಳು ಮತ್ತು ಈಗಲೂ ಆ ಹೋರಾಟವನ್ನು ಬಿಟ್ಟುಕೊಡಲು ಸಿದ್ಧಳಿರಲಿಲ್ಲ. ಇದು ಅವಳಿಗೆ ಛಲ ಮತ್ತು ಸ್ವಾವಲಂಬನದ ಪಾಠ ಹೇಳಿಕೊಟ್ಟಿತ್ತು. ಈವರೆಗೂ ಇದಕ್ಕಾವ ಬಾಧಕವೂ ತಟ್ಟಿರಲಿಲ್ಲ. ಅವಳು ತನ್ನದೇ ಆದ ಒಂದು ತುಂಡು ನೆಲದಲ್ಲಿ ಸ್ವಂತ ಮನೆ ಕಟ್ಟಿಕೊಳ್ಳಲು ಪರವಾನಗಿ ಸಿಕ್ಕಿರಲಿಲ್ಲ. ಪರವಾನಗಿ ಎಂದೂ ಸಿಕ್ಕುವುದಿಲ್ಲವೆಂಬುದೂ ಆಕೆಗೆ ಗೊತ್ತಿತ್ತು. - ಅಕಸ್ಮಾತ್ ತಾನು ಈ ಮುದುಕನಿಗೆ ತನ್ನನ್ನು ಮಗಳೆಂದು ಕರೆಯಲು ಅವಕಾಶವಿತ್ತರೆ ಮತ್ತು ಅವನನ್ನು ತನ್ನೊಟ್ಟಿಗೆ ವಾಸಕ್ಕೆ ಇಟ್ಟುಕೊಂಡರೆ...!

ಗ್ವೆಲ್ನಿಟ್ ಧ್ವನಿ ಮತ್ತು ಮೇರಿಯ ಲಕ್ಷ್ಯವನ್ನು ಸೆಳೆದು ಸರೆ ಹಿಡಿಯಿತು.

ಆತ ಮೂಡಣ ದಿಶೆಗಳಲ್ಲಿ, ಜನರು ಎಲ್ಲೆಲ್ಲಿ ಹಳ್ಳಿ ಪಟ್ಟಣಗಳನ್ನು ನಿರ್ಮಿಸಿದ್ದಾರೋ ಬಡಗಣ ಅಲ್ಲೆಲ್ಲ ಎನ್' ಗೂಲಳನ್ನು ಅರಸುತ್ತ ಅಂಡಲೆದಿದ್ದ. ಚಿನ್ನದ ಗಣಿ ಪ್ರದೇಶ, ಬಂದರುಗಳು ದೇಶೀಯರ ಪ್ರತಿಬಂಧಿತ ಪಾಳಯಗಳು, ಕಡಲ ತೀರದ ಹೀಗೆ ಆತ ಎನ್'ಗೂಲಳಿಗಾಗಿ ತಿರುಗದ ಪ್ರದೇಶವೇ ಇರಲಿಲ್ಲ.

ಇಪ್ಪತ್ತೈದು ವರುಷ ಕಾಲ ಆತ ದೇಶದ ಮೇಲೆ ಕೆಳಗೆ ಅವಳನ್ನು ಹುಡುಕುತ್ತ ಅವಳ ಹೆಸರನ್ನು ಕೂಗುತ್ತಾ ಸುತ್ತಿದ್ದ. ಈಗ ಆತ ಮುದುಕನಾಗಿದ್ದ. ಇನ್ನು ಮುಂದೆ ನಡೆಯಲು ಆತನಿಗೆ ತ್ರಾಣವಿಲ್ಲ. ಒಂದಾನೊಂದು ಕಾಲಕ್ಕೆ ನೈರುತ್ಯದ ಬುಡಕಟ್ಟುಗಳವರು ಜಮಾಯಿ ಕಾರೊಬರಿ (ಮೂಲ ನಿವಾಸಿಗಳ ಹಾಡು-ಕುಣಿತಗಳ ಉತ್ಸವ) ನಡೆಯುವ ಸ್ಥಳ ಈಗಿನ ಈ ಸೆಟ್ಲ್‌ಮೆಂಟ್ ಆಗಿತ್ತು. ಪ್ರಾಯಶಃ ತಾನು ತಲುಪಬಹುದಾದ ಅಂತಿಮ ಸ್ಥಾನ ಇದೇ ಆದರೂ ಆಗಬಹುದೇನೋ ಎಂಬ ಅಂಜಿಕೆ ಆತನಲ್ಲಿ ಒಮ್ಮೆ ಸುಳಿದು ಹೋಯಿತು.

"ಇಲ್ಲಿ ಕೂಡ 'ಎನ್' ಗೂಲಳನ್ನು ಯಾರೂ ನೋಡಿರದಿದ್ದರೆ ಅಥವಾ ಆಕೆಯ ಸಮಾಚಾರ ತಿಳಿಯದಿದ್ದರೆ' ಮುದುಕ ಅಪಾರ ಬಳಲಿಕೆ ಮತ್ತು ಘೋರ ನಿರಾಶೆಗಳ ಆಳದಿಂದ ಮಾತನಾಡಿದ : "ನಾನು ನನ್ನ ಜನರ ನಾಡಾದ ಬೌಜೆರಾಕ್ಕೆ ತೆರಳಿ ನ್ನ ಪಿತೃಗಳ ಚೇತನಗಳು ಬಂದು ಕರೆದೊಯ್ಯುವವರೆಗೂ ಅಲ್ಲೇ ಇರುತ್ತೇನೆ"

ಇನ್ನೇನೂ ಹೇಳಲು ಬಾಕಿ ಉಳಿದಿಲ್ಲವೆಂದಾಗ ಮುದುಕ ಅಗ್ನಿಕುಂಡದಿಂದ ದೂರಾದ. ಆಳವಾದ ಗೆರೆಗಳು ಮೂಡಿದ್ದ, ಮಳೆ ಗಾಳಿಗಳ ಹೊಡೆತದಿಂದ ಸುಕ್ಕುಗಟ್ಟಿ ಒರಟಾದ ಮುಖದ ಮೇಲೆ ಉರಿಯ ಝಳ ಸ್ಪರ್ಶಿಸುವಂತೆ ತೋರಿತು.

ಮೇರಿಯ ದೃಷ್ಟಿಯನ್ನೆದುರಿಸುವ ಆಸೆಯಿಲ್ಲದೆಯೇ ಮುದುಕನ ಕಣ್ಣುಗಳು ಆಕೆಯತ್ತ ಹೊರಳಿದವು. ಅವಳಿಗೆ ತಾನೇನು ಈಗ ಮಾಡಿದ್ದೇನೆ, ಒಂದೆಡೆ ಬಿಳಿಯರಂತೆ ಬದುಕಬೇಕೆಂಬ ಹೆಬ್ಬಯಕೆ ಮತ್ತು ಅದೇ ಕಾಲಕ್ಕೆ ಕರಿಯಜನರ ಪದ್ಧತಿ ಪರಂಪರೆಗಳಲ್ಲಿ ಅವಳಿಗಿರುವ ನಿಷ್ಠೆ ಇವರೆಡರಲ್ಲೂ ಘರ್ಷಣೆಯನ್ನು ತಂದಿಕ್ಕಿದ್ದೇನೆಯೆ ಎಂಬುದೆಲ್ಲ ತನಗೆ ತಿಳಿದಿದಯೆಂಬುದನ್ನು ಆತ ತೋರ್ಪಡಿಸಿಕೊಳ್ಳಲಿಲ್ಲ.

ಮೇರಿಗೂ ಗೊತ್ತಿತ್ತು - ತನ್ನನ್ನು ಮತ್ತು ಆತನನ್ನು ಒಟ್ಟುಗೂಡಿಸುವ ಹಾಗೂ ಆತನ ಅನ್ವೇಷಣೆಯನ್ನು ಪೂರೈಸಬಲ್ಲಂಥ ಆ ಒಂದು ಶಬ್ದವನ್ನು ಉಚ್ಚರಿಸದೆ ತಾನೂ ಹೊರಟು ಹೋಗುತ್ತೇನೆಂಬುದು ಮುದುಕನಿಗೂ ಗೊತ್ತಾಗಿದೆಯೆಂಬುದು ಮೇರಿಗೆ ತಿಳಿದಿತ್ತು.

ಅವರಿಬ್ಬರ ಮಧ್ಯೆ ನೀರವತೆಯೊಂದು ನೆಲೆಸಿತು. ಆ ನೀರವತೆ ಭಾರವಾಗಿತ್ತು, ದುಸ್ಸಹವಾಗಿತ್ತು.

ಮೇರಿ ಅದನ್ನು ಭೇದಿಸಿದಳು.

'ನೀನು ಇನ್ನು ಮುಂದೆ ಅಲೆಯಬೇಕಾದ ಅಗತ್ಯವಿಲ್ಲ ಮಾಮಾ" ಆಕೆ ಹೇಳಿದಳು "ನಾನೇ ಎನ್' ಗೂಲ!"

(ಮುಗಿಯಿತು)

ಮಾರ್ಚ್ 8ರ ವಿಶ್ವ ಮಹಿಳಾ ದಿನದ ಹಿನ್ನೆಲೆಯ ಬಗ್ಗೆ ಹಾಗೂ 2000ದ ವಿಶ್ವ ಮಹಿಳಾ ದಿನದಂದು ವಿಶ್ವದಲ್ಲೆಡೆ ಒಂದೇ ಬಾರಿಗೆ ನಡೆಯುವ ಜಾಗತಿಕ ಮೆರವಣಿಗೆಯ ಬಗ್ಗೆ ಒಂದು ಲೇಖನ.

ವಿಶ್ವದ ಮಹಿಳೆಯರೆಲ್ಲಾ ಒಂದಾಗಿ

ಕೆ.ಎಸ್.ವಿಮಲಾ



89 ವರ್ಷಗಳ ಇತಿಹಾಸವನ್ನು ಹೊಂದಿದ ಅಂತರ ರಾಷ್ಟ್ರೀಯ ಮಹಿಳಾದಿನ- ಮಹಿಳಾ ಸ್ವಾತಂತ್ರ, ಸಮಾನತೆಗಾಗಿ ನಡೆಯುವ ಹೋರಾಟಕ್ಕೆ ಸ್ಪೂರ್ತಿ ನೀಡುವ ದಿನ. ಶ್ರಮಿಕ ವರ್ಗದ ಹೋರಾಟದ ಚರಿತ್ರೆಯ ಭಾಗವಾಗಿಯೇ ಮಾರ್ಚ್-8ರ ಹೋರಾಟವನ್ನೂ ಅರ್ಥೈಸಿದರೆ ಮಾರ್ಚ್ 8ರ ಮಹತ್ವ ಅರ್ಥವಾಗುತ್ತದೆ.

ಮಹಿಳಾ ದಿನದ ಇತಿಹಾಸ : 1820ರಷ್ಟು ಹಿಂದೆಯೇ ಪ್ರಾರಂಭವಾದ ಮಹಿಳಾ ಕಾರ್ಮಿಕರ ಹೋರಾಟದ ಮೂಲಕ ನಾವು ಇತಿಹಾಸದ ಪುಟಗಳಲ್ಲಿ ಇಳಿದರೆ ಮಾರ್ಚ್ 8ರ ಹೋರಾಟಕ್ಕೆ ಸ್ಪೂರ್ತಿ ನೀಡಿದ ಹಲವಾರು ಹೋರಾಟಗಳನ್ನು ನೋಡಬಹುದು.

ಹೋರಾಟ ಬೆಳೆದು ಬಂದ ಬಗೆ : ಕೈಗಾರಿಕಾ ಕ್ರಾಂತಿ ಮಹಿಳೆಯರನ್ನು ಸಾಮೂಹಿಕ ಉತ್ಪಾದನಾ ವಲಯಕ್ಕೆ ಸೆಳೆಯಿತು. ನಾಲ್ಕು ಗೋಡೆಗಳಿಂದಾಚೆ ವಿಶಾಲ ಪ್ರಪಂಚಕ್ಕೆ ಕಾಲಿಟ್ಟ ಮಹಿಳೆಯರ ಸ್ಥಿತಿ-ಗತಿಗಳಲ್ಲಿ ಮಹತ್ತರ ಬದಲಾವಣೆ ಕಂಡು ಬರದಿದ್ದರೂ, ಒಂದೇ ಸೂರಿನಡಿ ಅಪಾರ ಸಂಖ್ಯೆಯಲ್ಲಿ ಸೇರತೊಡಗಿದ ಮಹಿಳೆಯರಲ್ಲಿ ಶೋಷಣೆಯ ಅರಿವು ಮೂಡತೊಡಗಿತು. ಕೈಗಾರಿಕಾ ಕ್ರಾಂತಿಯಿಂದಾಗಿ ಸಾಮೂಹಿಕ ಉತ್ಪಾದನಾ ವಲಯಕ್ಕೆ ಕಾಲಿಟ್ಟರೆಂದ ಮಾತ್ರಕ್ಕೆ ಜರ್ಝರಿತಗೊಳಿಸುವ ಗೃಹಕೃತ್ಯದ ಜವಾಬ್ದಾರಿಯಿಂದ ಮಹಿಳೆಯರಿಗೆ ಬಿಡುಗಡೆ ದೊರೆಯಲಿಲ್ಲ. ಮಹಿಳೆಯರನ್ನು ಒಟ್ಟು ಸಮಾಜದ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ಗೃಹ ಕೃತ್ಯದ ಜವಾಬ್ದಾರಿಕೂಡ ಕುಟುಂಬದ ಸದಸ್ಯರೆಲ್ಲರ ಸಾಮೂಹಿಕ ಜವಾಬ್ದಾರಿ ಎಂಬ ಪ್ರಜ್ಞೆಯನ್ನು ಬೆಳೆಸಲು ಕ್ಯೂಬಾದಂತಹ ರಾಷ್ಟ್ರದಲ್ಲಿ ಮಾತ್ರ ಸಾಧ್ಯವಾಗಿದೆ. ಫಿಡೆಲ್ ಕ್ಯಾಸ್ಟ್ರೋ ಇದನ್ನು "ಕ್ರಾಂತಿಯೊಳಗಿನ ಕ್ರಾಂತಿ" ಎಂದು ಬಣ್ಣಿಸುತ್ತಾರೆ ಆದರೆ ಮಹಿಳೆಯರಿಗೆ ತಾವು ಒಳಪಟ್ಟಿರುವ ಶೋಷಣೆಯ ಸ್ವರೂಪದ ಅರಿವನ್ನು ಅವರು ಕಾಲಿಟ್ಟ ಬಾಹ್ಯ ಪ್ರಪಂಚ ತಂದುಕೊಟ್ಟಿತು. ಅದರ ವಿರುದ್ಧ ಹೋರಾಟ ನಡೆಸಲು ಪ್ರೇರಣೆಯನ್ನೂ ನೀಡಿತು.



ಮಹಿಳಾ ಹಕ್ಕುಗಳ ಮೊಟಕುಗೊಳಿಸುತ್ತಿರುವ ಜಾಗತೀಕರಣ

ಇಂತಹ ಕೆಲವು ಹೋರಾಟಗಳು : 1820ರಲ್ಲಿ ಅಮೇರಿಕಾ, ಇಂಗ್ಲೆಂಡ್ ದೇಶಗಳ ಮಹಿಳಾ ಗಿರಣಿ ಕಾರ್ಮಿಕರ ಮುಷ್ಕರ 1845ರಲ್ಲಿ ಅಮೇರಿಕಾದ ಪಶ್ಚಿಮ ಪೆನ್ಸಿಲ್ವೇನಿಯಾದ ಗಿರಣಿ ಕಾರ್ಮಿಕ ಮಹಿಳೆಯರ ಮುಷ್ಕರ. 1888-89ರಲ್ಲಿ ಬ್ರಿಟನ್ನಿನಲ್ಲಿ ಎದ್ದ ದೊಡ್ಡ ಕಾರ್ಮಿಕ ಅಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು ಪಾಲ್ಗೊಂಡಿದ್ದು, 20ನೇ ಶತಮಾನದವರೆಗೂ ಅಮೇರಿಕಾ, ಇಂಗ್ಲೆಂಡ್‌ನಂತಹ ಮುಂದುವರೆದ ದೇಶಗಳಲ್ಲಿಯೂ ಮಹಿಳೆಯರಿಗೆ ಸಿಗದ ಓಟಿನ ಹಕ್ಕುಗಳಿಗಾಗಿ ನಡೆಸಿದ ಹೋರಾಟ. (ಪ್ರಥಮ ಹಂತದಲ್ಲಿ ಸೀಮಿತ ವಲಯದ ಮಹಿಳೆಯರಿಗಾಗಿಯಷ್ಟೇ ಬೇಡಿಕೆಯಾಗಿ ಬಂದಿದ್ದರೂ) ನಂತರ - 1907ರಲ್ಲಿ ನಡೆದ ನ್ಯೂಯಾರ್ಕಿನ ಗಾರ್ಮೆಂಟ್ ಕಾರ್ಖಾನೆಯ ಮಹಿಳಾ ಕಾರ್ಮಿಕರ ಹೋರಾಟ-ದಿನಕ್ಕೆ 10 ಘಂಟೆಯ ಕೆಲಸ, ಲಿಂಗ, ಜನಾಂಗ, ಆಸ್ತಿ, ವಿದ್ಯೆ ಮುತಾದ ತಾರತಮ್ಯವಿಲ್ಲದ, ಎಲ್ಲರಿಗೂ ಮೂಲಭೂತ ಹಕ್ಕಾಗಿ ಮತದಾನದ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನಗಳು ಅವರ ಬೇಡಿಕೆಯಾಗಿತ್ತು. ನ್ಯೂಯಾರ್ಕಿನ ರಟ್ಜೇರ್ ಚೌಕದಲ್ಲಿ ನಡೆದ ಬೃಹತ್ ಪ್ರದರ್ಶನದ ಮೂಲಕ ಮಾರ್ಚ್-8 ಯಶಸ್ಸಿನ ದಿನವಾಗಿ ಬಂದು ಈ ದಿನವನ್ನು "ಅಂತರ ರಾಷ್ಟ್ರೀಯ ಮಹಿಳಾ ದಿನ'ವನ್ನಾಗಿಸಿದ ಕೀರ್ತಿ ಕಮ್ಯೂನಿಸ್ಟ್ ನಾಯಕಿ ಕ್ಲಾರಾಂಜೆಟ್‌ರಿನ್‌ರವರಿಗೆ ಸಲ್ಲುತ್ತದೆ. 1910ರಲ್ಲಿ ಕೂಪನ್ ಹೇಗನ್‌ನಲ್ಲಿ ನಡೆದ 2 ನೇ ಅಂತರ ರಾಷ್ಟ್ರೀಯ ಶ್ರಮಿಕ ಸಮ್ಮೇಳನದಲ್ಲಿ ಮಾರ್ಚ್-8ನ್ನು "ಅಂತರ ರಾಷ್ಟ್ರೀಯ ಮಹಿಳಾ ದಿನ"ವನ್ನಾಗಿ ಘೋಷಿಸಬೇಕೆಂಬ ಒತ್ತಾಯವನ್ನು ಮುಂದಿಟ್ಟರು. 1911 ರಿಂದ ಈ ದಿನ ಅಂತರರಾಷ್ಟ್ರೀಯ ಮಹಿಳಾ ದಿನವಾಗಿ ವಿಶ್ವದ ಎಲ್ಲೆಡೆ ಆಚರಿಸಲ್ಪಡುತ್ತಿದೆ. 1911ರ ಮಾರ್ಚ್ 8 ರಂದು ಜರ್ಮನಿಯ ಬೀದಿಗಳಲ್ಲಿ ಲಕ್ಷಾಂತರ ಮಹಿಳೆಯರು, ಪುರುಷರು ಸೇರಿದಂತೆ ಈ ದಿನವನ್ನು ಆಚರಿಸಿದ ದಾಖಲೆಗಳಿವೆ. ರಷ್ಯಾದ ಝಾರಿಸಂ ವಿರುದ್ಧ ನಡೆದ ರಷ್ಯಾ ಕ್ರಾಂತಿಯ ಸಂದರ್ಭದಲ್ಲಿಯೂ 'ಅಂತರ ರಾಷ್ಟ್ರೀಯ ಮಹಿಳಾದಿನ'ದಂದು ಬೀದಿಗಳಲ್ಲಿ ಯುದ್ಧ ವಿರೋಧಿ ಘೋಷಣೆಗಳನ್ನು ಕೂಗಿ ಪೊಲೀಸ್, ಸೈನಿಕರ ದಬ್ಬಾಳಿಕೆಯನ್ನು ಲೆಕ್ಕಿಸದೇ ಹೋರಾಟ ನಡೆಸಿದ ಇತಿಹಾಸವಿದೆ. ನಿಜವಾಗಿ ಮಹಿಳೆಯರ ವಿಮೋಚನೆಗೆ ದಾರಿಮಾಡಿದ ರಷ್ಯಾ ಕ್ರಾಂತಿಯಲ್ಲೂ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದು. ಮತದಾನದ ಹಕ್ಕು, ವಿವಾಹ ವಿಚ್ಛೇದನದ ಹಕ್ಕು ಮುಂತಾದ ಹಕ್ಕುಗಳನ್ನು ಅಲ್ಲಿನ ಮಹಿಳೆಯರು ಪಡೆಯಲು ಸಾಧ್ಯಮಾಡಿಕೊಟ್ಟಿದ್ದು ಕ್ರಾಂತಿಯ ಮೂಲಕ ಬಂದ ಸಮಾಜವಾದೀ ವ್ಯವಸ್ಥೆ ಅಂತೆಯೇ 1936ರ ಮಾರ್ಚ್ 8 ರಂದು ಸ್ಪ್ಯಾನಿಷ್ ಮಹಿಳೆಯರು ಜನರಲ್ ಫ್ರಾಂಕೋನ ಫ್ಯಾಸಿಸ್ಟ್ ಆಳ್ವಿಕೆಯನ್ನು ವಿರೋಧಿಸಿ ನಡೆಸಿದ ಪ್ರತಿಭಟನೆ, 1943ರ ಮಾರ್ಚ್ 8 ರಂದು ಇಟಲಿಯಲ್ಲಿ ಸಾವಿರಾರು ಮಹಿಳೆಯರು ಮುಸಲೋನಿಯ ವಿರುದ್ಧ ನಡೆಸಿದ ಪ್ರತಿಭಟನಾ ಪ್ರದರ್ಶನ, ವಿಯಟ್ನಾಂ ಮೇಲೆ ಅಮೇರಿಕಾದ ಆಕ್ರಮಣದ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ, ಚಿಲಿಯಲ್ಲಿ 89ರ ಮಾರ್ಚ್ 8ರಂದು ಮಿಲಿಟರಿ ಪಡೆಯ ದಮನಕಾರಿ ನೀತಿಯ ವಿರುದ್ಧದ ಹೋರಾಟ ಖೋಮೇನಿಯ ಮೂಲಭೂತವಾದದ ವಿರುದ್ಧ ಟೆಹ್ರಾನ್‌ನಲ್ಲಿ 81ರ ಮಾರ್ಚ್ 8 ರಂದು ಸಾವಿರಾರು ಮುಸ್ಲಿಂ ಮಹಿಳೆಯರು ಬೀದಿಗಿಳಿದ ಹೋರಾಟ ಹೀಗೆ ಹಲವು ಹತ್ತು ಹೋರಾಟಗಳ ಇತಿಹಾಸದ ಮೂಲಕ ಅಂತರ ರಾಷ್ಟ್ರೀಯ ಮಹಿಳಾ ದಿನ ಬೆಳೆದು ಬಂದಿದೆ.

ಹೀಗೆ ಒಟ್ಟು ಸಮಾಜದ ಸಮಸ್ಯೆಗಳ ಪರಿಹಾರದೊಂದಿಗೆ, ಮಹಿಳೆಯರ ಸಮಸ್ಯೆಗಳಿಗೂ ಪರಿಹಾರ ಸಿಗಲು ಸಾಧ್ಯ ಎಂಬ ದೃಢ ವಿಶ್ವಾಸದೊಂದಿಗೆ ಹೋರಾಟ ನಡೆಸುತ್ತಿರುವ ಹಲವಾರು ಮಹಿಳಾ ಸಂಘಟನೆಗಳು ಸಮೂಹಗಳ ಸೇರಿ - ವಿಶ್ವ ಮಹಿಳಾ ಚಳುವಳಿಯಾಗಿ ರೂಪುಗೊಂಡಿದೆ. ಈಗ ಇಡೀ ವಿಶ್ವವನ್ನು ಆವರಿಸಹೊರಟಿರುವ "ಜಾಗತೀಕರಣ"ದ ವಿರುದ್ಧ ಧ್ವನಿ ಎತ್ತಿದೆ. 1995ರಲ್ಲಿ ಬೀಜಿಂಗ್‌ನಲ್ಲಿ ನಡೆದ 4ನೇ ವಿಶ್ವ ಮಹಿಳಾ ಸಮ್ಮೇಳನ ಸರಿಯಾಗಿಯೇ ಗುರುತಿಸಿದಂತೆ "ಉದಾರೀಕರಣ ಶ್ರೀಮಂತ ಮತ್ತು ಬಡವರ ಮಧ್ಯೆ ಮಾತ್ರವಲ್ಲದೇ ಪುರುಷ ಮತ್ತು ಮಹಿಳೆಯರ ಮಧ್ಯೆಯ ಅಂತರವನ್ನೂ ಹೆಚ್ಚಿಸುತ್ತಿದೆ" ಇದು ವಿಶ್ವದ ಎಲ್ಲಾ ರಾಷ್ಟ್ರಗಳ ಅನುಭವ ಎಚ್ಚೆತ್ತ ದುಡಿಯುವ ಜನತೆ ಇದರ ವಿರುದ್ಧ ಹೋರಾಟ ನಡೆಸುತ್ತಿರುವಂತೆಯೇ, ದೇಶ ದೇಶಗಳ ಸರ್ಕಾರಗಳು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಅಮೇರಿಕಾ ನೀಡುತ್ತಿರುವ ಆದೇಶಗಳನ್ನು ಚಾಚೂ ತಪ್ಪದೇ ಪಾಲಿಸುತ್ತಿವೆ. ಮಹಿಳೆಯರ ಮೇಲೆ ಇದು ಬೀರುವ ತೀಕ್ಷ್ಣ ಪರಿಣಾಮದ ಅರಿವು ಮೂಡಿಸುವತ್ತ, ಮಹಿಳಾ ಚಳುವಳಿ ಕಾರ್ಯಪ್ರವೃತ್ತವಾಗಿದೆ. ಮಹಿಳೆಯರ ಸೀಮಿತ ಕಾರ್ಯಕ್ಷೇತ್ರದ ಪರಿಧಿಯಿಂದಾಚೆ ಹೋರಾಟದ ಹೆಜ್ಜೆಯಿಟ್ಟ ಚಳುವಳಿ - ಜಾಗತಿಕ ನಡೆ -2000ದ ಹೆಸರಿನಲ್ಲಿ "ಬಡತನ ಮತ್ತು ಹಿಂಸೆ"ಯ ವಿರುದ್ಧ ಸಮರ ಸಾರಿದೆ. ಜಾಗತೀಕರಣ, ಉದಾರೀಕರಣವನ್ನು ಸವಾಲಾಗಿ ಸ್ವೀಕರಿಸಿರುವ ಚಳುವಳಿ ಅದರ ವಿರುದ್ಧ ಜಾಗತಿಕ ಮಟ್ಟದ ಆಂದೋಲನವನ್ನು ಬೆಳೆಸಲಿದೆ. **ಮಹಿಳೆಯರ ವಿರುದ್ಧ ಬಡತನ ಮತ್ತು ಹಿಂಸೆ - ತೊಲಗಲಿ : ಜಾಗತಿಕ ನಡೆ - 2000** ಜಾಗತಿಕ ನಡೆ 2000ದ ಮೂಲ ಉದ್ದೇಶ ಬಡತನ ಮತ್ತು ಹಿಂಸೆಗಳನ್ನು ತೊಲಗಿಸಿ ಮಹಿಳೆಯರಿಗೆ ಒಂದು ಉತ್ತಮ ಬದುಕನ್ನು ಕಲ್ಪಿಸುವುದಾಗಿದೆ.

3 ಹಂತಗಳ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು - ಪ್ರಾಥಮಿಕ ಹಂತದಲ್ಲಿ ಒಟ್ಟು ಮಹಿಳಾ ಸಮುದಾಯದ ಬೆಂಬಲ ಗಳಿಸುವ ನಿಟ್ಟಿನಲ್ಲಿ "ಬೆಂಬಲಕಾರ್ಡ್"ಗೆ ಸಹಿಸಂಗ್ರಹ.

ಮುಂದುವರೆದ ಹಂತವಾಗಿ ಮಹಿಳಾ ಸಮುದಾಯದ ಆದ್ಯತೆ - ಅವಶ್ಯಕತೆಗಳ ರಾಷ್ಟ್ರೀಯ ಬೇಡಿಕೆಗಳ ಪಟ್ಟಿಗಳ ಜೊತೆ ಸಾಮೂಹಿಕ ಕಾರ್ಯಚರಣೆ ನಡೆಸುವುದು. ಮಾರ್ಚ್ -8-2000 ಪ್ರಾರಂಭವಾಗುವ ಈ ಕಾರ್ಯಾಚರಣೆಯನ್ನು ವ್ಯಾಪಕ ಪ್ರಚಾರ, ಜನಶಿಕ್ಷಣದ ಮೂಲಕ ಆಂದೋಲನವಾಗಿ ಬೆಳೆಸಿ ಅಕ್ಟೋಬರ್ 17, 2000 ದ "ವಿಶ್ವ ಬಡತನ ವಿರೋಧಿ" ದಿನದಂದು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ವಿರುದ್ಧ ವಿಶ್ವಮಟ್ಟದ ಪ್ರತಿಭಟನಾ ರ್‍ಯಾಲಿಯನ್ನು ಸಂಘಟಿಸುವುದು. ಆ ಮೂಲಕ - ಮಹಿಳೆಯರು ಈಗ ಬದುಕುತ್ತಿರುವ ರೀತಿ ಮತ್ತು ಅವರು ಬಯಸುವ ಬದುಕಿನ ಮಾದರಿಯನ್ನು ಇಡೀ ವಿಶ್ವಕ್ಕೆ ತೋರಿಸುವ ಕ್ರಿಯೆ ಪ್ರಾರಂಭವಾಗುತ್ತದೆ. ಭೂಮಿಗೆ ಸ್ವರ್ಗವಿಳಿಸುವ ಕನಸುಗಳನ್ನು ವಿಶ್ವದಾದ್ಯಂತ ಬಿತ್ತಿದ ಉದಾರೀಕರಣದ ಪ್ರಕ್ರಿಯೆ, ಮತ್ತು ಭಾರತದ **ಸಂದರ್ಭದಲ್ಲಿ ಅಸಹನೆಯ ಸಂಸ್ಕೃತಿಯ ವಕ್ತಾರರಾದ ಸಂಘ ಪರಿವಾರದಿಂದ ಹೆಚ್ಚುತ್ತಿರುವ ಹಿಂಸೆ, ದೌರ್ಜನ್ಯಗಳು** ಜನರ ಬದುಕನ್ನು ಪುಡಿ ಮಾಡಿದ ಹಿನ್ನೆಲೆಯಲ್ಲಿ ಮಹಿಳಾ ಸಂಘಟನೆಗಳ ಈ ಹೋರಾಟ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಹಲವಾರು ನೆಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೂರಾರು ಮಹಿಳಾ ಸಮೂಹಗಳು ಒಟ್ಟಿಗೇ ಬಂದು ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ಧ್ವನಿಎತ್ತುವ ಮೂಲಕ - ಮಾರ್ಚ್-8ರ ಐತಿಹಾಸಿಕ ಪರಂಪರೆಯನ್ನು ಎತ್ತಿಹಿಡಿಯುತ್ತಿದ್ದಾರೆ.

ಬಹುರಾಷ್ಟ್ರೀಯ, ಮತ್ತು ದೇಶೀಯ ದೊಡ್ಡ ಬಂಡವಾಳಿಗರಿಗಾಗಿ ಏನನ್ನೂ ಮಾಡಲು ಸಿದ್ಧವಾಗಿದ್ದು ನಿಜ ವಾಸ್ತವದಲ್ಲಿ ಮಹಿಳಾ ವಿರೋಧಿಗಳೇ ಆಗಿದ್ದರೂ, ಬಾಹ್ಯೋಪಚಾರಕ್ಕಾಗಿ, ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಮಹಿಳಾ ಮೇಳಗಳನ್ನಾಗಿ ಪರಿವರ್ತಿಸುತ್ತಿರುವ ರಾಜ್ಯ ಸರ್ಕಾರಗಳಾಗಲಿ, 'ಸತಿ' ಪದ್ಧತಿ ಭಾರತ ಸಂಸ್ಕೃತಿಯ ಅವಿಭಾಜ್ಯ ಭಾಗವೆಂದು ಹೇಳಿಕೆಯೊಂದಿಗೆ ಮಹಿಳಾದಿನ'ದ ಪ್ರಶಸ್ತಿಗೆ ಅರ್ಹರಾದ ವ್ಯಕ್ತಿಗಳ ಪಟ್ಟಿ ಬಿಡುಗಡೆ ಮಾಡುವ ಕೇಂದ್ರ ಸರ್ಕಾರಕ್ಕಾಗಲಿ ಅಂತರ ರಾಷ್ಟ್ರೀಯ 'ಮಹಿಳಾದಿನ'ದ ಪ್ರಾಮುಖ್ಯತೆ ತಿಳಿದಿರಲು ಸಾಧ್ಯವೇ ಇಲ್ಲ. ಅಂತಹ ಸರ್ಕಾರಗಳ ಬಗ್ಗೆ ಮಹಿಳೆಯರಿಗೆ ಭ್ರಮೆಗಳೂ ಉಳಿಯದಂತೆ ಮಾಡುವುದೇ! Global March 2000ದ ಮೂಲ ಮತ್ತು ಅಂತಿಮ ಉದ್ದೇಶ.

ಗಜೇಂದ್ರಗಡ: ಪೋಲೀಸ್ ದೌರ್ಜನ್ಯ.....

ಪುಟ 9 ರಿಂದ

ಅರೆಕಾಲಿಕ ಉಪನ್ಯಾಸಕರಾದ ಇಬ್ಬರನ್ನು ತಕ್ಷಣವೇ ಸಭೆ ಸೇರಿ ಹೊರ ಹಾಕಿದೆ. ಅಲ್ಲದೆ ಎಸ್‌ಎಫ್‌ಐನ 16 ಜನ ವಿದ್ಯಾರ್ಥಿ ಮುಖಂಡರನ್ನು ಪರೀಕ್ಷೆಯಿಂದ ಡಿಬಾರ್ ಮಾಡುವ ಪ್ರಜಾಪ್ರಭುತ್ವ ವಿರೋಧಿ ನಿರ್ಧಾರ ಕೈಗೊಂಡಿದೆ. ಅಲ್ಲದೆ ಎಸ್‌ಎಫ್‌ಐ-ಡಿವೈಎಫ್‌ಐ ನವರು ನಡೆಸಿದ ಹೋರಾಟಕ್ಕೂ ನಮ್ಮ ಕಾಲೇಜಿಗೂ ಯಾವುದೇ ಸಂಬಂಧವಿಲ್ಲವೆಂಬ ಪತ್ರಿಕಾ ಹೇಳಿಕೆ ನೀಡಿ, ತನ್ನ ಕೊಳಕು ರಾಜಕೀಯ ಬುದ್ಧಿಯನ್ನು ಪ್ರದರ್ಶಿಸಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಗಜೇಂದ್ರಗಡದಲ್ಲಿರುವ [illegible] ನಡೆಸುತ್ತಿರುವುದು ಈ ಘಟನೆಯ ನಂತರದ ಬೆಳವಣಿಗೆಗಳನ್ನು ಗಮನಿಸಿದಾಗ ಕಂಡು ಬರುತ್ತಿದೆ. ಅಲ್ಲದೆ ಎಲ್ಲಾ ಎಸ್‌ಎಫ್‌ಐ-ಡಿವೈಎಫ್‌ಐ ಮುಖಂಡರನ್ನು ಬಂಧಿಸುವಂತೆ ಒತ್ತಾಯವನ್ನೂ ಪೋಲೀಸ್ ಇಲಾಖೆಗೆ ತರುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಅಲ್ಲದೆ ಇದೇ ಘಟನೆಯ ಕಾರಣವನ್ನು ತೋರಿಸಿ, ವಿದ್ಯಾರ್ಥಿ-ಯುವಜನ ಮುಖಂಡರನ್ನು ಕೊಲೆ ಯತ್ನದ ಮೊಕದ್ದಮೆ(307) ಯಲ್ಲಿ ಬಂಧಿಸಲು ನಡೆಸಿರುವ ಪ್ರಯತ್ನಕ್ಕೆ ಇದೇ ಶಕ್ತಿಗಳೇ ಕಾರಣರಾಗಿದ್ದಾರೆ ಎನ್ನುವುದು ಸ್ಪಷ್ಟ.

ಆದ್ದರಿಂದಲೇ ಗಜೇಂದ್ರಗಡದಲ್ಲಿ ನಡೆದಿರುವ ಈ [illegible] ಕಾರ್ಯಕರ್ತರ ಮನೆಗಳಿಗೆ ನುಗ್ಗಿ, ಬೆದರಿಸುವುದು, ಸಿಕ್ಕ-ಸಿಕ್ಕವರನ್ನು ಬಂಧಿಸುವುದು, ಅವರ ತಂದೆ-ತಾಯಿಗಳನ್ನು ಪೋಷಕರನ್ನು ಬಂಧಿಸಿ ಬೆದರಿಸುತ್ತಿರುವುದು ಇನ್ನೂ ನಡೆಯುತ್ತಲೇ ಇರುವುದರಿಂದ, ಸಂಘಟನೆಯನ್ನು ಸಂಪೂರ್ಣವಾಗಿ ನಾಶ ಪಡಿಸಲು ಸ್ಥಾಪಿತ ಹಿತಾಸಕ್ತಿಗಳು ಹೆಣೆಯುತ್ತಿರುವ ನಾಟಕವೇ ಆಗಿದೆ.

ರಾಜ್ಯ ಸರ್ಕಾರಕ್ಕೆ ಮನವಿ

ಗಜೇಂದ್ರಗಡದಲ್ಲಿ ಈ ಘಟನೆಗೆ ಕಾರಣವಾಗಿರುವ ವಾಸ್ತವಿಕ ಸ್ಥಿತಿಯನ್ನು ಕುರಿತು ಮತ್ತು ಬಂಧಿಸಿರುವ ಎಲ್ಲ ಅಮಾಯಕ ವಿದ್ಯಾರ್ಥಿಗಳ ಬಿಡುಗಡೆ ಮಾಡಬೇಕೆಂದು ಮತ್ತು ಅವರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಲು ಆಗ್ರಹ ಪಡಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಕೃಷಿಕೂಲಿಕಾರರ ಸಂಘಟನೆಯ ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಕೆ.ಪಾಟೀಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ.

ಡಿ.ಜಿ.ಪಿ. ಕಚೇರಿ ಎದುರು ಪ್ರತಿಭಟನೆ: ಎಸ್‌ಎಫ್‌ಐ-ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಬೆಂಗಳೂರಿನ ಪೋಲೀಸ್ ಮಹಾನಿರ್ದೇಶಕರ ಕಛೇರಿ ಎದುರು ಮತಪ್ರದರ್ಶನ ನಡೆಸಿ, ಬಂಧಿತ ವಿದ್ಯಾರ್ಥಿಗಳ ಬಿಡುಗಡೆಗೆ ಆಗ್ರಹಪಡಿಸಲಾಯಿತು. ಅಲ್ಲದೆ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಜಯಪ್ರಕಾಶ್‌ರವರನ್ನು ಭೇಟಿ ಮಾಡಿ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಗಳ ವಾಪಸ್ಸು

ದೀಪಾ ಮೆಹ್ತಾ ಬಗ್ಗೆ ದುರುದ್ದೇಶಪೂರಿತ ಅಪಪ್ರಚಾರ

- ನಂದಿತಾ ದಾಸ್


ದೀಪಾ ಮೆಹ್ತಾರವರು ತಮ್ಮ ಚಿತ್ರ ಯಶಸ್ವಿ ಆಗಲೆಂದು ವಿವಾದಗಳನ್ನು ಹುಟ್ಟು ಹಾಕುತ್ತಾರೆ ಎಂಬ ಅಪಪ್ರಚಾರ ನಡೆದಿದೆ. ಎಂ.ಎಸ್. ಸತ್ಯುರವರಂತಹ ಪ್ರಗತಿಪರ ಚಿಂತಕರೂ ಅದಕೆ ದನಿಗೂಡಿಸಿರುವುದು ಆಶ್ಚರ್ಯಕರ. ಈ ಅಪಪ್ರಚಾರದ ಬಗೆ ನಂದಿತಾದಾಸ್ -

ವಿವಾದಗಳನ್ನು ಉದ್ದೇಶಪೂರ್ವಕ ಪ್ರಚಾರ ತಂತ್ರಗಳಾಗಿ ದೀಪಾ ಮೆಹ್ತಾ ಸೃಷ್ಟಿಸುತ್ತಾರೆ ಎಂಬಂತಹ ಅಭಿಪ್ರಾಯಗಳು ದುರುದ್ದೇಶ ಪೂರ್ವಕವಾದುದು. ಇಂತಹ ಹೇಳಿಕೆಗಳಿಗೆ ಪ್ರತಿಕ್ರಿಯಿಸಲೂ ಇಷ್ಟವಾಗುವುದಿಲ್ಲ.

'ವಾಟರ್' ಚಿತ್ರದ ವಿವಾದದ ಬಗೆಗಿನ ಪ್ರಶ್ನೆಯೊಂದಕ್ಕೆ ನಟಿ ನಂದಿತಾ ದಾಸ್ ತೀವ್ರವಾಗಿ ಪ್ರತಿಕ್ರಿಯಿಸಿದ ರೀತಿ ಇದು. 'ವಿವಾದಗಳು ಹೇಗೆ ಪ್ರಚಾರ ತಂತ್ರವಾಗುತ್ತವೆ' ಚಿತ್ರೀಕರಣ ಮುಗಿಯುವುದು ಮುಖ್ಯವಲ್ಲವೇ? ವಿವಾದಗಳನ್ನು ಸೃಷ್ಟಿಸಿಕೊಂಡು ಚಿತ್ರೀಕರಣಕ್ಕೆ ತಡೆ ತಂದುಕೊಳ್ಳುವುದು ಯಾರು ಬಯಸುತ್ತಾರೆ?" ಎಂಬುದು ನಂದಿತಾರ ಮರು ಪ್ರಶ್ನೆ.

'ಫೈರ್' ಚಿತ್ರದ ವಿವಾದದ ಹಿನ್ನೆಲೆ, ನಿರ್ದೇಶಕಿ ದೀಪಾ ಮೆಹ್ತಾ ಅನಿವಾಸಿ ಭಾರತೀಯ ರಾಗಿರುವುದು ಹಾಗೂ ಮೂರನೆಯದಾಗಿ ಹಾಗೂ ಮುಖ್ಯವಾಗಿ ಆಕೆ ಮಹಿಳೆ ಆಗಿರುವುದು - ಈ ಮೂರು ಅಂಶಗಳೇ 'ವಾಟರ್' ಚಿತ್ರೀಕರಣದ ಸುತ್ತ ಅನಗತ್ಯ ವಿವಾದದ 'ಬೆಂಕಿ'ಗೆ ತುಪ್ಪ ಹಾಕಿದೆ ಎಂಬುದು ನಂದಿತಾರ ನಿಲುವು.

ವಾರಣಾಸಿಯಲ್ಲಿ ಹೆಚ್ಚಿನ ಸಂಖ್ಯೆಯ ಪ್ರತಿಭಟನಾಕಾರರೇ ಇರಲಿಲ್ಲ. ಜನಸಾಮಾನ್ಯರ ಬೆಂಬಲ ತಮ್ಮತ್ತಲೇ ಇತ್ತು. ಕೇಂದ್ರ ಸರ್ಕಾರ ಅಂಗೀಕಾರ ನೀಡಿದ್ದ ಚಿತ್ರಕಥೆಗೆ ಕಾನೂನು ಸುವ್ಯವಸ್ಥೆಯ ನೆಪ ಒಡ್ಡಿ ಉತ್ತರ ಪ್ರದೇಶ ಸರ್ಕಾರ ಸಮಸ್ಯೆ ಸೃಷ್ಟಿಸಿತು. ಬಹುವ್ಯಾಪ್ತಿಯ ದೊಡ್ಡ ರಾಜಕೀಯ ಚದುರಂಗದಾಟದ ಫಲ ಈ ವಿವಾದ. ಸ್ಥಳೀಯ ಮಾಧ್ಯಮಗಳ ಅತಿರಂಜಿತ ವರದಿಗಳೂ ಈ ವಿವಾದ ಭುಗಿಲೇಳಲು ಮತ್ತೊಂದು ಕಾರಣ. ಕಾಶಿ ಸಂಸತಿ ರಕ್ಷಾ ಸಮಿತಿಯ ಸದಸ್ಯರು 'ಡೋಮ್‌ರಾಜ್'(ಸತ್ತವರನ್ನು ಅಂತ್ಯಸಂಸ್ಕಾರ ಮಾಡುವ ಜನಾಂಗ) ಪದದ ಉಲ್ಲೇಖಗಳನ್ನು ಚಿತ್ರಕಥೆ ಯಿಂದ ತೆಗೆಯಬೇಕೆಂದು ಕೇಳುತ್ತಿದ್ದರು. ಆದರೆ ಚಿತ್ರಕಥೆಯಲ್ಲಿ ಆ ಪದದ ಉಲ್ಲೇಖವೇ ಇರಲಿಲ್ಲ. ಇದು ಯಾರ ರಹಸ್ಯ ಕಾರ್ಯಕ್ರಮವೋ, ವೈಯಕ್ತಿಕ ಕಾರ್ಯಕ್ರಮವೋ ಸೃಜನಾತ್ಮಕ ಅಭಿವ್ಯಕ್ತಿಗಳಿಗೆ ಅಡ್ಡಿ ಪಡಿಸುವುದು ಎಷ್ಟು ಸರಿ? ನಾಟಕವಾಡುತ್ತಿದ್ದಾಗಲೇ ಸಫ್ದರ್ ಹಶ್ಮಿಯ ಹತ್ಯೆಗೈದಂತಹ ಸಂಸತಿ ಇದು. ಈಗ ಮತ್ತೆ 'ವಾಟರ್' ಸೆಟ್ಟೇರಲು ಹಲವು ತಿಂಗಳುಗಳೇ ಬೇಕಾಗುತ್ತದೆ... ವಾಟರ್ ಚಿತ್ರೀಕರಣಕ್ಕೆಂದು ಕೂದಲು ಕತ್ತರಿಸಿಕೊಂಡಿರುವ ನಂದಿತಾ ಸ್ಪಷ್ಟ ಮಾತುಗಳಲ್ಲಿ ತಮ್ಮ ವಿಚಾರಧಾರೆ ಪ್ರತಿಪಾದಿಸುತ್ತಾ ಹೋದರು.



ಧರ್ಮ ಸಂಸ್ಥಾಪನೆಗೆ ಮುನ್ನುಗ್ಗುತ್ತಿರುವ ರೌಡಿಗಳು

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷತಾಮ್
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ!!

ಸಜ್ಜನರನ್ನು ಕಾಪಾಡುವುದಕ್ಕಾಗಿಯೂ, ಪಾಪಿಗಳಾದವರ ವಿನಾಶಕ್ಕಾಗಿಯೂ ಧರ್ಮವನ್ನು ನೆಲೆಗೊಳಿಸುವುದಕ್ಕಾಗಿಯೂ ನಾನು ಯುಗಯುಗಗಳಲ್ಲಿ ಅವತರಿಸುತ್ತೇನೆ.

ಈ ಮೇಲಿನ ಭಗವದ್ಗೀತೆಯ ಶ್ಲೋಕ ಅಥವಾ ಪದ್ಯವನ್ನೇ ಮೂಲವಾಗಿಟ್ಟುಕೊಂಡು ತೆರೆಗೆ ಅನೇಕ ಚಲನಚಿತ್ರಗಳು ಬಂದಿವೆ. ಆದರೆ ಇತ್ತೀಚೆಗೆ ತೆರೆಗೆ ಬರುತ್ತಿರುವ ಚಿತ್ರಗಳಲ್ಲಿ 'ರೌಡಿ'ಗಳೇ ಯುಗ ಪ್ರವರ್ತಕರಾಗಿ ನಟಿಸುತ್ತಿರುವುದು ವಿಶೇಷ. ಇಂದು ರೌಡಿಗಳೇ ಧರ್ಮದ ಸ್ಥಾಪನೆಗೆ ಮುನ್ನುಗ್ಗುತ್ತ ಇರುವರೇನೋ ಎಂದು ಒಂದು ಕ್ಷಣ ಭಾಸವಾಗುತ್ತದೆ. ಅಂತೆಯೇ ಧರ್ಮದ ಹೆಸರಿನಲ್ಲಿ ಧರ್ಮವನ್ನು ಹಾಳುಗೆಡವುತ್ತಿರುವುದುನ್ನು ಅವರೇ ಎಂದೂ ತಿಳಿಯುತ್ತದೆ. ಒಟ್ಟಿನಲ್ಲಿ ನಮ್ಮ ಜೀವನವೆಲ್ಲಾ 'ರೌಡಿಸಂ'ಮಯವಾಗಿದೆ - ಎಂಬುದನ್ನು ಈ ಚಿತ್ರಗಳು ತಿಳಿಸುತ್ತವೆ.

ಇಂತಹ ಚಿತ್ರಗಳ ತುಂಬಾ ಅಶ್ಲೀಲಾರ್ಥದ ಪದಗಳು ತುಂಬಿ ತುಳುಕುತ್ತಿರುತ್ತವೆ. ಅದಕ್ಕೆ ಸರಿಯಾಗಿ ಅಥವಾ ತಕ್ಕಂತೆ ಸಾಯಿಕುಮಾರ್‌ರಂತಹ ನಟರ ಅಮೋಘ ಅಭಿನಯವಿದ್ದರೆ ಮತ್ತಷ್ಟು ರಸವೂ ತುಂಬುತ್ತದೆ. ಇಂತಹ ಚಿತ್ರಗಳು ಎಷ್ಟರಮಟ್ಟಿಗೆ ಕೀರ್ತಿ ತರುತ್ತವೆ? ನಮ್ಮ ಜನರ ಮಾನಸಿಕ ಮಟ್ಟದ ಅವನತಿಯನ್ನು ತೋರಿಸುವ ಚಿತ್ರಗಳೇನು ಇವು? ಇದೇ ಸಂದರ್ಭದಲ್ಲಿ ಕೆಲವು ನಿರ್ದೇಶಕರು ತಮ್ಮ ಕಾರ್ಯಕ್ಷೇತ್ರದಲ್ಲಿ ತೊಡಗಿ, ಉತ್ತಮ ಚಿತ್ರಗಳನ್ನು, ಸದಭಿರುಚಿಯ ಚಿತ್ರಗಳನ್ನು ತೆರೆಗೆ ನೀಡುತ್ತಲೇ ಬಂದಿದ್ದಾರೆ. ಅವುಗಳಲ್ಲಿ ಕ್ಷಣಮಾತ್ರದ ಸುಖವಿಲ್ಲ. ಶಾಶ್ವತ ಸುಖವಿದೆ. ಇಂತಹ ಚಿತ್ರಗಳು ಆಕರ್ಷಣೀಯವಾಗಿರುವುದಿಲ್ಲ, ಅಂತಃಸತ್ವವಿರುತ್ತದೆ. ಎಲ್ಲೂ ಬೊಗಳೆಯಿರುವುದಿಲ್ಲ.

ಈ ನಿಟ್ಟಿನಲ್ಲಿ ಕನ್ನಡ ಚಿತ್ರರಂಗದ ಹಾದಿ ಯಾವ ಕಡೆಗೆ ಎಂಬುದನ್ನು ತೀರ್ಮಾನಿಸಬೇಕಾದ ಕನ್ನಡಿಗರು, ಒಂದು 'ಪೋಲಿಸ್ ಸ್ಟೋರಿ', 'ಓಂ ನಮಃ ಶಿವಾಯ', 'ಉಪೇಂದ್ರ' ಇತ್ಯಾದಿ ಚಿತ್ರಗಳ ಹಾದಿ, ಮತ್ತೊಂದು 'ಕಾನೂರು ಹೆಗ್ಗಡತಿ, ಅಮೃತ ವರ್ಷಿಣಿ, ನಾಗಮಂಡಲ, ಅಮೆರಿಕಾ ಅಮೆರಿಕಾ, ದೇವೀರಿ ಈ ರೀತಿಯ ಚಿತ್ರಗಳ ಹಾದಿ, ಯಾವ ಹಾದಿಗೆ ಯಾರು ಯಾರು ಇದು ಈಗ ನಮ್ಮ ಮುಂದಿರುವ ಪ್ರಶ್ನೆ.

- ಬಾಲಸುಬ್ರಮಣ್ಯ ಜಿ.

ಓದುಗರ ಪ್ರತಿಕ್ರಿಯೆಗಳು

.... ದೀಪಾ ಮೆಹ್ತಾರವರು ಭಾರತದ ಸಿನಿಮಾ ರಂಗದಲ್ಲಿ ದಕ್ಷ ನಿರ್ದೇಶಕರೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ವಿವಾದಗಳಾಗದಂತೆ ಸರ್ಕಾರ ಸೂಕ್ತ ನೀತಿಯನ್ನು ರೂಪಿಸಬೇಕಾದ ಅಗತ್ಯವಿದೆ. ಇಂತಹ ವಿವಾದಗಳಲ್ಲಿ ರಾಜಕೀಯ ಬಳಕೆಯಾಗುತ್ತಿರುವುದು ತುಂಬಾ ವಿಷಾದನೀಯ ಸಂಗತಿಯಾಗಿದೆ.

- ಕಿರಣ್‌ಕುಮಾರ್

.... ಈಗಾಗಲೇ ಹಿಂದು ಮೂಲಭೂತವಾದಿಗಳಿಂದ ವಿಶ್ವಮಟ್ಟದಲ್ಲಿ ಭಾರತಕ್ಕೆ ಕೆಟ್ಟ ಹೆಸರು ಬಂದಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶ ಹಿಂದಿನಿಂದಲೂ ಸನಾತನ ಧರ್ಮದಲ್ಲಿದೆ. ಕೇಂದ್ರ ಸರ್ಕಾರ ಪರೋಕ್ಷವಾಗಿ ಮತಾಂಧರ ಬೆಂಬಲಕ್ಕಿದೆ ಎಂಬುದು ನಿರ್ವಿವಾದ. ಕೇಂದ್ರ ವಾರ್ತಾ ಸಚಿವ ಅರುಣ ಜೆಟ್ಲೆ 'ವಾಟರ್' ಚಿತ್ರವಿರೋಧಿಗಳ ಬಗ್ಗೆ ಮೃದು ಧೋರಣೆಯಿಂದ ವರ್ತಿಸಿರುವುದು ಸ್ಪಷ್ಟವಾಗಿದೆ ಅಲ್ಲವೇ?

- ಸಿ.ವೀರಭದ್ರಯ್ಯ

ಹಬ್ಬದ ರೀತಿ ನಡೆಯುವ ಕಲ್ಕತ್ತಾದ ಪುಸ್ತಕ ಮೇಳ

ಕಲ್ಕತ್ತಾದ ಪುಸ್ತಕ ಪ್ರದರ್ಶನ ಕಲ್ಕತ್ತಾ ಮತ್ತು ಸುತ್ತಲಿನ ಪ್ರದೇಶದ ನಿವಾಸಿಗಳಿಗೆ ಒಂದು ಹಬ್ಬದಂತೇ ಆಗಿ ಬಿಟ್ಟಿದೆ. ಪ್ರತಿವರ್ಷ ಜನವರಿ ಫೆಬ್ರವರಿ ತಿಂಗಳುಗಳ ಸಮಯದಲ್ಲಿ ಎರಡುವಾರಗಳ ಕಾಲ ನಡೆಯಲಿರುವ ಈ ಪ್ರದರ್ಶನ 1975 ರಿಂದಲೂ ನಡೆಯುತ್ತಲೇ ಬಂದಿದೆ. ಇಲ್ಲಿನ ಜನ ಇದರಲ್ಲಿ ಭಾಗವಹಿಸುವ ರೀತಿಯು ಇದನ್ನು ಒಂದು ಹಬ್ಬವಾಗಿ ಪರಿವರ್ತಿಸುವಲ್ಲಿ ಸಹಾಯಮಾಡಿದೆ.

ಈ ಸಾಲಿನ ಪ್ರದರ್ಶನ ಬೆಳ್ಳಿ ಹಬ್ಬದ ಪ್ರದರ್ಶನ

1975ರಲ್ಲಿ 14 ಪುಸ್ತಕ ಮಾರಾಟಗಾರರ ಗಿಲ್ಡ್ ಈ ಪ್ರದರ್ಶನವನ್ನು ಪ್ರಾರಂಭಿಸಿತು. ಅನಂತರ ಪ್ರತಿವರ್ಷವೂ ಇದು ನಡೆಯುತ್ತ ಗಾತ್ರದಲ್ಲಿ ಬೆಳೆಯುತ್ತ ಬಂದಿದೆ. ಆಡಳಿತದಲ್ಲಿರುವ ಎಡರಂಗ ಸರ್ಕಾರ ಈ ಪ್ರದರ್ಶನಕ್ಕೆ ಹೆಚ್ಚೆಚ್ಚು ಅನುಕೂಲಗಳನ್ನು ನೀಡುತ್ತಿರುವುದೂ ಈ ಪ್ರದರ್ಶನ ಒಂದು ಸಾಂಸ್ಕೃತಿಕ ಹಬ್ಬವಾಗಿ ಬೆಳೆಯಲು ನೆರವು ನೀಡಿದೆ.

ಪುಸ್ತಕ ಪ್ರದರ್ಶನದ ಕಾಲದಲ್ಲಿ ಪ್ರದರ್ಶನದಲ್ಲಿ ಜನ ಜಂಗುಳಿಯೇ ನೆರೆಯುತ್ತದೆ. ಮಳಿಗೆಗಳ ಮುಂದೆ ಸರದಿ ಸಾಲುಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪ್ರವೇಶಕ್ಕಾಗಿ ಕ್ಯೂ ನಿಲ್ಲುವುದರ ಜೊತೆ ಪ್ರಮುಖ ಪ್ರದರ್ಶನ ಮಳಿಗೆಗಳ ಮುಂದೆಯೂ ಕ್ಯೂ ನಿಲ್ಲಬೇಕಾಗುತ್ತದೆ. ಹೆಂಗಸರು ಮಕ್ಕಳಾದಿಯಾಗಿ ಮನೆಯ ಎಲ್ಲರೂ ಈ ಪ್ರದರ್ಶನಕ್ಕೆ ಬರುವುದು ಗಮನಾರ್ಹ ವಿಷಯ.

ಬಂಗಾಳಿಗಳು ಪ್ರದರ್ಶನಕ್ಕೆ ಬರುವುದಲ್ಲದೆ ಪುಸ್ತಕಗಳನ್ನು ಕೊಳ್ಳುತ್ತಾರೆ. ಸಾಮಾನ್ಯ ದಿನಗಳಿಗಿಂತ ಈ ಪ್ರದರ್ಶನದ ಸಮಯದಲ್ಲಿ ರಿಯಾಯಿತಿ ಕಡಿಮೆ ಇದ್ದರೂ ಜನ ಪುಸ್ತಕ ಕೊಳ್ಳುತ್ತಾರೆ.

ಪ್ರದರ್ಶನದ ಗಾತ್ರ

ಈ ಸಾರಿಯ ಪ್ರದರ್ಶನ ಸುಮಾರು 8 ಲಕ್ಷ ಚದುರ ಅಡಿಗಳ ಸ್ಥಳದಲ್ಲಿ ನಡೆಯಿತು. ಎಡರಂಗ ಹೆಚ್ಚುತ್ತಿರುವ ಸ್ಥಳದ ಬೇಡಿಕೆಯನ್ನು ಪೂರೈಸುತ್ತಲೇ ಬಂದಿದೆ. ಕಳೆದ ಸಾಲಿನಲ್ಲಿ 7.5 ಲಕ್ಷ ಚದುರ ಅಡಿ ಜಾಗದಲ್ಲಿ 4048 ಮಳಿಗೆಗಳಿದ್ದರೆ ಈ ಸಾರಿ 5015 ಮಳಿಗೆಗಳಿಗೆ ಜಾಗ ಮಾಡಿಕೊಡಲಾಗಿತ್ತು. ಸುಮಾರು ನಲವತ್ತು ಲಕ್ಷ ಜನ ಕಳೆದ ಸಾಲಿನಲ್ಲಿ ಈ ಪ್ರದರ್ಶನಕ್ಕೆ ಬೇಟಿ ನೀಡಿದ್ದರಂತೆ ಅಂದರೆ ಈ ಪುಸ್ತಕ ಮೇಳದ ಗಾತ್ರದ ಒಂದು ಅಂದಾಜು ಬರಬಹುದು.

ಬಂಗಾಳಿ, ಹಿಂದಿ, ಇಂಗ್ಲೀಷ್ ಪುಸ್ತಕಗಳಲ್ಲದೆ ನೇಪಾಳ ಭಾರತದ ಇತರ ಭಾಷೆಗಳ ಪುಸ್ತಕಗಳು ಇಲ್ಲಿ ಪ್ರದರ್ಶಿತಗೊಂಡಿದ್ದವು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಕನ್ನಡ ಪುಸ್ತಕಗಳು ಪ್ರದರ್ಶನದಲ್ಲಿ ಕಂಡು ಬಂದವು.

ಕಲ್ಕತ್ತಾದಲ್ಲಿ ಒಳ್ಳೆಯ ಪುಸ್ತಕ ಮಳಿಗೆಗಳಿಲ್ಲ ಎಂಬ ಪ್ರಚಾರ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ಪುಸ್ತಕ ಪ್ರದರ್ಶನಕ್ಕೆ ಇಂತಹ ಪ್ರಾಮುಖ್ಯತೆ ಬಂದಿದೆ ಎನ್ನಲಾಗುತ್ತಿದೆ.

ಎಡರಂಗ ಸರ್ಕಾರ ಇಂತಹ ಒಂದು ಜ್ಞಾನ ಪ್ರಸರಣ ಕ್ರಮದಲ್ಲಿ ಪೂರ್ಣ ಪ್ರಮಾಣದ ನೆರವು ಮತ್ತು ಪ್ರೋತ್ಸಾಹ ನೀಡುತ್ತಾ ಬಂದಿರುವುದರಿಂದ ಈ ಪುಸ್ತಕ ಮೇಳ ಹೀಗೆ ಬೆಳೆದು ಬರಲು ಸಾಧ್ಯವಾಗಿದೆ.

ಇಂದು ಈ ಪುಸ್ತಕ ಮೇಳ ವಾರ್ಷಿಕ ಹಬ್ಬದಂತೆ ಬೆಳೆದು ಬಂದು ಕಲ್ಕತ್ತಾ ನಿವಾಸಿಗಳ ವಾರ್ಷಿಕ ಜೀವನದ ಅಂಗವಾಗಿ ಹೋಗಿದೆ. ಇದನ್ನು ಯಾರಾದರೂ ತಡೆಯಬೇಕೆಂದರೂ ತಡೆಯುವುದು ಸಾಧ್ಯವಿಲ್ಲ.

ಪುಸ್ತಕ ಮಳಿಗೆಗಳ ಕೊರತೆಯನ್ನೇ ಆಧಾರವಾರವಾಗಿಟ್ಟುಕೊಂಡು ಒಂದು ವಾರ್ಷಿಕ ಪುಸ್ತಕ ಹಬ್ಬವನ್ನೇ ನಡೆಸುತ್ತಿರುವುದು ಪ್ರತಿಕೂಲವನ್ನು ಅನುಕೂಲವನ್ನಾಗಿ ಪರಿವರ್ತಿಸಿದ ಒಂದು ಉತ್ತಮ ಉದಾಹರಣೆ ಇದು.

- ಜಿ.ಎಸ್. ಮಣಿ.

STATEMENT OF THE OWNERSHP ETC. THE WEEKLU NEWSPAPER 'AIKYARANGA'

Form IV

(See Rule 8)

1. Place of Publication	: 12, 18th Cross, S.R.Nagar, Bangalore-560 027
2. Periodicity of Pbublication	: Weekly
3. Printer's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
4. Publisher's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
5. Editor's Name	: G.N.Nagaraj
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
6. Name and address of individuals who own the Newspaper and partners or shareholders holding more than one percent of the total capital.	: Karnataka State Committeee of Communist Party of India(Marxist) 12, 18th Cross, S.R. Nagar, Bangalore-560 027

I S. Suryanarayana Rao hereby declare that the particulers given above are true to the best of my knowladge and belief

Date:

Sd/-
S.Suryanarayana Rao
Publisher

PRB DECR 319-79/79 AIKYARANGA WEEKLY Reg.No.17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ